**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಬೇಕಾದ ನಮೂನೆ**

| ಕ್ರ.ಸಂ. | **ಅಂಶಗಳು** | **ಕಾರ್ಯದರ್ಶಿಗಳ ಷರಾ** |
|---|---|---|
| 01 | ಜಿಲ್ಲೆಯ ಹೆಸರು | ಉಡುಪಿ ಜಿಲ್ಲೆ |
| 02 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಎಂ.ಮಹೇಶ್ವರ್ ರಾವ್ |
| 03 | ಭೇಟಿಯಾದ/ಪ್ರವಾಸದ ದಿನಾಂಕ | ಅಕ್ಟೋಬರ್ 30, 2019 |
| 04 | ಮುಖ್ಯವಾಗಿ ಗಮನಿಸಿದ ಅಂಶಗಳು | ಜಿಲ್ಲಾ ಪ್ರಗತಿ ಪರಿಶೀಲನೆ, ಮರಳು ಸಮಸ್ಯೆ, ಹಾಗೂ ಇತ್ತೀಚೆಗೆ ಜಿಲ್ಲೆಯಲ್ಲಿ ಸುರಿದ ಮಳೆಯಿಂದ ಹಾನಿಗೊಳಗಾದ ಪ್ರದೇಶಗಳಿಗೆ ಭೇಟಿ ನೀಡಿ ಪರಿಶೀಲಿಸಲಾಯಿತು. ಸದರಿ ವಿಷಯದ ಬಗ್ಗೆ ನಡೆದ ಸಭೆಯ ಸಭಾ ನಡವಳಿಯನ್ನು ಸಹ ಇದರೊಡನೆ ಲಗತ್ತಿಸಿದೆ |

**(ಎಂ.ಮಹೇಶ್ವರ್ ರಾವ್)**
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ಡಾ: ಜಿ. ಕಲ್ಪನ,** ಭಾ.ಆ.ಸೇ.,
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಕರ್ನಾಟಕ ಸರ್ಕಾರದ ಸಚಿವಾಲಯ
ದೂರವಾಣಿ : ಕಛೇರಿ: 22255827
22032589
ಫ್ಯಾಕ್ಸ್ : 080–22252499
ಇಮೇಲ್: prs-yesd@karnataka.gov.in
ysdsec@gmail.com
2ನೇ ಮಹಡಿ, 2ನೇ ಹಂತ
ಬಹುಮಹಡಿಗಳ ಕಟ್ಟಡ, ಬೆಂಗಳೂರು–560001

e-office No: 901917/2019

ಸಂಖ್ಯೆ: ಯುಸಕ್ರೀ 60 ಅಮುಕಾ 2019 ದಿನಾಂಕ:20–11–2019

**ಟಿಪ್ಪಣಿ**

ವಿಷಯ: ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಅಕ್ಟೋಬರ್ ಮಾಹೆಯಲ್ಲಿ ಮೈಸೂರು ಜಿಲ್ಲೆಗೆ ಪ್ರವಾಸ ಕೈಗೊಂಡಿರುವ ಬಗ್ಗೆ ವಿವರ.

*****

| ಕ್ರ.ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ಮೈಸೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಜಿ.ಕಲ್ಪನ |
| 3 | ಭೇಟಿಯಾದ/ ಪ್ರವಾಸದ ದಿನಾಂಕ: | 01–10–2019, 04–10–2019, 05–10–2019, 06–10–2019, 07–10–2019 ಹಾಗೂ 08–10–2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಮುಂದಿನ ಕಂಡಿಕೆಗಳಲ್ಲಿ ವಿವರಿಸಲಾಗಿದೆ. |

ದಿನಾಂಕ:01–10–2019ರಂದು ಮಾನ್ಯ ಮುಖ್ಯ ಮಂತ್ರಿಗಳು ಹಾಗೂ ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರೊಂದಿಗೆ ಮೈಸೂರು ದಸರಾ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಾಯಿತು ಮತ್ತು ಸದರಿ ದಿನದಂದು ನಡೆದ ದಸರಾ ಮಹೋತ್ಸವ ಉದ್ಘಾಟನಾ ಕಾರ್ಯಕ್ರಮ, ದಸರಾ ಕ್ರೀಡಾ ಜ್ಯೋತಿ ಉದ್ಘಾಟನಾ ಕಾರ್ಯಕ್ರಮ, ಶ್ರೀ ಜಿ.ಟಿ. ದೇವೇಗೌಡ, ಮಾನ್ಯ ಶಾಸಕರು, ಚಾಮುಂಡೇಶ್ವರಿ ಕ್ಷೇತ್ರ, ಇವರ ಅಧ್ಯಕ್ಷತೆಯಲ್ಲಿ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ ಹಾಗೂ ಜನರಲ್ ತಿಮ್ಮಯ್ಯ ರಾಷ್ಟ್ರೀಯ ಸಾಹಸ ಅಕಾಡೆಮಿ ವತಿಯಿಂದ ಆಯೋಜಿಸಿರುವ ಸಾಹಸ ಕ್ರೀಡೋತ್ಸವ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಲಾಯಿತು ಹಾಗೂ ನಾಡ ಹಬ್ಬ ದಸರಾ ಮಹೋತ್ಸವದ ವಿವಿಧ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲಾಯಿತು.

28/11/2019

S/- BL 28/11/19

...2

ತದನಂತರ ದಿನಾಂಕ:ದಿನಾಂಕ:04-10-2019ರಿಂದ ದಿನಾಂಕ: 08-10-2019ರವರೆಗೆ ಮಾನ್ಯ ಮುಖ್ಯ ಮಂತ್ರಿಗಳು, ಮಾನ್ಯ ವಸತಿ ಮತ್ತು ಜಿಲ್ಲಾ ಉಸ್ತುವಾರಿ ಸಚಿವರು ಹಾಗೂ ಇತರೆ ಗಣ್ಯ ವ್ಯಕ್ತಿಗಳೊಂದಿಗೆ ರಾಜ್ಯ ದಸರಾ ಕ್ರೀಡಾಕೂಟ ಸಮಾರೋಪದ ಸಮಾರಂಭ ಹಾಗೂ ನಾಡಹಬ್ಬ ಮೈಸೂರು ದಸರಾ 2019ರ ವಿವಿಧ ಕಾರ್ಯಕ್ರಮಗಳಲ್ಲಿ ಮೈಸೂರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ಭಾಗವಹಿಸಲಾಯಿತು.

ಅವಗಾಹನೆಗಾಗಿ ಸಲ್ಲಿಸಿದೆ.

Kalpana G.

(ಡಾ. ಜಿ. ಕಲ್ಪನ)
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ
ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆ

ಸರ್ಕಾರದ ಮುಖ್ಯ ಕಾರ್ಯದರ್ಶಿ,
ವಿಧಾನಸೌಧ,
ಬೆಂಗಳೂರು.

ಪ್ರತಿ:
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ(ಆಡಳಿತ ಸುಧಾರಣೆ), ಸಿ.ಆ.ಸು.ಇಲಾಖೆ, ಬೆಂಗಳೂರು.

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:30.10.2019 ರಂದು ಜರುಗಿದ ಉಡುಪಿ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಜಿಲ್ಲಾಭಿವೃದ್ಧಿ, ಮರಳು ಸಮಸ್ಯೆ ಹಾಗೂ ನೆರೆ ಪರಿಹಾರ ಬಗ್ಗೆ ಪರಿಶೀಲನಾ ಸಭೆಯ ನಡವಳಿ:**

ಸಮಯ: ಪೂರ್ವಾಹ್ನ 10.00 ಗಂಟೆ ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ

ಉಪಸ್ಥಿತರು:

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀಮತಿ ಪ್ರೀತಿ ಗೆಹಲೋಟ್, ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆ
4) ಶ್ರೀಮತಿ ನಿಶಾ ಜೇಮ್ಸ್, ಭಾ.ಪೊ.ಸೇ. ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ
5) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
6) ಶ್ರೀ ಕೆ.ರಾಜು, ಕ.ಆ.ಸೇ(ಕಿ.ಶ್ರೇ). ಸಹಾಯಕ ಕಮೀಷನರು, ಕುಂದಾಪುರ

ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಮೊದಲಿಗೆ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸ್ವಾಗತಿಸುತ್ತಾ, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸುತ್ತಾ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

<u>ಸಭೆಯಲ್ಲಿ ಚರ್ಚಿಸಿದ ಪ್ರಮುಖ ವಿಷಯಗಳು:</u>

- ಉಡುಪಿ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಕುಂದಾಪುರ ತಾಲೂಕಿನಲ್ಲಿ ಹೆಚ್ಚುವರಿ ಮಳೆ ಆಗಿದ್ದು, ಜಿಲ್ಲೆಯಲ್ಲಿ ಒಟ್ಟು 1417 ಹಾನಿ ಪ್ರಕರಣಗಳು ದಾಖಲಾಗಿದ್ದು, 1396 ಪ್ರಕರಣಗಳಿಗೆ ಪರಿಹಾರ ಪಾವತಿಸಲಾಗಿರುತ್ತದೆ. ಹಾಗೂ ಉಳಿಕೆ 21 ಪ್ರಕರಣಗಳ ಪಾವತಿಗೆ ಕ್ರಮವಹಿಸಲಾಗುತ್ತಿರುವ ಬಗ್ಗೆ ತಿಳಿಸಲಾಗಿ, ಈ ಬಗ್ಗೆ ಕೂಡಲೇ ಪಾವತಿಗೆ ಕ್ರಮ ವಹಿಸುವಂತೆ ತಹಶೀಲ್ದಾರರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಹಾಗೂ ಜಿಲ್ಲೆಯಲ್ಲಿ ಪರಿಹಾರ ಪಾವತಿಗೆ ಹೆಚ್ಚಿನ ಅನುದಾನ ಕುರಿತಾಗಿ ಕೇಳಲಾಗಿ, ಜಿಲ್ಲಾಧಿಕಾರಿಯವರ ಪಿಡಿ ಖಾತೆಯಲ್ಲಿ ರೂ.46.29 ಕೋಟಿ ಅನುದಾನ ಲಭ್ಯವಿರುವ ಬಗ್ಗೆ ಜಿಲ್ಲಾಧಿಕಾರಿಯವರ ತಿಳಿಸಿದರು.

  (ಕ್ರಮ: ತಹಶೀಲ್ದಾರರು: ಕಾರ್ಕಳ/ಹೆಬ್ರಿ/ಕುಂದಾಪುರ/ಬೈಂದೂರು/ಬ್ರಹ್ಮಾವರ/ಉಡುಪಿ/ಕಾಪು)

- ಈ ಪ್ರಸಕ್ತ ಸಾಲಿನ ತೀವ್ರ ಮಳೆಯಿಂದಾಗಿ ರಾಷ್ಟ್ರೀಯ ಹೆದ್ದಾರಿಗಳು, ಸೇತುವೆಗಳು, ಕಟ್ಟಡಗಳಿಗೆ ಹಾನಿಯಾಗಿರುವ ಕುರಿತು ಪ್ರಾಕೃತಿಕ ವಿಕೋಪದಿಂದ ಹಾನಿಯಾದ ಮೂಲ ಸೌಕರ್ಯಗಳ ಕಾಮಗಾರಿಗಳಿಗೆ ರೂ.20 ಕೋಟಿ ಅನುದಾನ ಬಿಡುಗಡೆಗೊಂಡಿರುವ ಬಗ್ಗೆ ಜಿಲ್ಲಾಧಿಕಾರಿಯವರು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು.
- 2018-19 ನೇ ಸಾಲಿನ ಕೊಳೆರೋಗಕ್ಕೆ ಸಂಬಂಧಿಸಿದಂತೆ ಪರಿಹಾರ ಪಾವತಿಯಾದ ಪ್ರಕರಣಗಳ ಕುರಿತು ಈವರೆಗೆ ಗ್ರಾಮವಾರು ಪಟ್ಟಿ ಸ್ವೀಕೃತವಾಗದೇ ಇರುವ ಬಗ್ಗೆ ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಇವರು ಸಭೆಯ ಗಮನಕ್ಕೆ ತಂದಾಗ ಈ ಬಗ್ಗೆ Bhoomi Monitoring Cell ಗೆ ಜಿಲ್ಲಾಧಿಕಾರಿಯವರ ಮುಖಾಂತರ ಪತ್ರ ಕಳುಹಿಸುವಂತೆ ಹಾಗೂ ಪ್ರತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- 2019-20 ನೇ ಸಾಲಿನ ಮಳೆಹಾನಿಗೆ ಸಂಬಂಧಿಸಿದಂತೆ 26 ಹೆಕ್ಟೇರು ಬೆಳೆ ಹಾನಿಯಾಗಿರುವ ಬಗ್ಗೆ ಹಾಗೂ ಕೊಳೆ ರೋಗ ಪ್ರಕರಣಗಳ ಕುರಿತು ಸರ್ವೇ ಕಾರ್ಯಕ್ಕೆ ಅನುಮತಿ ನೀಡುವಂತೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ಕೋರಲಾಗಿ ಈ ಬಗ್ಗೆ ಜಿಲ್ಲಾಧಿಕಾರಿಯವರೊಂದಿಗೆ ಚರ್ಚಿಸಿ ವರದಿಯೊಂದಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- ಅಕ್ಟೋಬರ್‌ನಲ್ಲಾದ 2 ನೇ ಹಂತದ ಮಳೆಯಿಂದಾಗಿ ಜಿಲ್ಲೆಯಲ್ಲಿ ಒಟ್ಟು 16 ಹೆಕ್ಟರ್ ನಷ್ಟು ಭತ್ತದ ಬೆಳೆ ಹಾನಿಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ಈ ಹಾನಿಯ ಬಗ್ಗೆ ಪರಿಹಾರವನ್ನು ಪಾವತಿಸಲು ಪರಿಹಾರ ತಂತ್ರಾಂಶದಲ್ಲಿ ಹಾನಿ ವಿವರ ದಾಖಲಿಸಲು ಕ್ರಮ ವಹಿಸುವಂತೆ ಹಾಗೂ ಸಂಪೂರ್ಣ ವರದಿ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು.

( ಕ್ರಮ: ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ, ಉಡುಪಿ )

- ಜಿಲ್ಲೆಯಲ್ಲಿ Geographical Indication ಬೆಳೆಗಳಾದ ಮಟ್ಟು ಗುಳ್ಳ ಮತ್ತು ಉಡುಪಿ ಮಲ್ಲಿಗೆಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಲು ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ಕೋರಲಾಗಿ ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದರು.

( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- ಪ್ರಧಾನ ಮಂತ್ರಿಕ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ 135000 ರೈತರ ನೋಂದಣಿಯಾಗಿರುವ ಬಗ್ಗೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ನೋಂದಣಿಯಾದ ರೈತರ ಪೈಕಿ 5 ಸೆಂಟ್ಸ್ ಗಿಂತ ಕಡಿಮೆ ಜಮೀನು ಹೊಂದಿರುವ ರೈತರ ವಿವರಗಳನ್ನು ಪಡೆದು 10% ರಷ್ಟು ಅರ್ಜಿಗಳನ್ನು ಸ್ಥಳ ತನಿಖೆ ನಡೆಸಿ ಪರಿಶೀಲಿಸಿ ಕ್ರಮ ವಹಿಸುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಉಡುಪಿ )

- ಬೆಳೆಗಳನ್ನು ಉತ್ತಮ ಗುಣಮಟ್ಟದಲ್ಲಿ ಯಾಂತ್ರೀಕರಣ ಮಾಡಿರುವ ಕುರಿತು ಬಾಗಲಕೋಟೆ ಜಿಲ್ಲೆಗೆ ಜಿಲ್ಲಾಧಿಕಾರಿಯವರು ಭೇಟಿ ನೀಡಿ ಪರಿಶೀಲಿಸುವಂತೆ ಹಾಗೂ ಅದರ ಮಾದರಿಯನ್ನು ಉಡುಪಿಯಲ್ಲಿ ಅಳವಡಿಸಲು ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.
- ಪೋಜಣಿ ಪ್ರಗತಿ ಬಗ್ಗೆ ಪರಿಶೀಲಿಸಲಾಗಿ ಸೆಪ್ಟೆಂಬರ್ ಅಂತ್ಯದಲ್ಲಿ ಒಟ್ಟು 9785 ಬಾಕಿ ಪ್ರಕರಣಗಳಿದ್ದು, ಈ ಬಗ್ಗೆ ವಿಚಾರಿಸಲಾಗಿ ಪಹಣಿ ತಿದ್ದುಪಡಿ ಅವಶ್ಯಕತೆಯಿಂದಾಗಿ ಹೆಚ್ಚಿನ ಪ್ರಕರಣಗಳು ಬಾಕಿ ಇವೆ ಎಂದು ಭೂದಾಖಲೆಗಳ ಉಪನಿರ್ದೇಶಕರು ತಿಳಿಸಿದರು. ಈ ಎಲ್ಲಾ ಪ್ರಕರಣಗಳನ್ನು ಮುಂದಿನ ತಿಂಗಳ ಸಭೆಯೊಳಗೆ ವಿಲೇವಾರಿ ಪ್ರಗತಿಯನ್ನು ಸಾಧಿಸುವಂತೆ ಎಲ್ಲಾ ತಹಸೀಲ್ದಾರರಿಗೆ, ಭೂದಾಖಲೆಗಳ ಉಪನಿರ್ದೇಶಕರಿಗೆ ನಿರ್ದೇಶಿಸಿದರು ಹಾಗೂ ಈ ಬಗ್ಗೆ ಜಿಲ್ಲಾಧಿಕಾರಿಯವರು ಖಚಿತಪಡಿಸಿಕೊಳ್ಳುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಭೂದಾಖಲೆಗಳ ಉಪನಿರ್ದೇಶಕರು/ಎಲ್ಲಾ ತಹಸೀಲ್ದಾರರು)

- ಭಾಗಶಃ ಡೀಮ್ಡ್ ಅರಣ್ಯ ವ್ಯಾಪ್ತಿಯಲ್ಲಿರುವ ಕ್ರಶರ್ ಪ್ರದೇಶಗಳನ್ನು ಸರ್ವೇ ಮಾಡಿರುವ ಬಗ್ಗೆ ಅರಣ್ಯ ಇಲಾಖೆ ಮತ್ತು ಸರ್ವೇ ಇಲಾಖೆಯವರಿಗೆ ಕೇಳಲಾಗಿ, ಸರ್ವೇ ಕಾರ್ಯವನ್ನು ಮುಗಿಸಿರುವುದಾಗಿ ಭೂದಾಖಲೆಗಳ ಉಪನಿರ್ದೇಶಕರು ತಿಳಿಸಲಾಗಿ ಕೂಡಲೇ ವರದಿಯನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನಿರ್ದೇಶಿಸಿದರು.

(ಕ್ರಮ: ಭೂದಾಖಲೆಗಳ ಉಪನಿರ್ದೇಶಕರು/ ತಹಶೀಲ್ದಾರ್ ಕಾರ್ಕಳ, ಹೆಬ್ರಿ ಕುಂದಾಪುರ)

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 2 ವಿದ್ಯಾರ್ಥಿ ನಿಲಯಗಳಿಗೆ ಜಮೀನು ಖರೀದಿ ಪ್ರಕ್ರಿಯೆ ಬಾಕಿ ಇರುವ ಬಗ್ಗೆ ಉಪ ನಿರ್ದೇಶಕರು ತಿಳಿಸಲಾಗಿ, ಸದರಿ ಜಮೀನಿನ ಬಗ್ಗೆ ಇರುವ ಸಮಸ್ಯೆಗಳಿಗೆ ಸಂಬಂಧಿಸಿ ಆಯಾ ಇಲಾಖಾಧಿಕಾರಿಯವರೇ ಖುದ್ದು ಸರ್ಕಾರಿ ಅಥವಾ ಖಾಸಗಿ ಜಮೀನುಗಳನ್ನು ಗುರುತಿಸಿ ನಂತರ ತಹಶೀಲ್ದಾರರ ಜೊತೆ ಚರ್ಚೆ ಮಾಡಿ ಪ್ರಸ್ತಾವನೆ ಸಲ್ಲಿಸಲು ಸೂಕ್ತ ಕ್ರಮ ವಹಿಸುವುದು. ಇಲ್ಲವಾದಲ್ಲಿ ಸ್ವಲ್ಪ ಸಮಯದ ವರೆಗೆ ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಲು ಜಿಲ್ಲಾಧಿಕಾರಿಯವರೊಡನೆ ಚರ್ಚಿಸಿ ಸೂಕ್ತ ಕ್ರಮ ವಹಿಸುವಂತೆ ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳಿಗೆ ತರಬೇತಿ (Remedial Teaching) ನೀಡುತ್ತಿರುವ ಬಗ್ಗೆ ವಿಚಾರಿಸಲಾಗಿ, ಸದರಿ ವಿದ್ಯಾರ್ಥಿಗಳಿಗೆ ಖಾಯಂ ಶಿಕ್ಷಕರು ಲಭ್ಯವಿಲ್ಲದ ಕಾರಣ ಖಾಸಗಿ ಶಿಕ್ಷಕರಿಂದ ತರಬೇತಿಯನ್ನು ನೀಡಲಾಗುತ್ತಿರುವ

ಬಗ್ಗೆ ಉಪ ನಿರ್ದೇಶಕರು ತಿಳಿಸಿದರು. ಈ ಬಗ್ಗೆ ಪರಿಶೀಲಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ ನೀಡುವುದು, ಅಲ್ಲಿಯ ಬಯೋಮೆಟ್ರಿಕ್ ವ್ಯವಸ್ಥೆ, ಆಹಾರ, ಆರೋಗ್ಯ ತಪಾಸಣೆ, ವಿದ್ಯಾರ್ಥಿಗಳ ಪರೀಕ್ಷಾ ತೇರ್ಗಡೆ ಫಲಿತಾಂಶ ಹೆಚ್ಚಿಸಲು ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ ಹಾಗೂ ಈ ಬಗ್ಗೆ ಮುತುವರ್ಜಿ ವಹಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಉಡುಪಿ ಜಿಲ್ಲೆಯಲ್ಲಿ ಅಪೌಷ್ಟಿಕ ಮತ್ತು ತೀವ್ರ ಅಪೌಷ್ಟಿಕ ಮಕ್ಕಳು ಇಲ್ಲದಂತೆ ನೋಡಿಕೊಳ್ಳುವುದು. ಸ್ಥಳೀಯ ಮತ್ತು ವಲಸೆ ಮಕ್ಕಳ ಆರೋಗ್ಯದ ಕುರಿತಾದ ಮಾಹಿತಿಯನ್ನು ಪಡೆದು ಅವರಿಗೆ CSR ಅನುದಾನದಿಂದ ಮಕ್ಕಳ ಪೌಷ್ಟಿಕತೆ ಹೆಚ್ಚಿಸಲು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ ಸೂಕ್ತ ಕ್ರಮವಹಿಸುವಂತೆ ಹಾಗೂ ಅಪೌಷ್ಟಿಕ ಮಕ್ಕಳ ಬಗ್ಗೆ ಕಾಳಜಿ ಮಾಡಲು ಜಿಲ್ಲೆಯಲ್ಲಿ ನೋಡಲ್ ಅಧಿಕಾರಿಯವರನ್ನು ನೇಮಿಸಲು ಕ್ರಮವಹಿಸುವಂತೆ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಸಿಬ್ಬಂದಿಯವರ ಕೊರತೆಯಿರುವ ಬಗ್ಗೆ ಸಭೆಯ ಗಮನಕ್ಕೆ ಉಪನಿರ್ದೇಶಕರು ತಂದಾಗ ಈ ಬಗ್ಗೆ ಅರೆ ಸರ್ಕಾರಿ ಪತ್ರವನ್ನು ನಿರ್ದೇಶಕರಿಗೆ ಕಳುಹಿಸಲು ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಜಿಲ್ಲೆಯಲ್ಲಿ 90 Nutrition Rehabilitation Center (**NRC**) ಗಳಿದ್ದು, ಇವುಗಳಲ್ಲಿ 14 ತೀವ್ರ ಅಪೌಷ್ಟಿಕ ಮಕ್ಕಳ [Severe Acute Malnutrition (SAM)] ಪ್ರಕರಣಗಳಿಗೆ ವಿಶೇಷ ಗಮನ ನೀಡಿ ಚಿಕಿತ್ಸೆ ನೀಡಲಾಗುತ್ತಿದೆ. ಹಾಗೂ 2359 ಮಧ್ಯಮ ತೀವ್ರ ಅಪೌಷ್ಟಿಕ ಮಕ್ಕಳ [Moderate Acute Malnutrition (**MAM**)] ಪ್ರಕರಣಗಳು ಪ್ರತೀ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಿಶೇಷ ಕಾಳಜಿಯೊಂದಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಪ್ರಕರಣಗಳು ನಿಗದಿತ ಅವಧಿಯಲ್ಲಿ ಪಟ್ಟಿ ಮಾಡಲಾಗುತ್ತಿದೆ. ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉಸ್ತುವಾರಿ ಕಾರ್ಯದರ್ಶಿಯವರಿಗೆ ತಿಳಿಸಿದರು. ಆರೋಗ್ಯ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಅನುಮೋದನೆಗೆ ಬಾಕಿ ಇದ್ದಲ್ಲಿ ಅದರ ಮಾಹಿತಿಯನ್ನು ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಕಳುಹಿಸುವಂತೆ ಸೂಚಿಸಿದರು.

(ಕ್ರಮ: ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು, ಉಡುಪಿ)

- ಜಿಲ್ಲೆಯಲ್ಲಿ ಅಂಗನವಾಡಿಗಳಲ್ಲಿನ ವಲಸೆ ಬಾಲ ಕಾರ್ಮಿಕರ ಗ್ರೇಡ್-4 ಮತ್ತು ಗ್ರೇಡ್-3 ದತ್ತಾಂಶಗಳನ್ನು ಪಟ್ಟಿ ಮಾಡಿ ಅವರ ವ್ಯಕ್ತಿಚಿತ್ರವನ್ನು ಜಿಲ್ಲಾ ಕಾರ್ಮಿಕ ಅಧಿಕಾರಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ತಯಾರಿಸುವಂತೆ ಹಾಗೂ ಜಿಲ್ಲೆಯಲ್ಲಿ ಪ್ರತಿಯೊಬ್ಬ ಬಾಲ ಕಾರ್ಮಿಕರು ಸಹ ಗುರುತಿಸಲ್ಪಡುವಂತೆ ಕ್ರಮ ವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ/ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು, ಉಡುಪಿ/ಜಿಲ್ಲಾ ಕಾರ್ಮಿಕ ಅಧಿಕಾರಿ, ಉಡುಪಿ)

- ಜಿಲ್ಲೆಯಲ್ಲಿ ದುಡಿಯುವ ಮಹಿಳೆಯರಿಗೆ Working women hostel ನ ಅವಶ್ಯಕತೆ ಬಗ್ಗೆ ಪರಿಶೀಲಿಸಲು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಸಹಕಾರ ಇಲಾಖೆಗೆ ಸಂಬಂಧಿಸಿ ಬೆಳೆ ಸಾಲ ಮನ್ನಾ ಯೋಜನೆಯಡಿ ಬಾಕಿ ಇರುವ ಅರ್ಜಿಗಳು ಹಾಗೂ ಬ್ಯಾಂಕ್ ಗಳಲ್ಲಿನ ಸಾಲ ಮನ್ನಾ ಅರ್ಜಿಗಳ ಶೀಘ್ರ ವಿಲೇವಾರಿಗೆ ಕ್ರಮ ವಹಿಸುವುದು. ಸಹಕಾರ ಇಲಾಖೆಯ ನೋಂದಣಿ ಆದ ಸ್ವಸಹಾಯ ಸಂಘಗಳ ಮುಕ್ತಾಯದ ಅವಧಿ, ನಿರ್ವಹಣೆ, ಅವುಗಳ ಆಡಳಿತಾತ್ಮಕ ವಿಚಾರಣೆ ವಿವರ ಮತ್ತು ನಗದು ಠೇವಣಿ ಬಾಕಿ ಮಾಹಿತಿಯನ್ನು ಬ್ಯಾಂಕ್ ವಾರು ಸಲ್ಲಿಸುವಂತೆ ಹಾಗೂ ಸದ್ರಿ ವಿಷಯದ ಕುರಿತು ಕೈಗೊಳ್ಳಬಹುದಾದ ಕ್ರಮವನ್ನು ಅನುಸರಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸಹಕಾರಿ ಸಂಘಗಳ ಉಪನಿಬಂಧಕರಿಗೆ ಸೂಚಿಸಿದರು.

(ಕ್ರಮ: ಸಹಕಾರಿ ಸಂಘಗಳ ಉಪನಿಬಂಧಕರು)

- ಜಿಲ್ಲೆಯ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಮೂಲಭೂತ ಸೌಕರ್ಯಗಳು, ನಿರ್ವಹಣೆ, ಶಿಕ್ಷಕರ ಬೋಧನೆಯ ಗುಣಮಟ್ಟದ ಕುರಿತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಪ್ರತೀ ಶಾಲೆ/ಕಾಲೇಜು ಮುಖ್ಯಸ್ಥರಿಂದ ಖಾತರಿಪಡಿಸಿಕೊಳ್ಳುವಂತೆ ಹಾಗೂ ರಾಜ್ಯದಲ್ಲಿ ಜಿಲ್ಲೆಯು ಪ್ರಥಮ ಶ್ರೇಯಾಂಕ ಪಡೆಯಲು ಕೈಗೊಳ್ಳಬಹುದಾದ ಮಾರ್ಗಸೂಚಿಗಳನ್ನು ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್ ಇವರು ತೆಗೆದುಕೊಳ್ಳುವಂತೆ ಅಗತ್ಯವಿದ್ದಲ್ಲಿ ಉಸ್ತುವಾರಿ ಕಾರ್ಯದರ್ಶಿಯವರ ಸಹಕಾರವನ್ನು ಪಡೆಯುವಂತೆ ಸೂಚಿಸಲಾಯಿತು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಾಲೇಜುಗಳ ಕಾರ್ಯಕ್ಷಮತೆಯನ್ನು ಸಹ ಗಣನೆಗೆ ತೆಗೆದುಕೊಳ್ಳುವಂತೆ ಖಾಸಗಿ/ ಸರ್ಕಾರಿ ಶಾಲಾ ಕಾಲೇಜುಗಳ ವರದಿಯನ್ನು ಪಡೆಯುವಂತೆ ಸಹ ಸೂಚಿಸಲಾಯಿತು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್ ಉಡುಪಿ/ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಉಡುಪಿ/ ಉಪನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ )

- ಮಕ್ಕಳಿಗೆ ವಿತರಿಸಲಾಗುವ ಪಠ್ಯಪುಸ್ತಕ, ಸಮವಸ್ತ್ರ, ಶೂ ಸಾಕ್ಸ್, ಬೈಸಿಕಲ್ ಗಳ ಗುಣಮಟ್ಟವನ್ನು ಪರಿಶೀಲಿಸಿದ ಬಗ್ಗೆ ಹಾಗೂ ವಿತರಣೆಯಾದ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಖಚಿತಪಡಿಸಿಕೊಳ್ಳುವಂತೆ ಮತ್ತು ಪ್ರತೀ ಶಾಲೆಗೆ ಭೇಟಿ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಜಿಲ್ಲೆಯಲ್ಲಿ Light Fishing ಮಾಡುವವರಿಗೆ ರೂ.5000 ಗಳ ದಂಡವನ್ನು ವಿಧಿಸಲಾಗುತ್ತಿದ್ದು, ಸದರಿ ದಂಡದ ನೋಟೀಸನ್ನು ಗಣನೆಗೆ ತೆಗೆದುಕೊಳ್ಳದೇ Light Fishing ಮಾಡುತ್ತಿದ್ದು, ಸದ್ರಿ ದಂಡದ ಮೊತ್ತವನ್ನು ಹೆಚ್ಚಿಗೆ ಮಾಡುವಂತೆ ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಇವರು ಕೋರಿದರು. ನೋಟೀಸನ್ನು ಗಣನೆಗೆ ತೆಗೆದುಕೊಳ್ಳದೇ ಇರುವವರ ಕೆರೊಸಿನ್ ಸಬ್ಸಿಡಿಯನ್ನು ರದ್ದುಪಡಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- Light Fishing ಗಾಗಿ ಬೋಟ್ ನಲ್ಲಿ ಜನರೇಟರ್ ತೆಗೆದುಕೊಂಡು ಹೋಗುತ್ತಿದ್ದು, Light Fishing ಬ್ಯಾನ್ ಆಗಿದ್ದು, ಜನರೇಟರ್ ಗಳನ್ನು ಬಂದರಿನ ಒಳಗಡೆ ತೆಗೆದುಕೊಂಡು ಹೋಗದಂತೆ ದ್ವಾರದಲ್ಲಿಯೇ ಪರಿಶೀಲನೆಗೆ ಒಳಪಡಿಸಿವುದು ಅಗತ್ಯವಾಗಿದೆ ಎಂದು ಮೀನುಗಾರಿಕಾ ಉಪನಿರ್ದೇಶಕರು ಕೋರಿದಾಗ ಅಗತ್ಯ ನೆರವು ನೀಡುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

(ಕ್ರಮ: ಪೊಲೀಸ್ ಅಧೀಕ್ಷಕರು, ಉಡುಪಿ/ ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ /ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- ಸಮುದ್ರಕ್ಕೆ ಹೋಗುವ ಹಡಗುಗಳು ಪರವಾನಿಗೆ ಸಂಬಂಧಿಸಿ 476 ಅರ್ಜಿಗಳು ಬಾಕಿ ಇದ್ದು, ಈ ಹಡಗುಗಳಿಗೆ ನೀಡಲಾಗುವ ಪರವಾನಿಗೆ ಕೇಂದ್ರ ಕಛೇರಿಯಿಂದ ಅನುಮೋದನೆ ಆಗಬೇಕಾಗಿದ್ದು, MMIS ನಂಬ್ರವು ಸಕ್ರೀಯಗೊಳಿಸದೇ ಪರವಾನಿಗೆ ಪ್ರಕ್ರಿಯೆ ನಡೆಯುವುದಿಲ್ಲ. ಆದುದರಿಂದ MMIS ನಂಬ್ರವನ್ನು ಸಕ್ರೀಯಗೊಳಿಸುವಂತೆ ಮತ್ತು ಪ್ರತಿಯೊಂದು ಚಿಕ್ಕ ಹಾಗೂ ಮಧ್ಯಮ ಹಡಗುಗಳಿಗೆ Boat Tracking System ನ್ನು ಅಳವಡಿಸಲು ಕೇಂದ್ರ ಕಛೇರಿಗೆ ಪತ್ರ ಬರೆಯಲಾಗಿದ್ದು, ಈ ಬಗ್ಗೆ ಈವರೆಗೆ ಅನುಮೋದನೆಗೆ ದೊರೆತಿರುವುದಿಲ್ಲ. ಈ ಅನುಮೋದನೆ ದೊರಕಿದ್ದಲ್ಲಿ ಸಮುದ್ರಕ್ಕೆ ಹೋಗುವ ಚಿಕ್ಕ ಹಾಗೂ ಮಧ್ಯಮ ಪ್ರಮಾಣದ ಹಡಗುಗಳ ಪತ್ತೆ ಹಚ್ಚುವುದು ಸುಲಭವಾಗುವ ಹಿನ್ನಲೆಯಲ್ಲಿ ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಇವರು ಕೋರಿದರು. ಈ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ವಿವರವನ್ನು ಸಲ್ಲಿಸುವಂತೆ ಸೂಚಿಸಿದರು.

(ಕ್ರಮ: ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- ಜಿಲ್ಲೆಯಲ್ಲಿ ರೇಶ್ಮೆ ಇಲಾಖೆಯ ಫಾರ್ಮ್ ಗಳು ಇರುವ ಬಗ್ಗೆ ಪರಿಶೀಲಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- 2018-19 ನೇ ಸಾಲಿನ ಬರ ನಿರ್ವಹಣೆಗಾಗಿ ಟ್ಯಾಂಕರ್ ಮೂಲಕ ಸರಬರಾಜು ಮಾಡಲಾದ ನೀರಿನ ಬಿಲ್ಲುಗಳನ್ನು ಈವರೆಗೆ ಪಾವತಿಸದಿರುವ ದೂರುಗಳು ಸ್ವೀಕೃತವಾಗುತ್ತಿದ್ದು, ತಕ್ಷಣ ಪರಿಹರಿಸುವಂತೆ ಹಾಗೂ ಕಳೆದ ಬಾರಿ ನೀರಿನ ಸಮಸ್ಯೆಗಳಿದ್ದ ಕಡೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಜಿಲ್ಲಾಧಿಕಾರಿಯವರು ಕಾರ್ಯಕಾರಿ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಇವರಿಗೆ ಸೂಚಿಸಿದರು. ಮುಂದಿನ ಬರ ನಿರ್ವಹಣೆಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುವಂತೆ ಜಿಲ್ಲಾಧಿಕಾರಿಯವರು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ ಇವರಿಗೆ ಸೂಚಿಸಿದರು. ಹಾಗೂ ನಗರಾಭಿವೃದ್ಧಿ ಇಲಾಖೆಯ ವಸತಿ ಯೋಜನೆಗೆ ಸಂಬಂಧಿಸಿ ಅನುದಾನ ಬಿಡುಗಡೆಯಾಗದಿರುವ ಬಗ್ಗೆ ಯೋಜನಾ ನಿರ್ದೇಶಕರು ತಿಳಿಸಲಾಗಿ ಈ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರಿಂದ KUIDFC ಗೆ ಅರೆ ಸರ್ಕಾರಿ ಪತ್ರವನ್ನು ಬರೆಯಲು ಸೂಚಿಸಲಾಯಿತು.

(ಕ್ರಮ:ಕಾರ್ಯಕಾರಿ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಜತಾದ್ರಿ, ಮಣಿಪಾಲ/ ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಉಡುಪಿ)

- ಉದ್ಯೋಗ ಖಾತ್ರಿ ಯೋಜನೆಯಡಿ ತೋಟಗಾರಿಕೆ, ಕೃಷಿ, ಜಲಾನಯನ ಇಲಾಖೆಗಳ ಅಭಿವೃದ್ಧಿಗಾಗಿ NREG ಅನುದಾನವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದು ಹಾಗೂ ಜಲಸೌಕರ್ಯಗಳು, ಒಳನಾಡು ಮೀನುಗಾರಿಕೆ ಮುಂತಾದ ಚಟುವಟಿಕೆಗಳನ್ನು ಬೆಂಬಲಿಸಲು ಸೂಕ್ತ ಕ್ರಮವಹಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಪಡುಬಿದ್ರೆಯಲ್ಲಿ Blue Flag Beach ರಚನೆಗೆ ಸಂಬಂಧಿಸಿ Architecture Plan ನನ್ನು ಮಣಿಪಾಲ್ ನ ಮಾಹೆಯವರ ಸಹಕಾರದೊಂದಿಗೆ ಪಡೆದು ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- ಪ್ರವಾಸೀ ಟ್ಯಾಕ್ಸಿ ಯೋಜನೆಯಡಿ ಜಿಲ್ಲೆಗೆ 56 ಅರ್ಜಿಗಳು ಸ್ವೀಕೃತವಾಗಿದ್ದು ಒಟ್ಟು 8 ಗುರಿಗಳಿವೆ. ಅನುದಾನ ಬಿಡುಗಡೆಯಾದ ತಕ್ಷಣ ಟ್ಯಾಕ್ಸಿ ವಿತರಣೆಗೆ ಕ್ರಮವಹಿಸುವುದಾಗಿ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಅನುದಾನ ಬಿಡುಗಡೆಗೆ ಸಂಬಂಧಿಸಿ ಕೇಂದ್ರ ಕಛೇರಿಗೆ ಪತ್ರ ಬರೆದಲ್ಲಿ ಸದ್ರಿ ಮಾಹಿತಿಯನ್ನು ಒದಗಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- ಕರ್ನಾಟಕ ದರ್ಶನಕ್ಕೆ 572 ವಿದ್ಯಾರ್ಥಿಗಳ ಪಟ್ಟಿಯನ್ನು Karnataka Tourism Infrastructure Limited ಇವರಿಗೆ ಈಗಾಗಲೇ ಸಲ್ಲಿಸಲಾಗಿರುವ ಬಗ್ಗೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಎಲ್ಲಾ ಟ್ರಾವೆಲ್ ಏಜೆಂಟ್ ಗಳನ್ನು ಒಳಗೊಂಡಂತೆ ಟ್ರಾವೆಲ್ ಎಕ್ಸ್ ಪೋ ವರ್ಕ್ ಶಾಪ್ ಆಯೋಜಿಸುವುದರಿಂದ ಪ್ರವಾಸೋದ್ಯಮ ಬೆಳವಣಿಗೆ ಸಾಧ್ಯವಾಗುತ್ತದೆ. ಎಲ್ಲಾ ಪಾಲುದಾರರು ಭಾಗಿಯಾದಲ್ಲಿ ಸರಿಯಾದ ಯೋಜನೆ ಹಾಕಿಕೊಳ್ಳಲು ಸಾಧ್ಯವಾಗುವುದರಿಂದ ವರ್ಕ್ ಶಾಪ್ ಆಯೋಜಿಸಲು ಕ್ರಮವಹಿಸುವಂತೆ ಹಾಗೂ ಪಡುಕೆರೆ ಬೀಚ್ ಅಭಿವೃದ್ಧಿ ಪಡಿಸಿ ಸರ್ಫಿಂಗ್ ಗೆ ಉತ್ತೇಜನ ನೀಡಲು ಕ್ರಮವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- Karnataka Tourism Vision Group (KTVG) ಶಿಫಾರಸ್ಸುಗಳಡಿ ಒಟ್ಟು 3 ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲು ಕೇಂದ್ರ ಕಚೇರಿಯಿಂದ ಅನುಮೋದನೆ ದೊರೆತಿದ್ದು ಅಂದಾಜು ಪಟ್ಟಿ ತಯಾರಿಸಲು ಬಾಕಿ ಇರುವ ಬಗ್ಗೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಸದ್ರಿ ಅಂದಾಜು ಪಟ್ಟಿಯನ್ನು ಶೀಘ್ರವಾಗಿ ತಯಾರಿಸಿ ಕೊಡುವಂತೆ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆಗೆ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ)

- ಕೈಗಾರಿಕಾ ವಸಾಹತುಗಳ ಸ್ಥಾಪನೆಗೆ ಸಂಬಂಧಿಸಿ ಸೂಕ್ತ ಜಾಗವನ್ನು ಗುರುತಿಸುವಂತೆ ಸಹಾಯಕ ಕಮೀಷನರ್, ಕುಂದಾಪುರ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ಕಮೀಷನರ್, ಕುಂದಾಪುರ)

**(ಎಂ.ಮಹೇಶ್ವರ್ ರಾವ್)**
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿನಾಂಕ: 02.11 2019 ರಂದು ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಹಾಗೂ ಸರಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಇವರ ಅಧ್ಯಕ್ಷತೆಯಲ್ಲಿ ಜರುಗಿದ ವಿಡಿಯೋ ಸಂವಾದ ಸಭೆಯ ನಡುವಳಿಕೆಗಳು**

**ಉಪಸ್ಥಿತಿ:**

| | | |
|---|---|---|
| 1. | ಶ್ರೀ ಗೌರವ ಗುಪ್ತಾ, ಭಾ.ಆ.ಸೇ., ಸರಕಾರಧ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ, ಬೆಂಗಳೂರು | ಅಧ್ಯಕ್ಷತೆ |
| 2. | ಶ್ರೀಮತಿ ಎಂ.ದೀಪ, ಭಾ.ಆ.ಸೇ., ಜಿಲ್ಲಾಧಿಕಾರಿಗಳು, ಧಾರವಾಡ | |
| 3. | ಡಾ.ಬಿ.ಸಿ.ಸತೀಶ, ಭಾ.ಆ.ಸೇ, ಸಿ.ಇ.ಓ., ಜಿಲ್ಲಾ ಪಂಚಾಯತ್, ಧಾರವಾಡ | |
| 4. | ಅಪರ ಜಿಲ್ಲಾಧಿಕಾರಿಗಳು, ಧಾರವಾಡ | |
| 5. | ಜಂಟಿ ನಿರ್ದೇಶಕರು, ಆಹಾರ ಮತ್ತು ನಾಗರಿಕ ಪೂರೈಕೆ | |
| 6. | ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಧಾರವಾಡ | |
| 7. | ಜಂಟಿ ನಿರ್ದೇಶಕರು, ಕೈಗಾರಿಕಾ ಇಲಾಖೆ, ಧಾರವಾಡ | |
| 8. | ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ | |
| 9. | ಕಾರ್ಯನಿರ್ವಾಹಕ ಅಭಿಯಂತರು, KUWS&DB, ಧಾರವಾಡ | |
| 10. | ಕಾರ್ಯನಿರ್ವಾಹಕ ಅಭಿಯಂತರು, ಹೆಸ್ಕಾಂ, ಧಾರವಾಡ | |
| 11. | ಕಾರ್ಯನಿರ್ವಾಹ ಅಭಿಯಂತರು, ಗ್ರಾಮೀಣ ನೀರು ಪೂರೈಕೆ | |
| 12. | ಜಿಲ್ಲಾ ವ್ಯವಸ್ಥಾಪಕರು, ಅಂಭೇಡ್ಕರ್ ಅಭಿವೃದ್ಧಿ ನಿಗಮ | |
| 13. | ಉಪ ನಿರ್ದೇಶಕರು, ಪದವಿ ಪೂರ್ಣ ಇಲಾಖೆ | |
| 14. | ಪ್ರಾದೇಶಿಕ ಸಾರಿಗೆ ಅಧಿಕಾರಿಗಳು, ಹುಬ್ಬಳ್ಳಿ | |
| 15. | ಕಾಲೇಜು ಶಿಕ್ಷಣ ಇಲಾಖೆಯ ಪ್ರತಿನಿಧಿ – ಪತ್ರಾಂಕಿತ ವ್ಯವಸ್ಥಾಪಕರು | |
| 16. | ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಧಾರವಾಡ | |
| 17. | ಜಿಲ್ಲಾ ನೋಂದಣಿ ಅಧಿಕಾರಿಗಳು, ಧಾರವಾಡ | |
| 18. | ಜಿಲ್ಲಾ ಅಲ್ಪ ಸಂಖ್ಯಾತರ ಅಧಿಕಾರಿಗಳು, ಧಾರವಾಡ | |
| 19. | ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಧಾರವಾಡ | |
| 20. | ಕಾರ್ಯನಿರ್ವಾಹಕ ಅಭಿಯಂತರು, ಕೊಳಚೆ ನಿರ್ಮೂಲನಾ ಮಂಡಳಿ | |
| 21. | ಕಾರ್ಯನಿರ್ವಾಹಕ ಅಭಿಯಂತರು, ಪಂಚಾಯತ ರಾಜ್ ಮತ್ತು ಗ್ರಾಮೀಣ ಅಭಿವೃದ್ಧಿ ಇಲಾಖೆ | |
| 22. | ವಿಶೇಷ ಭೂಸ್ವಾದೀನಾಧಿಕಾರಿಗಳು, ರಾ.ಹೆ. 4, ಧಾರವಾಡ | |
| 23. | ಸಹಾಯಕ ಕಾರ್ಯನಿರ್ವಾಹಕ ಅಭಿಯಂತರು, ರಾಷ್ಟ್ರೀಯ ಹೆದ್ದಾರಿ ವಿಭಾಗ, ಹುಬ್ಬಳ್ಳಿ | |
| 24. | ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ | |
| 25. | ಜಿಲ್ಲಾ ಕೌಶಲ್ಯ ಅಭಿವೃದ್ಧಿ ಅಧಿಕಾರಿಗಳು | |
| 26. | ಉಪ ಅರಣ್ಯ ಸಂರಕ್ಷಣ ಅಧಿಕಾರಿಗಳು (ಸಾಮಾಜಿಕ ಅರಣ್ಯ) | |
| 27. | ಉಪನಿರ್ದೇಶಕರು, ಕೃಷಿ ಉತ್ಪನ್ನಗಳ ಮಾರುಕಟ್ಟೆ, ಧಾರವಾಡ | |
| 28. | ಸಹಾಯಕ ಕಾರ್ಯನಿರ್ವಾಹ ಅಧಿಕಾರಿಗಳು, ಲೋಕೋಪಯೋಗಿ, ಧಾರವಾಡ | |

1. ಆರಂಭದಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಗಳನ್ನು ಉದ್ದೇಶಿಸಿ ಅವರವರ ಪರಿಚಯವನ್ನು ಮಾಡಲು ಸೂಚಿಸಿದರು. ಆ ಮೇರೆಗೆ್ಲ ಎಲ್ಲಾ ಅಧಿಕಾರಿಗಳು ತಮ್ಮ ಪರಿಚಯವನ್ನು ಮಾಡಿಕೊಂಡ ನಂತರ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಜಿಲ್ಲಾಧಿಕಾರಿಗಳಿಗೆ ಜಿಲ್ಲೆಯಲ್ಲಿ ಅತಿವೃಷ್ಟಿ ಹಾನಿ ಹಾಗೂ ಜಿಲ್ಲೆಗೆ ಸಂಬಂಧಿಸಿದ ಇತರೇ ವಿಷಯಗಳ ಕುರಿತು ವಿವರಿಸುವಂತೆ ಸೂಚಿಸಿದರು.

**ಮಳೆಯಿಂದ/ಪ್ರವಾಹದಿಂದ ಆದ ಹಾನಿ:**

2. ಜಿಲ್ಲಾಧಿಕಾರಿಗಳು ಮಾತನಾಡುತ್ತ ಜಿಲ್ಲೆಯಲ್ಲಿ ಸತತವಾಗಿ ಸಾಕಷ್ಟು ಮಳೆಯಾಗಿ ಜಿಲ್ಲೆಯಲ್ಲಿ ಪ್ರವಾಹದಂತ ಪರಿಸ್ಥಿತಿ ಉಂಟಾಗಿತ್ತು. ಆಗಸ್ಟ್ ತಿಂಗಳಲ್ಲಿ ಆಗಬೇಕಾದ 109 ಮಿ.ಮಿ. ವಾಡಿಕೆಯ ಮಳೆಗಿಂತ 274 ಪ್ರತಿಶತಕ್ಕಿಂತ ಹೆಚ್ಚು ಅಂದರೆ 364 ಮಿ.ಮಿ. ಮಳೆಯಾಗಿದ್ದು, ಈ ತೆರನಾದ ಮಳೆ ಕಳೆದ 100 ರಿಂದ 115 ವರ್ಷಗಳಲ್ಲಿ ಆಗಿರುವುದಿಲ್ಲವೆಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಈ ರೀತಿ ಆದ ಅತೀವ ಮಳೆಯಿಂದಾಗಿ ಜಿಲ್ಲೆಯ 5 ಜನರು ಮೃತರಾಗಿದ್ದು ಹಾಗೂ 212 ಜಾನುವಾರುಗಳ ಪ್ರಾಣ ಹಾನಿಯಾಗಿರುವುದಾಗಿ ತಿಳಿಸುತ್ತಾ, ಮೃತರ ಕುಟುಂಬದವರಿಗೆ ರೂ.5.00 ಲಕ್ಷಗಳ ಪರಿಹಾರ ಹಾಗೂ ಜಾನವಾರುಗಳ ಪ್ರಾಣ ಹಾನಿ ಕುರಿತು ರೂ.12.00 ಲಕ್ಷಗಳ ಪರಿಹಾರವನ್ನು ಎನ್.ಡಿ.ಆರ್.ಎಫ್. ಮಾರ್ಗಸೂಚಿಯನ್ವಯ ಮುಖ್ಯ ಮಂತ್ರಿಗಳ ಪರಿಹಾರ ನಿಧಿಯಿಂದ ವಿತರಿಸಲಾಗಿರುವುದಾಗಿ ತಿಳಿಸಿದರು.

3. ಈ ರೀತಿಯ ಮಳೆಯಿಂದಾಗಿ ಪ್ರಮುಖವಾಗಿ ಮನೆಗಳಿಗೆ ಹಾನಿಯಾಗಿದ್ದು ಹಾಗೂ ಒಂದು ವಾರದವೆರಗೆ ಸತತವಾಗಿ ಮಳೆಯಾದ ಕಾರಣ, ಆರಂಭದಲ್ಲಿ ಮಳೆಯಾಗುತ್ತಿದ್ದಂತೆ ಮಳೆಯಿಂದ ಹಾನಿಯಾದ ಮನೆಗಳ ಕುರಿತು ಎನ್.ಡಿ.ಆರ್.ಎಫ್. ಮಾರ್ಗಸೂಚಿಯನ್ವಯ 15% ಹಾನಿಯಾದ ಮನೆಗಳಿಗೆ ರೂ.5,200/- ಗಳನ್ನು ಹಾಗೂ 75% ದಿಂದ 90% ಕ್ಕಿಂತಲೂ ಹೆಚ್ಚು ಹಾನಿಯಾದ ಮನೆಗಳಿಗೆ ರೂ.95,000/- ಪರಿಹಾರವನ್ನು ಒದಗಿಸಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

4. ಈ ರೀತಿ ಪರಿಹಾರ ಜಿಲ್ಲಾಮಟ್ಟದಿಂದ ವಿತರಿಸುವಂತೆ ಸರಕಾರದಿಂದ ಆದೇಶ ಹೊರಡಿಸಲಾಗಿದ್ದು, ಹಾನಿಗೊಳಗಾದ ಮನೆಗಳನ್ನು ಎ, ಬಿ ಮತ್ತು ಸಿ ಅಂತಾ ಮೂರು ವರ್ಗಗಳಲ್ಲಿ ವರ್ಗೀಕರಿಸಿದೆ. 75% ಕ್ಕಿಂತ ಹೆಚ್ಚಿಗೆ ಹಾನಿಗೊಳಗಾದ ಮನೆಗಳನ್ನು 'ಎ' ಎಂದು ವರ್ಗೀಕರಿಸಿ ರೂ.5.00 ಲಕ್ಷಗಳ ಪರಿಹಾರ, 25% ರಿಂದ 75% ಹಾನಿಗೊಳಗಾದ ಮನೆಗಳನ್ನು 'ಬ' ಎಂದು ವರ್ಗೀಕರಿಸಿ ರೂ.1.00 ಲಕ್ಷಗಳ ಪರಿಹಾರ ಹಾಗೂ 25% ಕ್ಕಿಂತ ಕಡಿಮೆ ಹಾನಿಗೊಳಗಾದ ಮನೆಗಳನ್ನು 'ಸಿ' ಅಂತಾ ವರ್ಗೀಕರಿಸಿ ರೂ.25,000/- ಪರಿಹಾರ ನಿಗಧಿಪಡಿಸಲಾಗಿದೆ. ಹಾಗೂ ತದನಂತರ 'ಅ' ಮತ್ತು 'ಬ' ವರ್ಗದ ಮನೆಗಳ ಹಾನಿ ಕುರಿತು ಪರಿಹಾರವನ್ನು ಸಮನಾಗಿ ರೂ.5.00 ಲಕ್ಷಕ್ಕೆ ನಿಗಿಧಿಪಡಿಸಲಾಗಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. ಹಾಗೂ ಶೇಕಡಾ 15 ಕ್ಕಿಂತಾ ಹೆಚ್ಚಿಗೆ ಹಾನಿಯಾದ ಮನೆಗಳ ಮಾಲೀಕರಿಗೆ ರೂ.25,000/- ರಿಂದ ರೂ.50,000/- ಪರಿಹಾರ ಹೆಚ್ಚಿಸಿರುವುದಾಗಿ ತಿಳಿಸಿದರು.

5. ಜಿಲ್ಲೆಯಲ್ಲಿ ಒಟ್ಟು 17,000 ಮನೆಗಳು ಹಾನಿಗೊಳಗಾಗಿದ್ದು, ಆ ಪೈಕಿ 15,411 ಮನೆಗಳನ್ನು 'ಸಿ' ವರ್ಗದಲ್ಲಿ, 1,701 ಮನೆಗಳನ್ನು 'ಬ' ವರ್ಗದಲ್ಲಿ ಹಾಗೂ 118 ಮನೆಗಳನ್ನು 'ಅ' ವರ್ಗದಲ್ಲಿ ವರ್ಗೀಕರಿಸಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

6. ಆರಂಭದಲ್ಲಿ ಈ ಎಲ್ಲಾ ವರ್ಗಗಳ ಮನೆ ಹಾನಿ ಕುರಿತು ಪರಿಹಾರವನ್ನು ಎನ್.ಡಿ.ಆರ್.ಎಫ್. ಮಾರ್ಗಸೂಚಿಯಂತೆ ವಿತರಿಸಲಾಗಿದ್ದು, ಸರಕಾರದ ಆದೇಶ ಬಂದ ನಂತರ ಮನೆಗಳ ಹಾನಿ ಕುರಿತು ಪರಿಹಾರ ವಿತರಣಾ ಕಾರ್ಯವನ್ನು ರಾಜೀವ ಗಾಂಧಿ ಗ್ರಾಮೀಣ ವಸತಿ ನಿಗಮಕ್ಕೆ (RGRHCL) ವಹಿಸಲಾಗಿದ್ದು, ಸದರಿ ನಿಗಮವು ಪರಿಹಾರ ವಿತರಣೆ ಕುರಿತು ಸಾಫ್ಟ್‌ವೇರನ್ನು ತಯಾರಿಸಿದ್ದು, ಆ ಮೇರೆಗೆ ಹಾನಿಗೊಳಗಾದ ಎಲ್ಲಾ ವರ್ಗಗಳ ಮನೆಗಳ ವಿವರಗಳನ್ನು ಪೋರ್ಟಲ್‌ನಲ್ಲಿ ದಾಖಲಿಸಿದ ನಂತರ ಪರಿಹಾರವನ್ನು ನೇರವಾಗಿ ಫಲಾನುಭವಿಗಳ ಬ್ಯಾಂಕ್ ಖಾತೆಗಳಿಗೆ ವರ್ಗಾಯಿಸಲಾಗುತ್ತಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. ಹಾಗೂ ಹಾನಿಗೊಳಗಾದ ಮನೆಗಳ ಮಾಹಿತಿಯನ್ನು ಗಣಕಯಂತ್ರದಲ್ಲಿ ದಾಖಲಿಸಿದ ನಂತರ ತಹಶೀಲದಾರರುಗಳು ಜಿಯೊ ಟ್ಯಾಗ ಮಾಡಿ, ಮಾಹಿತಿಗಳ

ಆಡಿಟ್ ಮಾಡಿ ಅನುಮೋದನೆ ನೀಡಿ ಜಿಲ್ಲಾಧಿಕಾರಿಗಳ ಅನುಮೋದನೆಗೆ ಸಲ್ಲಿಸಲಾಗುತ್ತಿದ್ದು, ತದನಂತರ ಜಿಲ್ಲಾಧಿಕಾರಿಗಳ ಅನುಮೋದನೆಯ ನಂತರ ಪೋರ್ಟಲ್ ಮುಖಾಂತರ ಪ್ರತಿಯೊಬ್ಬ ಫಲಾನುಭವಿಗಳ ಬ್ಯಾಂಕ್ ಖಾತೆಗೆ ಪರಿಹಾರ ಜಮೆಯಾಗುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

7. 'ಸಿ' ವರ್ಗದಲ್ಲಿ ಹಾನಿಗೊಳಗಾದ ಮನೆಗಳ ಸಂಖ್ಯೆ ಹೆಚ್ಚಾಗಿರುವುದರಿಂದ ಅವುಗಳ ಪರಿಹಾರ ಜಿಲ್ಲಾಧಿಕಾರಿಗಳೇ ಆರ್.ಟಿ.ಜಿ.ಎಸ್. ಮೂಲಕ ವಿತರಿಸಲು ಸರಕಾರದಿಂದ ಆದೇಶವಾದ ಪ್ರಯುಕ್ತ ಈ ಪರಿಹಾರವನ್ನು ಪೂರ್ಣವಾಗಿ ವಿತರಿಸಲು ಕ್ರಮ ಕೈಕೊಳ್ಳಲಾಗಿದೆ ಎಂದು ಜಿಲ್ಲಾಧಿಕಾರಿಗಳು ತಿಳಿಸಿದರು. 'ಅ' ಮತ್ತು 'ಬ' ವರ್ಗದಲ್ಲಿ ಹಾನಿಗೊಳಗಾದ ಮನೆಗಳ ಪರಿಹಾರ ವಿತರಣೆ ಕುರಿತು ತಹಶೀಲದಾರರಿಂದ ಹಾಗೂ ಜಿಲ್ಲಾಧಿಕಾರಿಗಳಿಂದ ಮಾಡಬೇಕಾದ ದೃಢೀಕರಣವನ್ನು ಮಾಡಿ RGRHCL ಪೋರ್ಟಲ್‌ನಲ್ಲಿ ದಾಖಲಿಸಲಾಗಿದ್ದು, ಈ ವರ್ಗದ ಫಲಾನುಭವಿಗಳಿಗೆ ನೇರವಾಗಿ ಪರಿಹಾರ ವಿತರಣೆಗೆ ಎಲ್ಲಾ ವ್ಯವಸ್ಥೆಯನ್ನು ಮಾಡಲಾಗಿರುವುದಾಗಿ ಹಾಗೂ ಪೋರ್ಟಲ್‌ನಲ್ಲಿ ತಾಂತ್ರಿಕ ಕಾರಣಕ್ಕಾಗಿ 97 ಪ್ರಕರಣಗಳಲ್ಲಿ ಹಾಗೂ 111 ಅನಧಿಕೃತ ಮನೆಗಳ ಪ್ರಕರಣಗಳಲ್ಲಿ ಪರಿಹಾರ ವಿತರಣೆ ವಿಳಂಬವಾಗಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. ಈ ಎರಡೂ ಪ್ರಕರಣಗಳಲ್ಲೂ ಸಹ ಪರಿಹಾರ ವಿತರಿಸಲು ಈಗ ಕ್ರಮ ಜರುಗಿಸಲಾಗಿದೆ ಎಂದು ಸಹ ಅವರು ತಿಳಿಸಿದರು. ಈ ರೀತಿ ಎಲ್ಲಾ ವರ್ಗಗಳ ಮನೆಗಳ ಹಾನಿ ಕುರಿತು ಪರಿಹಾರ ಒದಗಿಸಲು ಎಲ್ಲಾ ಕ್ರಮವನ್ನು ತೆಗೆದುಕೊಳ್ಳಲಾಗುತ್ತಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

8. **'ಅ' ಮತ್ತು 'ಬ' ವರ್ಗದಲ್ಲಿ ಹಾನಿಗೊಳಗಾದ ಮನೆಗಳ ಪರಿಹಾರ ವಿತರಣೆ ಮಾಡುವ ಹೊಣೆ RGRHCL ರವರ ಮೇಲೆ ಇದ್ದರೂ ಸಹ ಈ ವಿಷಯದ ಕುರಿತು ನಿಗಾ ವಹಿಸಿ ಫಲಾನುಭವಿಗಳಿಗೆ ಪರಿಹಾರ ಸೂಕ್ತ ಸಮಯದಲ್ಲಿ ದೊರಕುವಂತೆ ನೋಡಿಕೊಳ್ಳಲು ಜಿಲ್ಲಾಧಿಕಾರಿಗಳಿಗೆ, ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು ಹಾಗೂ ಈ ವಿಷಯದಲ್ಲಿ ಅವರ ಮಟ್ಟದಿಂದ ಈ ಕುರಿತು ಕ್ರಮವೇನಾದರು ಅವಶ್ಯವೆನಿಸಿದಲ್ಲಿ ತಿಳಿಸಲು ಜಿಲ್ಲಾಧಿಕಾರಿಗಳಿಗೆ ಸೂಚಿಸಿದರು.**

**ಬೆಳೆ ಪರಿಹಾರ:**

9. ಜಿಲ್ಲೆಯಲ್ಲಿ 2018-19 ನೇ ಸಾಲಿನ ಬರದಿಂದಾಗಿ ಹಿಂಗಾರು ಬೆಳೆಗಳ ಹಾನಿ ಕುರಿತು ಪರಿಹಾರದ ಮೊತ್ತವು ಬಂದಿದ್ದು, ಆ ಕುರಿತು ಒಟ್ಟು 1,08,736 ಹೆಕ್ಟೇರ್ ಕ್ಷೇತ್ರದ ರೈತರ ಹೆಸರು, ಕ್ಷೇತ್ರದ ಸರ್ವೆ ನಂ. ಮತ್ತು ರೈತರ ಬ್ಯಾಂಕ್ ಖಾತೆಯ ವಿವರ ಇತ್ಯಾದಿ ಮಾಹಿತಿಗಳ ಡೇಟಾ ದಾಖಲಿಸುವ ಕಾರ್ಯವನ್ನು ಮಾಡಲಾಗಿದ್ದು, ಇನ್ನೂ 1,017 ಕ್ಷೇತ್ರದ ರೈತರ ವಿವರಗಳನ್ನು ದಾಖಲಿಸಲಾಗುತ್ತಿದ್ದು. ಈಗಾಗಲೇ ರೂ.36.76 ಕೋಟಿ ಬೆಳೆ ಪರಿಹಾರ ನೇರವಾಗಿ ರೈತರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

ಅಗಸ್ಟ್ 2019 ನಲ್ಲಿ ಆದ ಮಳೆಯಿಂದ / ಪ್ರವಾಹದಿಂದ ಸುಮಾರು 1,40,000 ಹೇಕ್ಟರ್ ಕ್ಷೇತ್ರದಲ್ಲಿ ಮುಂಗಾರು ಬೆಳೆ ನಾಶವಾಗಿದ್ದು, ಆ ಪೈಕಿ ಸುಮಾರು 1,20,000 ಹೇಕ್ಟರ್ ಕ್ಷೇತ್ರಗಳಿಗೆ ಸಂಬಂಧಿಸಿದ ಮಾಹಿತಿಯನ್ನು ಗಣಕೀಕರಣ ಮಾಡಲಾಗಿದ್ದು, 25,185 ರೈತರಿಗೆ ರೂ.59.00 ಕೋ ಟಿ ಪರಿಹಾರವನ್ನು ವಿತರಿಸಲಾಗಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು. ಹಾಗೂ ಅಕ್ಟೋಬರ್ 2019 ಮಳೆ/ಪ್ರವಾಹದಿಂದ ಸುಮಾರು 40,000 ಕ್ಷೇತ್ರದ ಮುಂಗಾರು ಬೆಳೆ ನಾಶವಾಗಿದ್ದು, ಅದರ ಮಾಹಿತಿಯನ್ನು ಗಣಕೀಕರಣ ಮಾಡಲಾಗುತ್ತಿರುವುದಾಗಿ ಕೂಡಾ ಅವರು ತಿಳಿಸಿದರು.

**ಜಿಲ್ಲಾ ಉಸ್ತುವಾರಿ ಸಚಿವರಿಂದ ಪ್ರವಾಹದಿಂದ ಆದ ಹಾನಿಯ ಕುರಿತು ಪರಿಶೀಲನೆ:**

10. ಪ್ರವಾಹದ ವಿಷಯ ಕುರಿತು ಜಿಲ್ಲಾ ಉಸ್ತುವಾರಿ ಸಚಿವರು ಪ್ರವಾಹ ಬಂದಾಗಿನಿಂದ ಈವರೆಗೆ ಅಧಿಕಾರಿಗಳೊಂದಿಗೆ ಸುಮಾರು 3 ಸಭೆಗಳನ್ನು ಜರುಗಿಸಿ ಪರಿಹಾರ ಕಾರ್ಯದ ಕುರಿತು ಪರಿಶೀಲನೆ ಮಾಡಿರುವುದಾಗಿ ಉಸ್ತುವಾರಿ ಕಾರ್ಯದರ್ಶಿಗಳಿಗೆ ಜಿಲ್ಲಾಧಿಕಾರಿಗಳು ತಿಳಿಸಿದರು.

**ಜಿಲ್ಲೆಯಲ್ಲಿ ಹೊಸದಾಗಿ ರಚನೆಯಾದ ತಾಲೂಕುಗಳು:**

**11. ಜಿಲ್ಲೆಯಲ್ಲಿ ಒಟ್ಟು 5 ತಾಲ್ಲೂಕುಗಳಲ್ಲದೇ 3 ಹೊಸ ತಾಲೂಕುಗಳ (ಅಳ್ನಾವರ್, ಅಣ್ಣಿಗೇರಿ ಹಾಗೂ ಹುಬ್ಬಳ್ಳಿ ನಗರ) 3 ವರ್ಷಗಳ ಹಿಂದೆ ರಚನೆಯಾಗಿದ್ದು, ಈ ಎಲ್ಲಾ ತಾಲ್ಲೂಕುಗಳಲ್ಲಿ ಕಂದಾಯ ಇಲಾಖೆಯ ಕಚೇರಿ ಸ್ಥಾಪಿತವಾಗಿದ್ದು, ಬೇರೆ ಇಲಾಖೆಗಳ ಕಾರ್ಯಾಲಯಗಳನ್ನು ಸ್ಥಾಪಿಸಬೇಕಾಗಿರುವುದಾಗಿ ಜಿಲ್ಲಾ ಉಸ್ತಾವಾರಿ ಕಾರ್ಯದರ್ಶಿಗಳಿಗೆ ಜಿಲ್ಲಾಧಿಕಾರಿಗಳು ತಿಳಿಸಿದರು.**

**ಜಿಲ್ಲೆಯಲ್ಲಿ ಪ್ರವಾಹದಿಂದ ಹೆಚ್ಚಿಗೆ ಹಾನಿಗೊಳಗಾದ ತಾಲ್ಲೂಕುಗಳು:**

12. ಅಗಸ್ಟ್ 2019 ತಿಂಗಳಲ್ಲಿ ಆದ ಮಳೆ/ಪ್ರವಾಹದಿಂದ ಜಿಲ್ಲೆಯಲ್ಲಿ ಅಳ್ನಾವರ್, ಕುಂದಗೋಳ, ಹುಬ್ಬಳ್ಳಿ ಮತ್ತು ಧಾರವಾಡ ತಾಲ್ಲೂಕುಗಳಲ್ಲಿ ಹೆಚ್ಚಿನ ಹಾನಿಯಾಗಿರುವುದಾಗಿ ಹಾಗೂ ಅಕ್ಟೋಬರ್ 2019 ಮಳೆ/ಪ್ರಹಾದಿಂದ ಜಿಲ್ಲೆಯಲ್ಲಿ ನವಲಗುಂದ, ಅಣ್ಣಿಗೇರಿ ಮತ್ತು ಕುಂದಗೋಳ ತಾಲ್ಲೂಕುಗಳಲ್ಲಿ ಹೆಚ್ಚಿನ ಹಾನಿ ಉಂಟಾಗಿರುವುದಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ಜಿಲ್ಲಾಧಿಕಾರಿಗಳು ತಿಳಿಸಿದರು.

**ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ದುರಸ್ತಿ:**

13. ಪ್ರವಾಹದಿಂದ ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ದುರಸ್ತಿಗಾಗಿ ಎನ್.ಡಿ.ಆರ್.ಎಫ್. ಮಾರ್ಗಸೂಚಿಯಂತೆ ರೂ.40.00 ಕೋಟಿಯನ್ನು ಜಿಲ್ಲೆಗೆ ಬಿಡುಗಡೆ ಮಾಡಲಾಗಿದ್ದು, ಆ ಪೈಕಿ ಶಾಲಾ ಕಟ್ಟಡಗಳ ದುರಸ್ತಿಗೆ ಕಡ್ಡಾಯವಾಗಿ ರೂ.10.00 ಕೋಟಿಗಳನ್ನು ನಿಗದಿಪಡಿಸಲಾಗಿದ್ದು, ಉಳಿದ ರೂ.30.00 ಕೋಟಿಗಳಲ್ಲಿ ಗ್ರಾಮೀಣ ರಸ್ತೆಗಳ, ಕೆರೆಗಳ ದುರಸ್ತಿಗಾಗಿ, ಮಹಾನಗರ ಪಾಲಿಕೆಯಲ್ಲಿ ರಸ್ತೆಗಳ ದುರಸ್ತಿಗಾಗಿ, ಪಿ.ಎಂ.ಜಿ.ಎಸ್.ವಾಯ್ ರಸ್ತೆಗಳ ದುರಸ್ತಿಗಾಗಿ, ಅಂಗನವಾಡಿ ಕಟ್ಟಡಗಳ ದುರಸ್ತಿಗಾಗಿ ಹಾಗು ಪ್ರಾಥಮಿಕ ಆರೋಗ್ಯ ಕೇಂದ್ರಗಳ ದುರಸ್ತಿಗಾಗಿ ಒಟ್ಟು ರೂ.26.00 ಕೋಟಿಗಳ ಕ್ರಿಯಾ ಯೋಜನೆಯನ್ನು ತಯಾರಿಸಲಾಗಿರುವುದಾಗಿ ಜಿಲ್ಲಾಧಿಕಾರಿಗಳು ತಿಳಿಸಿದರು.

ಈ ಕುರಿತು ಅಂದಾಜು ಪಟ್ಟಿಯನ್ನು ತಯಾರಿಸಲಾಗುತ್ತಿದ್ದು, ಅನುಷ್ಠಾನಗೊಳಿಸುವ ಇಲಾಖೆಗಳನ್ನು ನಿಗಧಿಪಡಿಸಿದ ನಂತರ ಆಡಳಿತಾತ್ಮಕ ಮಂಜೂರಿ ನೀಡಿ, ಈ ಎಲ್ಲಾ ಕಾಮಗಾರಿಗಳನ್ನು ತ್ವರಿತವಾಗಿ ತೆಗೆದುಕೊಳ್ಳಲಾಗುವುದು ಎಂದು ಕೂಡಾ ತಿಳಿಸಿದರು.

14. ಇದಲ್ಲದೆ ಪ್ರವಾಹದಿಂದ ಹಾನಿಯಾದ ರಸ್ತೆಗಳ ದುರಸ್ತಿಗಾಗಿ ಲೋಕೋಪಯೋಗಿ ಇಲಾಖೆಯಲ್ಲಿ ರೂ.36.00 ಕೋಟಿ ಲಭ್ಯವಿರುವುದಾಗಿ, ಪಂಚಾಯತ್ ರಾಜ್ ತಾಂತ್ರಿಕ ವಿಭಾಗದಲ್ಲಿ ರೂ.6.00 ಕೋಟಿ, ಮಹಾನಗರ ಪಾಲಿಕೆಯಲ್ಲಿ ಎಸ್.ಎಫ್.ಸಿ. ಅನುದಾನದಡಿ ರೂ.60.00 ಗಳು ರಸ್ತೆ ಮತ್ತು ಸೇತುವೆಗಳ ದುರಸ್ತಿಗಾಗಿ ಲಭ್ಯವಿರುವುದಾಗಿ ಸಭೆಯಲ್ಲಿ ಜಿಲ್ಲಾಧಿಕಾರಿಗಳು ತಿಳಿಸಿದರು.

**ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಸೃಜನೆ ಯೋಜನೆ:**

15. ಮಹಾತ್ಮಾ ಗಾಂಧಿ ಗ್ರಾಮೀಣ ಉದ್ಯೋಗ ಸೃಜನೆ ಯೋಜನೆಯಡಿ ಹಣಕಾಸಿನ ಕೊರತೆ ಇಲ್ಲದಿರುವುದಾಗಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ತಿಳಿಸಿದರು. ಹಾಗೂ ಪ್ರವಾಹದಿಂದಾಗಿ ಮತ್ತು ಜಿಲ್ಲೆಯಲ್ಲಿ ಹೆಚ್ಚಿನ ಭಾಗವು ಕಪ್ಪು ಮಣ್ಣಿನ ಪ್ರದೇಶವಾಗಿದ್ದ ಪ್ರಯುಕ್ತ ಈ ಯೋಜನೆಯಡಿ ಉದ್ಯೋಗಕ್ಕಾಗಿ ಹೆಚ್ಚಿನ ಬೇಡಿಕೆ ಈಗ ಇಲ್ಲದಿರುವುದಾಗಿ ಕೂಡಾ ಅವರು ತಿಳಿಸಿದರು.

**ಕುಡಿಯುವ ನೀರಿನ ಪೂರೈಕೆ ಕುರಿತು:**

16. ಸಧ್ಯ ಜಿಲ್ಲೆಯ ಗ್ರಾಮೀಣ ಅಥವಾ ನಗರ ಪ್ರದೇಶದಲ್ಲಿ/ಪಾಲಿಕೆಯ ವ್ಯಾಪ್ತಿಯಲ್ಲಿ ನೀರನ್ನು ಟ್ಯಾಂಕರ್ ಮೂಲಕ ಸರಬುರಾಜು ಮಾಡುವ ಯಾವುದೇ ಪ್ರಸಂಗ ಉದ್ಭವಿಸಿರುವುದಿಲ್ಲವೆಂದು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳಿಗೆ ತಿಳಿಸಲಾಯಿತು. ಹಾಗೂ ಪಾಲಿಕೆಯ ವ್ಯಾಪ್ತಿಯಲ್ಲಿ ಸುಮಾರು 24 ವಾರ್ಡುಗಳಿಗೆ ಭಾಗಶ: / ಪೂರ್ಣ ನಿರಂತರ ನೀರು ಪೂರೈಸಲಾಗುತ್ತಿರುವುದಾಗಿ ಕೂಡಾ ವಿವರಿಸಲಾಯಿತು.

**ಸ್ಮಾರ್ಟ್ ಸಿಟಿ ಯೋಜನೆಯ ಅನುಷ್ಠಾನದ ಕುರಿತು:**

17. **ಹುಬ್ಬಳ್ಳಿ-ಧಾರವಾಡ ಸ್ಮಾರ್ಟ್ ಸಿಟಿ ಯೋಜನೆಯಡಿ ಬಹಳಷ್ಟು ಪ್ರಗತಿಯನ್ನು ಸಾಧಿಸುವ ಅವಶ್ಯಕತೆ ಇದೆ ಎಂದು ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರು, ಹಾಗೂ ಈ ನಿಟ್ಟಿನಲ್ಲಿ ಗುತ್ತಿಗೆದಾರರಿಗೆ ವಹಿಸಿದ ಕಾಮಗಾರಿಗಳನ್ನು ತ್ವರಿತಗತಿಯಲ್ಲಿ ಅನುಷ್ಠಾನಗೊಳಿಸುಂತೆ ಕಟ್ಟುನಿಟ್ಟಾಗಿ ಅವರುಗಳಿಗೆ ನಿರ್ದೇಶಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ಹಾಗೂ ಜಿಲ್ಲಾಧಿಕಾರಿಗಳು, ಸ್ಮಾರ್ಟ್‌ಸಿಟಿ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಮಹಾನಗರ ಪಾಲಿಕೆಯ ಆಯುಕ್ತರು ಜಂಟಿಯಾಗಿ ಚರ್ಚಿಸಿ, ಸ್ಥಳ ಪರಿಶೀಲನೆ ಮಾಡಿ ಕಾಮಗಾರಿಗಳನ್ನು ಸಕಾಲದಲ್ಲಿ ಅನುಷ್ಠಾನಗೊಳಿಸಿ ಹೆಚ್ಚಿನ ಪ್ರಗತಿ ಸಾಧಿಸಲು ಎಲ್ಲಾ ಕ್ರಮ ಜರುಗಿಸಲು ಕೂಡಾ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.**

**ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆ ಹಾಗೂ ಎಸ್.ಎಫ್.ಸಿ./ನಗರೋತ್ಥಾನ ಯೋಜನೆ:**

18. ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಯಡಿ ರೂ.131.00 ಕೋಟಿಯ ಕ್ರಿಯಾ ಯೋಜನೆಯನ್ನು ತಯಾರಿಸಿ ಅನುಮೋದನೆಗಾಗಿ ಪೌರಾಡಳಿತ ನಿರ್ದೇಶನಾಲಯಕ್ಕೆ ಸಲ್ಲಿಸಿರುವುದಾಗಿ ಆಯುಕ್ತರು ಹು.ಧಾ. ಮಹಾನಗರ ಪಾಲಿಕೆ ಸಭೆಯಲ್ಲಿ ತಿಳಿಸಿದರು, ಅಲ್ಲದೇ ಎಸ್.ಎಫ್.ಸಿ./ನಗರೋತ್ಥಾನ ಯೋಜನೆಯಡಿ ಅನುದಾನದ ಬಿಡಿಗಡೆಯಲ್ಲಿ ಯಾವುದೇ ತೊಂದರೆಯಾಗಿರುವುದಿಲ್ಲವೆಂದು ಸಹ ಅವರು ತಿಳಿಸಿದರು.

**ಪೌರಾಡಳಿತ ನಿರ್ದೇಶನಾಲಯಕ್ಕೆ ಮಹಾತ್ಮಾ ಗಾಂಧಿ ನಗರ ವಿಕಾಸ ಯೋಜನೆಯ ಕ್ರಿಯಾ ಯೋಜನೆಯನ್ನು ಕಳುಹಿಸಿದ ಕುರಿತು ಎಲ್ಲಾ ಮಾಹಿತಿಯೊಂದಿಗೆ ತಮಗೆ ಪತ್ರ ಬರೆಯುಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಪಾಲಿಕೆ ಆಯುಕ್ತರಿಗೆ ಸೂಚಿಸಿದರು.**

**ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜನೆ ಕುರಿತು:**

19. **ಈ ಭಾಗದಲ್ಲಿ – ವಿಶೇಷವಾಗಿ ಧಾರವಾಡ ಜಿಲ್ಲೆಯಲ್ಲಿ ಹೆಚ್ಚಿನ ಬಂಡವಾಳ ಹೂಡಿಕೆ ಮಾಡುವಂತೆ ಹೂಡಿಕೆದಾರರನ್ನು ಆಕರ್ಷಿಸುವ ದೃಷ್ಟಿಯಿಂದ ಹಾಗೂ ಬಂಡವಾಳ ಹೂಡಿಕೆಗೆ ಸೂಕ್ತ ವಾತವರಣ**

**ನಿರ್ಮಾಣ ಮಾಡುವ ದೃಷ್ಟಿಯಿಂದ ಜನವರಿ 17, 2020 ರಂದು ಹುಬ್ಬಳ್ಳಿಯಲ್ಲಿ ಬಂಡವಾಳ ಹೂಡಿಕೆದಾರರ ಸಮಾವೇಶ ಆಯೋಜಿಸಲು ತೀರ್ಮಾನಿಸಿರುವುದಾಗಿ ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ತಿಳಿಸಿದರಲ್ಲದೆ ಎಲ್ಲಾ ಅಧಿಕಾರಿಗಳು ಈ ಸಮಾವೇಶದ ಆಯೋಜನೆಗೆ ಶ್ರಮಿಸಲು ಸೂಚಿಸಿದರು.**

ಸಭೆಯನ್ನು ವಂದನೆಗಳೊಂದಿಗೆ ಮುಕ್ತಾಯಗೊಳಿಸಲಾಯಿತು.

(ಗೌರವ ಗುಪ್ತಾ),
ಸರಕಾರದ ಪ್ರಧಾನ ಕಾರ್ಯದರ್ಶಿಗಳು,
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ
ಧಾರವಾಡ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

ಪ್ರತಿ: ಸಂಬಂದಪಟ್ಟ ಎಲ್ಲ ಅಧಿಕಾರಿಗಳಿಗೆ ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ.

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:30.10.2019 ರಂದು ಜರುಗಿದ ಉಡುಪಿ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಜಿಲ್ಲಾಭಿವೃದ್ಧಿ, ಮರಳು ಸಮಸ್ಯೆ ಹಾಗೂ ನೆರೆ ಪರಿಹಾರ ಬಗ್ಗೆ ಪರಿಶೀಲನಾ ಸಭೆಯ ನಡವಳಿ:**

**ಸಮಯ: ಪೂರ್ವಾಹ್ನ 10.00 ಗಂಟೆ** **ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ**

ಉಪಸ್ಥಿತರು:

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀಮತಿ ಪ್ರೀತಿ ಗೆಹಲೋಟ್, ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆ
4) ಶ್ರೀಮತಿ ನಿಶಾ ಜೇಮ್ಸ್, ಭಾ.ಪೊ.ಸೇ. ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ
5) ಶ್ರೀ ಬಿ.ಸದಾಶಿವ ಪ್ರಭು. ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
6) ಶ್ರೀ ಕೆ.ರಾಜು, ಕ.ಆ.ಸೇ(ಕಿ.ಶ್ರೇ). ಸಹಾಯಕ ಕಮೀಷನರು, ಕುಂದಾಪುರ

ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಮೊದಲಿಗೆ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸ್ವಾಗತಿಸುತ್ತಾ, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸುತ್ತಾ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

**ಸಭೆಯಲ್ಲಿ ಚರ್ಚಿಸಿದ ಪ್ರಮುಖ ವಿಷಯಗಳು:**

- ಉಡುಪಿ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಕುಂದಾಪುರ ತಾಲೂಕಿನಲ್ಲಿ ಹೆಚ್ಚುವರಿ ಮಳೆ ಆಗಿದ್ದು, ಜಿಲ್ಲೆಯಲ್ಲಿ ಒಟ್ಟು 1417 ಹಾನಿ ಪ್ರಕರಣಗಳು ದಾಖಲಾಗಿದ್ದು, 1396 ಪ್ರಕರಣಗಳಿಗೆ ಪರಿಹಾರ ಪಾವತಿಸಲಾಗಿರುತ್ತದೆ. ಹಾಗೂ ಉಳಿಕೆ 21 ಪ್ರಕರಣಗಳ ಪಾವತಿಗೆ ಕ್ರಮವಹಿಸಲಾಗುತ್ತಿರುವ ಬಗ್ಗೆ ತಿಳಿಸಲಾಗಿ, ಈ ಬಗ್ಗೆ ಕೂಡಲೇ ಪಾವತಿಗೆ ಕ್ರಮ ವಹಿಸುವಂತೆ ತಹಶೀಲ್ದಾರರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಹಾಗೂ ಜಿಲ್ಲೆಯಲ್ಲಿ ಪರಿಹಾರ ಪಾವತಿಗೆ ಹೆಚ್ಚಿನ ಅನುದಾನ ಕುರಿತಾಗಿ ಕೇಳಲಾಗಿ, ಜಿಲ್ಲಾಧಿಕಾರಿಯವರ ಪಿಡಿ ಖಾತೆಯಲ್ಲಿ ರೂ.46.29 ಕೋಟಿ ಅನುದಾನ ಲಭ್ಯವಿರುವ ಬಗ್ಗೆ ಜಿಲ್ಲಾಧಿಕಾರಿಯವರ ತಿಳಿಸಿದರು.

  (ಕ್ರಮ: ತಹಶೀಲ್ದಾರರು: ಕಾರ್ಕಳ/ಹೆಬ್ರಿ/ಕುಂದಾಪುರ/ಬೈಂದೂರು/ಬ್ರಹ್ಮಾವರ/ಉಡುಪಿ/ಕಾಪು)

- ಈ ಪ್ರಸಕ್ತ ಸಾಲಿನ ತೀವ್ರ ಮಳೆಯಿಂದಾಗಿ ರಾಷ್ಟ್ರೀಯ ಹೆದ್ದಾರಿಗಳು, ಸೇತುವೆಗಳು, ಕಟ್ಟಡಗಳಿಗೆ ಹಾನಿಯಾಗಿರುವ ಕುರಿತು ಪ್ರಾಕೃತಿಕ ವಿಕೋಪದಿಂದ ಹಾನಿಯಾದ ಮೂಲ ಸೌಕರ್ಯಗಳ ಕಾಮಗಾರಿಗಳಿಗೆ ರೂ.20 ಕೋಟಿ ಅನುದಾನ ಬಿಡುಗಡೆಗೊಂಡಿರುವ ಬಗ್ಗೆ ಜಿಲ್ಲಾಧಿಕಾರಿಯವರು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು.

- 2018-19 ನೇ ಸಾಲಿನ ಕೊಳೆರೋಗಕ್ಕೆ ಸಂಬಂಧಿಸಿದಂತೆ ಪರಿಹಾರ ಪಾವತಿಯಾದ ಪ್ರಕರಣಗಳ ಕುರಿತು ಈವರೆಗೆ ಗ್ರಾಮವಾರು ಪಟ್ಟಿ ಸ್ವೀಕೃತವಾಗದೇ ಇರುವ ಬಗ್ಗೆ ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಇವರು ಸಭೆಯ ಗಮನಕ್ಕೆ ತಂದಾಗ ಈ ಬಗ್ಗೆ Bhoomi Monitoring Cell ಗೆ ಜಿಲ್ಲಾಧಿಕಾರಿಯವರ ಮುಖಾಂತರ ಪತ್ರ ಕಳುಹಿಸುವಂತೆ ಹಾಗೂ ಪ್ರತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- 2019-20 ನೇ ಸಾಲಿನ ಮಳೆಹಾನಿಗೆ ಸಂಬಂಧಿಸಿದಂತೆ 26 ಹೆಕ್ಟೇರು ಬೆಳೆ ಹಾನಿಯಾಗಿರುವ ಬಗ್ಗೆ ಹಾಗೂ ಕೊಳೆ ರೋಗ ಪ್ರಕರಣಗಳ ಕುರಿತು ಸರ್ವೇ ಕಾರ್ಯಕ್ಕೆ ಅನುಮತಿ ನೀಡುವಂತೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ಕೋರಲಾಗಿ ಈ ಬಗ್ಗೆ ಜಿಲ್ಲಾಧಿಕಾರಿಯವರೊಂದಿಗೆ ಚರ್ಚಿಸಿ ವರದಿಯೊಂದಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- ಅಕ್ಟೋಬರ್‌ನಲ್ಲಾದ 2 ನೇ ಹಂತದ ಮಳೆಯಿಂದಾಗಿ ಜಿಲ್ಲೆಯಲ್ಲಿ ಒಟ್ಟು 16 ಹೆಕ್ಟೇರ್ ನಷ್ಟು ಭತ್ತದ ಬೆಳೆ ಹಾನಿಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ಈ ಹಾನಿಯ ಬಗ್ಗೆ ಪರಿಹಾರವನ್ನು ಪಾವತಿಸಲು ಪರಿಹಾರ ತಂತ್ರಾಂಶದಲ್ಲಿ ಹಾನಿ ವಿವರ ದಾಖಲಿಸಲು ಕ್ರಮ ವಹಿಸುವಂತೆ ಹಾಗೂ ಸಂಪೂರ್ಣ ವರದಿ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು.

( ಕ್ರಮ: ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ, ಉಡುಪಿ )

- ಜಿಲ್ಲೆಯಲ್ಲಿ Geographical Indication ಬೆಳೆಗಳಾದ ಮಟ್ಟು ಗುಳ್ಳ ಮತ್ತು ಉಡುಪಿ ಮಲ್ಲಿಗೆಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಲು ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ಕೋರಲಾಗಿ ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದರು.

( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- ಪ್ರಧಾನ ಮಂತ್ರಿಕ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ 135000 ರೈತರ ನೋಂದಣಿಯಾಗಿರುವ ಬಗ್ಗೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ನೋಂದಣಿಯಾದ ರೈತರ ಪೈಕಿ 5 ಸೆಂಟ್ಸ್ ಗಿಂತ ಕಡಿಮೆ ಜಮೀನು ಹೊಂದಿರುವ ರೈತರ ವಿವರಗಳನ್ನು ಪಡೆದು 10% ರಷ್ಟು ಅರ್ಜಿಗಳನ್ನು ಸ್ಥಳ ತನಿಖೆ ನಡೆಸಿ ಪರಿಶೀಲಿಸಿ ಕ್ರಮ ವಹಿಸುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಉಡುಪಿ )

- ಬೆಳೆಗಳನ್ನು ಉತ್ತಮ ಗುಣಮಟ್ಟದಲ್ಲಿ ಯಾಂತ್ರೀಕರಣ ಮಾಡಿರುವ ಕುರಿತು ಬಾಗಲಕೋಟೆ ಜಿಲ್ಲೆಗೆ ಜಿಲ್ಲಾಧಿಕಾರಿಯವರು ಭೇಟಿ ನೀಡಿ ಪರಿಶೀಲಿಸುವಂತೆ ಹಾಗೂ ಅದರ ಮಾದರಿಯನ್ನು ಉಡುಪಿಯಲ್ಲಿ ಅಳವಡಿಸಲು ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.
- ಪೋಜಣಿ ಪ್ರಗತಿ ಬಗ್ಗೆ ಪರಿಶೀಲಿಸಲಾಗಿ ಸೆಪ್ಟೆಂಬರ್ ಅಂತ್ಯದಲ್ಲಿ ಒಟ್ಟು 9785 ಬಾಕಿ ಪ್ರಕರಣಗಳಿದ್ದು, ಈ ಬಗ್ಗೆ ವಿಚಾರಿಸಲಾಗಿ ಪಹಣಿ ತಿದ್ದುಪಡಿ ಅವಶ್ಯಕತೆಯಿಂದಾಗಿ ಹೆಚ್ಚಿನ ಪ್ರಕರಣಗಳು ಬಾಕಿ ಇವೆ ಎಂದು ಭೂದಾಖಲೆಗಳ ಉಪನಿರ್ದೇಶಕರು ತಿಳಿಸಿದರು. ಈ ಎಲ್ಲಾ ಪ್ರಕರಣಗಳನ್ನು ಮುಂದಿನ ತಿಂಗಳ ಸಭೆಯೊಳಗೆ ವಿಲೇವಾರಿ ಪ್ರಗತಿಯನ್ನು ಸಾಧಿಸುವಂತೆ ಎಲ್ಲಾ ತಹಶೀಲ್ದಾರರಿಗೆ, ಭೂದಾಖಲೆಗಳ ಉಪನಿರ್ದೇಶಕರಿಗೆ ನಿರ್ದೇಶಿಸಿದರು ಹಾಗೂ ಈ ಬಗ್ಗೆ ಜಿಲ್ಲಾಧಿಕಾರಿಯವರು ಖಚಿತಪಡಿಸಿಕೊಳ್ಳುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಭೂದಾಖಲೆಗಳ ಉಪನಿರ್ದೇಶಕರು/ಎಲ್ಲಾ ತಹಶೀಲ್ದಾರರು)

- ಭಾಗಶಃ ಡೀಮ್ಡ್ ಅರಣ್ಯ ವ್ಯಾಪ್ತಿಯಲ್ಲಿರುವ ಕ್ರಶರ್ ಪ್ರದೇಶಗಳನ್ನು ಸರ್ವೇ ಮಾಡಿರುವ ಬಗ್ಗೆ ಅರಣ್ಯ ಇಲಾಖೆ ಮತ್ತು ಸರ್ವೇ ಇಲಾಖೆಯವರಿಗೆ ಕೇಳಲಾಗಿ, ಸರ್ವೇ ಕಾರ್ಯವನ್ನು ಮುಗಿಸಿರುವುದಾಗಿ ಭೂದಾಖಲೆಗಳ ಉಪನಿರ್ದೇಶಕರು ತಿಳಿಸಲಾಗಿ ಕೂಡಲೇ ವರದಿಯನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನಿರ್ದೇಶಿಸಿದರು.

(ಕ್ರಮ: ಭೂದಾಖಲೆಗಳ ಉಪನಿರ್ದೇಶಕರು/ ತಹಶೀಲ್ದಾರ್ ಕಾರ್ಕಳ, ಹೆಬ್ರಿ ಕುಂದಾಪುರ)

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 2 ವಿದ್ಯಾರ್ಥಿ ನಿಲಯಗಳಿಗೆ ಜಮೀನು ಖರೀದಿ ಪ್ರಕ್ರಿಯೆ ಬಾಕಿ ಇರುವ ಬಗ್ಗೆ ಉಪ ನಿರ್ದೇಶಕರು ತಿಳಿಸಲಾಗಿ, ಸದರಿ ಜಮೀನಿನ ಬಗ್ಗೆ ಇರುವ ಸಮಸ್ಯೆಗಳಿಗೆ ಸಂಬಂಧಿಸಿ ಆಯಾ ಇಲಾಖಾಧಿಕಾರಿಯವರೇ ಖುದ್ದು ಸರ್ಕಾರಿ ಅಥವಾ ಖಾಸಗಿ ಜಮೀನುಗಳನ್ನು ಗುರುತಿಸಿ ನಂತರ ತಹಶೀಲ್ದಾರರ ಜೊತೆ ಚರ್ಚೆ ಮಾಡಿ ಪ್ರಸ್ತಾವನೆ ಸಲ್ಲಿಸಲು ಸೂಕ್ತ ಕ್ರಮ ವಹಿಸುವುದು. ಇಲ್ಲವಾದಲ್ಲಿ ಸ್ವಲ್ಪ ಸಮಯದ ವರೆಗೆ ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಲು ಜಿಲ್ಲಾಧಿಕಾರಿಯವರೊಡನೆ ಚರ್ಚಿಸಿ ಸೂಕ್ತ ಕ್ರಮ ವಹಿಸುವಂತೆ ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳಿಗೆ ತರಬೇತಿ (Remedial Teaching) ನೀಡುತ್ತಿರುವ ಬಗ್ಗೆ ವಿಚಾರಿಸಲಾಗಿ, ಸದರಿ ವಿದ್ಯಾರ್ಥಿಗಳಿಗೆ ಖಾಯಂ ಶಿಕ್ಷಕರು ಲಭ್ಯವಿಲ್ಲದ ಕಾರಣ ಖಾಸಗಿ ಶಿಕ್ಷಕರಿಂದ ತರಬೇತಿಯನ್ನು ನೀಡಲಾಗುತ್ತಿರುವ

ಬಗ್ಗೆ ಉಪ ನಿರ್ದೇಶಕರು ತಿಳಿಸಿದರು. ಈ ಬಗ್ಗೆ ಪರಿಶೀಲಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ ನೀಡುವುದು, ಅಲ್ಲಿಯ ಬಯೋಮೆಟ್ರಿಕ್ ವ್ಯವಸ್ಥೆ, ಆಹಾರ, ಆರೋಗ್ಯ ತಪಾಸಣೆ, ವಿದ್ಯಾರ್ಥಿಗಳ ಪರೀಕ್ಷಾ ತೇರ್ಗಡೆ ಫಲಿತಾಂಶ ಹೆಚ್ಚಿಸಲು ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ ಹಾಗೂ ಈ ಬಗ್ಗೆ ಮುತುವರ್ಜಿ ವಹಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಉಡುಪಿ ಜಿಲ್ಲೆಯಲ್ಲಿ ಅಪೌಷ್ಠಿಕ ಮತ್ತು ತೀವ್ರ ಅಪೌಷ್ಠಿಕ ಮಕ್ಕಳು ಇಲ್ಲದಂತೆ ನೋಡಿಕೊಳ್ಳುವುದು. ಸ್ಥಳೀಯ ಮತ್ತು ವಲಸೆ ಮಕ್ಕಳ ಆರೋಗ್ಯದ ಕುರಿತಾದ ಮಾಹಿತಿಯನ್ನು ಪಡೆದು ಅವರಿಗೆ CSR ಅನುದಾನದಿಂದ ಮಕ್ಕಳ ಪೌಷ್ಠಿಕತೆ ಹೆಚ್ಚಿಸಲು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ ಸೂಕ್ತ ಕ್ರಮವಹಿಸುವಂತೆ ಹಾಗೂ ಅಪೌಷ್ಠಿಕ ಮಕ್ಕಳ ಬಗ್ಗೆ ಕಾಳಜಿ ಮಾಡಲು ಜಿಲ್ಲೆಯಲ್ಲಿ ನೋಡಲ್ ಅಧಿಕಾರಿಯವರನ್ನು ನೇಮಿಸಲು ಕ್ರಮವಹಿಸುವಂತೆ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಸಿಬ್ಬಂದಿಯವರ ಕೊರತೆಯಿರುವ ಬಗ್ಗೆ ಸಭೆಯ ಗಮನಕ್ಕೆ ಉಪನಿರ್ದೇಶಕರು ತಂದಾಗ ಈ ಬಗ್ಗೆ ಅರೆ ಸರ್ಕಾರಿ ಪತ್ರವನ್ನು ನಿರ್ದೇಶಕರಿಗೆ ಕಳುಹಿಸಲು ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಜಿಲ್ಲೆಯಲ್ಲಿ 90 Nutrition Rehabilitation Center (**NRC**) ಗಳಿದ್ದು, ಇವುಗಳಲ್ಲಿ 14 ತೀವ್ರ ಅಪೌಷ್ಠಿಕ ಮಕ್ಕಳ [Severe Acute Malnutrition (SAM)] ಪ್ರಕರಣಗಳಿಗೆ ವಿಶೇಷ ಗಮನ ನೀಡಿ ಚಿಕಿತ್ಸೆ ನೀಡಲಾಗುತ್ತಿದೆ. ಹಾಗೂ 2359 ಮಧ್ಯಮ ತೀವ್ರ ಅಪೌಷ್ಠಿಕ ಮಕ್ಕಳ [Moderate Acute Malnutrition (**MAM**)] ಪ್ರಕರಣಗಳು ಪ್ರತೀ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಿಶೇಷ ಕಾಳಜಿಯೊಂದಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಪ್ರಕರಣಗಳು ನಿಗದಿತ ಅವಧಿಯಲ್ಲಿ ಪಟ್ಟಿ ಮಾಡಲಾಗುತ್ತಿದೆ. ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉಸ್ತುವಾರಿ ಕಾರ್ಯದರ್ಶಿಯವರಿಗೆ ತಿಳಿಸಿದರು. ಆರೋಗ್ಯ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಅನುಮೋದನೆಗೆ ಬಾಕಿ ಇದ್ದಲ್ಲಿ ಅದರ ಮಾಹಿತಿಯನ್ನು ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಕಳುಹಿಸುವಂತೆ ಸೂಚಿಸಿದರು.

(ಕ್ರಮ: ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು, ಉಡುಪಿ)

- ಜಿಲ್ಲೆಯಲ್ಲಿ ಅಂಗನವಾಡಿಗಳಲ್ಲಿನ ವಲಸೆ ಬಾಲ ಕಾರ್ಮಿಕರ ಗ್ರೇಡ್-4 ಮತ್ತು ಗ್ರೇಡ್-3 ದತ್ತಾಂಶಗಳನ್ನು ಪಟ್ಟಿ ಮಾಡಿ ಅವರ ವ್ಯಕ್ತಿಚಿತ್ರವನ್ನು ಜಿಲ್ಲಾ ಕಾರ್ಮಿಕ ಅಧಿಕಾರಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ತಯಾರಿಸುವಂತೆ ಹಾಗೂ ಜಿಲ್ಲೆಯಲ್ಲಿ ಪ್ರತಿಯೊಬ್ಬ ಬಾಲ ಕಾರ್ಮಿಕರು ಸಹ ಗುರುತಿಸಲ್ಪಡುವಂತೆ ಕ್ರಮ ವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ/ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು, ಉಡುಪಿ/ಜಿಲ್ಲಾ ಕಾರ್ಮಿಕ ಅಧಿಕಾರಿ, ಉಡುಪಿ)

- ಜಿಲ್ಲೆಯಲ್ಲಿ ದುಡಿಯುವ ಮಹಿಳೆಯರಿಗೆ Working women hostel ನ ಅವಶ್ಯಕತೆ ಬಗ್ಗೆ ಪರಿಶೀಲಿಸಲು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಸಹಕಾರ ಇಲಾಖೆಗೆ ಸಂಬಂಧಿಸಿ ಬೆಳೆ ಸಾಲ ಮನ್ನಾ ಯೋಜನೆಯಡಿ ಬಾಕಿ ಇರುವ ಅರ್ಜಿಗಳು ಹಾಗೂ ಬ್ಯಾಂಕ್ ಗಳಲ್ಲಿನ ಸಾಲ ಮನ್ನಾ ಅರ್ಜಿಗಳ ಶೀಘ್ರ ವಿಲೇವಾರಿಗೆ ಕ್ರಮ ವಹಿಸುವುದು. ಸಹಕಾರ ಇಲಾಖೆಯ ನೋಂದಣಿ ಆದ ಸ್ವಸಹಾಯ ಸಂಘಗಳ ಮುಕ್ತಾಯದ ಅವಧಿ, ನಿರ್ವಹಣೆ, ಅವುಗಳ ಆಡಳಿತಾತ್ಮಕ ವಿಚಾರಣೆ ವಿವರ ಮತ್ತು ನಗದು ಠೇವಣಿ ಬಾಕಿ ಮಾಹಿತಿಯನ್ನು ಬ್ಯಾಂಕ್ ವಾರು ಸಲ್ಲಿಸುವಂತೆ ಹಾಗೂ ಸದ್ರಿ ವಿಷಯದ ಕುರಿತು ಕೈಗೊಳ್ಳಬಹುದಾದ ಕ್ರಮವನ್ನು ಅನುಸರಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸಹಕಾರಿ ಸಂಘಗಳ ಉಪನಿಬಂಧಕರಿಗೆ ಸೂಚಿಸಿದರು.

(ಕ್ರಮ: ಸಹಕಾರಿ ಸಂಘಗಳ ಉಪನಿಬಂಧಕರು)

- ಜಿಲ್ಲೆಯ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಮೂಲಭೂತ ಸೌಕರ್ಯಗಳು, ನಿರ್ವಹಣೆ, ಶಿಕ್ಷಕರ ಬೋಧನೆಯ ಗುಣಮಟ್ಟದ ಕುರಿತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಪ್ರತೀ ಶಾಲೆ/ಕಾಲೇಜು ಮುಖ್ಯಸ್ಥರಿಂದ ಖಾತರಿಪಡಿಸಿಕೊಳ್ಳುವಂತೆ ಹಾಗೂ ರಾಜ್ಯದಲ್ಲಿ ಜಿಲ್ಲೆಯು ಪ್ರಥಮ ಶ್ರೇಯಾಂಕ ಪಡೆಯಲು ಕೈಗೊಳ್ಳಬಹುದಾದ ಮಾರ್ಗಸೂಚಿಗಳನ್ನು ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್ ಇವರು ತೆಗೆದುಕೊಳ್ಳುವಂತೆ ಅಗತ್ಯವಿದ್ದಲ್ಲಿ ಉಸ್ತುವಾರಿ ಕಾರ್ಯದರ್ಶಿಯವರ ಸಹಕಾರವನ್ನು ಪಡೆಯುವಂತೆ ಸೂಚಿಸಲಾಯಿತು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಾಲೇಜುಗಳ ಕಾರ್ಯಕ್ಷಮತೆಯನ್ನು ಸಹ ಗಣನೆಗೆ ತೆಗೆದುಕೊಳ್ಳುವಂತೆ ಖಾಸಗಿ/ ಸರ್ಕಾರಿ ಶಾಲಾ ಕಾಲೇಜುಗಳ ವರದಿಯನ್ನು ಪಡೆಯುವಂತೆ ಸಹ ಸೂಚಿಸಲಾಯಿತು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್ ಉಡುಪಿ/ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಉಡುಪಿ/ ಉಪನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ )

- ಮಕ್ಕಳಿಗೆ ವಿತರಿಸಲಾಗುವ ಪಠ್ಯಪುಸ್ತಕ, ಸಮವಸ್ತ್ರ, ಶೂ ಸಾಕ್ಸ್, ಬೈಸಿಕಲ್ ಗಳ ಗುಣಮಟ್ಟವನ್ನು ಪರಿಶೀಲಿಸಿದ ಬಗ್ಗೆ ಹಾಗೂ ವಿತರಣೆಯಾದ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಖಚಿತಪಡಿಸಿಕೊಳ್ಳುವಂತೆ ಮತ್ತು ಪ್ರತೀ ಶಾಲೆಗೆ ಭೇಟಿ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಜಿಲ್ಲೆಯಲ್ಲಿ Light Fishing ಮಾಡುವವರಿಗೆ ರೂ.5000 ಗಳ ದಂಡವನ್ನು ವಿಧಿಸಲಾಗುತ್ತಿದ್ದು, ಸದರಿ ದಂಡದ ನೋಟೀಸನ್ನು ಗಣನೆಗೆ ತೆಗೆದುಕೊಳ್ಳದೇ Light Fishing ಮಾಡುತ್ತಿದ್ದು, ಸದ್ರಿ ದಂಡದ ಮೊತ್ತವನ್ನು ಹೆಚ್ಚಿಗೆ ಮಾಡುವಂತೆ ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಇವರು ಕೋರಿದರು. ನೋಟೀಸನ್ನು ಗಣನೆಗೆ ತೆಗೆದುಕೊಳ್ಳದೇ ಇರುವವರ ಕೆರೋಸಿನ್ ಸಬ್ಸಿಡಿಯನ್ನು ರದ್ದುಪಡಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- Light Fishing ಗಾಗಿ ಬೋಟ್ ನಲ್ಲಿ ಜನರೇಟರ್ ತೆಗೆದುಕೊಂಡು ಹೋಗುತ್ತಿದ್ದು, Light Fishing ಬ್ಯಾನ್ ಆಗಿದ್ದು, ಜನರೇಟರ್ ಗಳನ್ನು ಬಂದರಿನ ಒಳಗಡೆ ತೆಗೆದುಕೊಂಡು ಹೋಗದಂತೆ ದ್ವಾರದಲ್ಲಿಯೇ ಪರಿಶೀಲನೆಗೆ ಒಳಪಡಿಸುವುದು ಅಗತ್ಯವಾಗಿದೆ ಎಂದು ಮೀನುಗಾರಿಕಾ ಉಪನಿರ್ದೇಶಕರು ಕೋರಿದಾಗ ಅಗತ್ಯ ನೆರವು ನೀಡುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

(ಕ್ರಮ: ಪೊಲೀಸ್ ಅಧೀಕ್ಷಕರು, ಉಡುಪಿ/ ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ /ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- ಸಮುದ್ರಕ್ಕೆ ಹೋಗುವ ಹಡಗುಗಳು ಪರವಾನಿಗೆ ಸಂಬಂಧಿಸಿ 476 ಅರ್ಜಿಗಳು ಬಾಕಿ ಇದ್ದು, ಈ ಹಡಗುಗಳಿಗೆ ನೀಡಲಾಗುವ ಪರವಾನಿಗೆ ಕೇಂದ್ರ ಕಛೇರಿಯಿಂದ ಅನುಮೋದನೆ ಆಗಬೇಕಾಗಿದ್ದು, MMIS ನಂಬ್ರವು ಸಕ್ರೀಯಗೊಳಿಸದೇ ಪರವಾನಿಗೆ ಪ್ರಕ್ರಿಯೆ ನಡೆಯುವುದಿಲ್ಲ. ಆದುದರಿಂದ MMIS ನಂಬ್ರವನ್ನು ಸಕ್ರೀಯಗೊಳಿಸುವಂತೆ ಮತ್ತು ಪ್ರತಿಯೊಂದು ಚಿಕ್ಕ ಹಾಗೂ ಮಧ್ಯಮ ಹಡಗುಗಳಿಗೆ Boat Tracking System ನ್ನು ಅಳವಡಿಸಲು ಕೇಂದ್ರ ಕಛೇರಿಗೆ ಪತ್ರ ಬರೆಯಲಾಗಿದ್ದು, ಈ ಬಗ್ಗೆ ಈವರೆಗೆ ಅನುಮೋದನೆಗೆ ದೊರೆತಿರುವುದಿಲ್ಲ. ಈ ಅನುಮೋದನೆ ದೊರಕಿದ್ದಲ್ಲಿ ಸಮುದ್ರಕ್ಕೆ ಹೋಗುವ ಚಿಕ್ಕ ಹಾಗೂ ಮಧ್ಯಮ ಪ್ರಮಾಣದ ಹಡಗುಗಳ ಪತ್ತೆ ಹಚ್ಚುವುದು ಸುಲಭವಾಗುವ ಹಿನ್ನಲೆಯಲ್ಲಿ ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಇವರು ಕೋರಿದರು. ಈ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ವಿವರವನ್ನು ಸಲ್ಲಿಸುವಂತೆ ಸೂಚಿಸಿದರು.

(ಕ್ರಮ: ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- ಜಿಲ್ಲೆಯಲ್ಲಿ ರೇಶ್ಮೆ ಇಲಾಖೆಯ ಫಾರ್ಮ್ ಗಳು ಇರುವ ಬಗ್ಗೆ ಪರಿಶೀಲಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- 2018-19 ನೇ ಸಾಲಿನ ಬರ ನಿರ್ವಹಣೆಗಾಗಿ ಟ್ಯಾಂಕರ್ ಮೂಲಕ ಸರಬರಾಜು ಮಾಡಲಾದ ನೀರಿನ ಬಿಲ್ಲುಗಳನ್ನು ಈವರೆಗೆ ಪಾವತಿಸದಿರುವ ದೂರುಗಳು ಸ್ವೀಕೃತವಾಗುತ್ತಿದ್ದು, ತಕ್ಷಣ ಪರಿಹರಿಸುವಂತೆ ಹಾಗೂ ಕಳೆದ ಬಾರಿ ನೀರಿನ ಸಮಸ್ಯೆಗಳಿದ್ದ ಕಡೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಜಿಲ್ಲಾಧಿಕಾರಿಯವರು ಕಾರ್ಯಕಾರಿ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಇವರಿಗೆ ಸೂಚಿಸಿದರು. ಮುಂದಿನ ಬರ ನಿರ್ವಹಣೆಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುವಂತೆ ಜಿಲ್ಲಾಧಿಕಾರಿಯವರು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ ಇವರಿಗೆ ಸೂಚಿಸಿದರು. ಹಾಗೂ ನಗರಾಭಿವೃದ್ಧಿ ಇಲಾಖೆಯ ವಸತಿ ಯೋಜನೆಗೆ ಸಂಬಂಧಿಸಿ ಅನುದಾನ ಬಿಡುಗಡೆಯಾಗದಿರುವ ಬಗ್ಗೆ ಯೋಜನಾ ನಿರ್ದೇಶಕರು ತಿಳಿಸಲಾಗಿ ಈ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರಿಂದ KUIDFC ಗೆ ಅರೆ ಸರ್ಕಾರಿ ಪತ್ರವನ್ನು ಬರೆಯಲು ಸೂಚಿಸಲಾಯಿತು.

(ಕ್ರಮ:ಕಾರ್ಯಕಾರಿ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಜತಾದ್ರಿ, ಮಣಿಪಾಲ/ ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಉಡುಪಿ)

- ಉದ್ಯೋಗ ಖಾತ್ರಿ ಯೋಜನೆಯಡಿ ತೋಟಗಾರಿಕೆ, ಕೃಷಿ, ಜಲಾನಯನ ಇಲಾಖೆಗಳ ಅಭಿವೃದ್ಧಿಗಾಗಿ NREG ಅನುದಾನವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದು ಹಾಗೂ ಜಲಸೌಕರ್ಯಗಳು, ಒಳನಾಡು ಮೀನುಗಾರಿಕೆ ಮುಂತಾದ ಚಟುವಟಿಕೆಗಳನ್ನು ಬೆಂಬಲಿಸಲು ಸೂಕ್ತ ಕ್ರಮವಹಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಪಡುಬಿದ್ರೆಯಲ್ಲಿ Blue Flag Beach ರಚನೆಗೆ ಸಂಬಂಧಿಸಿ Architecture Plan ನನ್ನು ಮಣಿಪಾಲ್ ನ ಮಾಹೆಯವರ ಸಹಕಾರದೊಂದಿಗೆ ಪಡೆದು ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- ಪ್ರವಾಸೀ ಟ್ಯಾಕ್ಸಿ ಯೋಜನೆಯಡಿ ಜಿಲ್ಲೆಗೆ 56 ಅರ್ಜಿಗಳು ಸ್ವೀಕೃತವಾಗಿದ್ದು ಒಟ್ಟು 8 ಗುರಿಗಳಿದೆ. ಅನುದಾನ ಬಿಡುಗಡೆಯಾದ ತಕ್ಷಣ ಟ್ಯಾಕ್ಸಿ ವಿತರಣೆಗೆ ಕ್ರಮವಹಿಸುವುದಾಗಿ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಅನುದಾನ ಬಿಡುಗಡೆಗೆ ಸಂಬಂಧಿಸಿ ಕೇಂದ್ರ ಕಛೇರಿಗೆ ಪತ್ರ ಬರೆದಲ್ಲಿ ಸದ್ರಿ ಮಾಹಿತಿಯನ್ನು ಒದಗಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- ಕರ್ನಾಟಕ ದರ್ಶನಕ್ಕೆ 572 ವಿದ್ಯಾರ್ಥಿಗಳ ಪಟ್ಟಿಯನ್ನು Karnataka Tourism Infrastructure Limited ಇವರಿಗೆ ಈಗಾಗಲೇ ಸಲ್ಲಿಸಲಾಗಿರುವ ಬಗ್ಗೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಎಲ್ಲಾ ಟ್ರಾವೆಲ್ ಏಜೆಂಟ್ ಗಳನ್ನು ಒಳಗೊಂಡಂತೆ ಟ್ರಾವೆಲ್ ಎಕ್ಸ್ ಪೋ ವರ್ಕ್ ಶಾಪ್ ಆಯೋಜಿಸುವುದರಿಂದ ಪ್ರವಾಸೋದ್ಯಮ ಬೆಳವಣಿಗೆ ಸಾಧ್ಯವಾಗುತ್ತದೆ. ಎಲ್ಲಾ ಪಾಲುದಾರರು ಭಾಗಿಯಾದಲ್ಲಿ ಸರಿಯಾದ ಯೋಜನೆ ಹಾಕಿಕೊಳ್ಳಲು ಸಾಧ್ಯವಾಗುವುದರಿಂದ ವರ್ಕ್ ಶಾಪ್ ಆಯೋಜಿಸಲು ಕ್ರಮವಹಿಸುವಂತೆ ಹಾಗೂ ಪಡುಕೆರೆ ಬೀಚ್ ಅಭಿವೃದ್ಧಿ ಪಡಿಸಿ ಸರ್ಫಿಂಗ್ ಗೆ ಉತ್ತೇಜನ ನೀಡಲು ಕ್ರಮವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- Karnataka Tourism Vision Group (KTVG) ಶಿಫಾರಸ್ಸುಗಳಡಿ ಒಟ್ಟು 3 ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲು ಕೇಂದ್ರ ಕಚೇರಿಯಿಂದ ಅನುಮೋದನೆ ದೊರೆತಿದ್ದು ಅಂದಾಜು ಪಟ್ಟಿ ತಯಾರಿಸಲು ಬಾಕಿ ಇರುವ ಬಗ್ಗೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಸದ್ರಿ ಅಂದಾಜು ಪಟ್ಟಿಯನ್ನು ಶೀಘ್ರವಾಗಿ ತಯಾರಿಸಿ ಕೊಡುವಂತೆ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆಗೆ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ)

- ಕೈಗಾರಿಕಾ ವಸಾಹತುಗಳ ಸ್ಥಾಪನೆಗೆ ಸಂಬಂಧಿಸಿ ಸೂಕ್ತ ಜಾಗವನ್ನು ಗುರುತಿಸುವಂತೆ ಸಹಾಯಕ ಕಮೀಷನರ್, ಕುಂದಾಪುರ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ಕಮೀಷನರ್, ಕುಂದಾಪುರ)

(ಎಂ.ಮಹೇಶ್ವರ್ ರಾವ್)
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್‌ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

**ದಿ:-30-10-2019 ರಂದು ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಾಣಿಜ್ಯ ಮತ್ತು ಕೈಗಾರಿಕ ಇಲಾಖೆ ಮತ್ತು ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಇವರ ಅಧ್ಯಕ್ಷತೆಯಲ್ಲಿ ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಹದ ಮತ್ತು ಬರ ಪರಿಸ್ಥಿತಿ ಕುರಿತು ನಡೆದ ಸಭೆಯ ನಡವಳಿಗಳು**

********

ಹಾಜರಿದ್ದ ಅಧಿಕಾರಿಗಳು:-

1) ಮುಖ್ಯ ಕಾರ್ಯನಿರ್ವಹಕ ಅಧಿಕಾರಿಗಳು, ಬಳ್ಳಾರಿ.
2) ಅಪರ ಜಿಲ್ಲಾಧಿಕಾರಿಗಳು, ಬಳ್ಳಾರಿ.
3) ಸಹಾಯಕ ಆಯುಕ್ತರು, ಬಳ್ಳಾರಿ,
4) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಬಳ್ಳಾರಿ.
5) ಉಪ ನಿರ್ದೇಶಕರು, ತೋಟಗಾರಿಕೆ ಇಲಖೆ, ಬಳ್ಳಾರಿ.
6) ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬಳ್ಳಾರಿ.
7) ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಬಳ್ಳಾರಿ.
8) ಕಾರ್ಯನಿರ್ವಾಹಕ ಅಭಿಯಂತರರು, RDWS & D, ಬಳ್ಳಾರಿ.
9) ಕಾರ್ಯನಿರ್ವಾಹಕ ಅಭಿಯಂತರರು, ಕೆ.ಯು.ಡಬ್ಲ್ಯು.ಎಸ್.ಡಿ. ಬಳ್ಳಾರಿ.

******

ಮಾನ್ಯ ಬಳ್ಳಾರಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್ ಬಳ್ಳಾರಿ, ಅಪರ ಜಿಲ್ಲಾಧಿಕಾರಿಗಳನ್ನು, ಮತ್ತು ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಜಿಲ್ಲಾಧಿಕಾರಿಗಳಿಗೆ ಬಳ್ಳಾರಿ ಜಿಲ್ಲೆಯಲ್ಲಿನ ಬರ ಮತ್ತು ಪ್ರವಾಹ ಪರಿಸ್ಥಿತಿ ಕುರಿತು ವಿವರಣೆ ನೀಡಲು ಸೂಚಿಸಿದರು.

ಅಪರ ಜಿಲ್ಲಾಧಿಕಾರಿಗಳು ಬಳ್ಳಾರಿ ಜಿಲ್ಲೆಯಲ್ಲಿ ಪ್ರವಾಹ ಪರಿಸ್ಥಿತಿ ಕುರಿತು ಮತ್ತು ಕೈಗೊಂಡ ಕ್ರಮಗಳ ಬಗ್ಗೆ ಈ ಕೆಳಕಂಡಂತೆ ವರದಿ ಸಲ್ಲಿಸಿದರು.

1) 2019 ಆಗಸ್ಟ್ ತಿಂಗಳಲ್ಲಿ ಒಟ್ಟು 05 ಜೀವ ಹಾನಿ ಸಂಭವಿಸಿದ್ದು ಒಟ್ಟು ರೂ.25.00 ಲಕ್ಷ ಪರಿಹಾರ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.
2) 01 ಪ್ರಾಣಿ ಹಾನಿ ಸಂಭವಿಸಿದ್ದು ಈಗಾಗಲೇ ರೂ.3000/- ಪರಿಹಾರ ನೀಡಲಾಗಿದೆ ಎಂದು ತಿಳಿಸಿದರು.
3) ಆರ್.ಜಿ.ಆರ್.ಹೆಚ್.ಸಿ.ಎಲ್. ತಂತ್ರಾಂಶದಲ್ಲಿ ಡೇಟಾ ಎಂಟ್ರಿ ಕಾರ್ಯ ಪೂರ್ಣಗೊಳಿಸಲಾಗಿದೆ. ಒಟ್ಟು "ಸಿ" ವರ್ಗದ 926 ಮನೆಗಳಿಗೆ ರೂ.231.50 ಲಕ್ಷ (ರೂ.25000/- ದಂತೆ) ಪರಿಹಾರ ಮತ್ತು "ಬಿ" ವರ್ಗದ 91 ಮನೆಗಳಿಗೆ ರೂ.22.75 ಲಕ್ಷ (ರೂ.25000/- ದಂತೆ) ಪರಿಹಾರ ವಿತರಣೆ ಮಾಡಲಾಗಿದೆ ಎಂದು ತಿಳಿಸಿದರು.
4) ಸರ್ಕಾರದ ಆದೇಶ ಸಂ.ವಇ.121.ಹೆಚ್.ಎ.ಎಂ.2019 ದಿ:25-10-19 ರಲ್ಲಿ ಆಗಸ್ಟ್ ತಿಂಗಳಲ್ಲಿ ಪ್ರವಾಹ ಪೀಡಿತ ಎಂದು ಘೋಷಣೆ ಮಾಡಿದ ತಾಲ್ಲೂಕುಗಳಲ್ಲಿ ಹಾನಿಯಾದ "ಸಿ" ವರ್ಗದ ಮನೆಗಳಿಗೆ ಪರಿಹಾರ ಮೊತ್ತವನ್ನು ರೂ.25000 ದಿಂದ ರೂ.50000/- ಗಳಿಗೆ ಹೆಚ್ಚಿಸಿ ಆದೇಶಿಸಿದ್ದು ಅದರಂತೆ ತಹಶೀಲ್ದಾರರಿಗೆ ಅನುದಾನವನ್ನು ಎಸ್.ಡಿ.ಆರ್.ಎಫ್. ನಿಧಿಯಡಿ ಬಿಡುಗಡೆ ಮಾಡಿದ್ದು, ಒಂದು ವಾರದೊಳಗೆ ಹೆಚ್ಚುವರಿ ಪರಿಹಾರ ವಿತರಣೆ ಮಾಡಲಾಗುವುದು ಎಂದು ತಿಳಿಸಿದರು.

5) ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಬಳ್ಳಾರಿ ಇವರು ಪ್ರಸ್ತುತ ಜಿಲ್ಲೆಯಲ್ಲಿ ಎಲ್ಲೂ ಖಾಸಗಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿಲ್ಲ ಎಂದು ತಿಳಿಸಿದರು.

6) ಉಪ ನಿರ್ದೇಶಕರು, ಪಶುಸಂಗೋಪನಾ ಇಲಾಖೆ, ಬಳ್ಳಾರಿ ಇವರು ಪ್ರಸ್ತುತ ಜಿಲ್ಲೆಯಲ್ಲಿ ಯವುದೇ ಗೋಶಾಲೆ ಮತ್ತು ಮೇವು ಬ್ಯಾಂಕ್ ಕಾರ್ಯನಿರ್ವಹಿಸುತ್ತಿಲ್ಲ ಎಂದು ತಿಳಿಸಿದರು. ಇತ್ತೀಚಿನ ದಿನಗಳಲ್ಲಿ ಮಳೆ ಆದ ಕಾರಣ ಸಾಕಷ್ಟು ಮೇವು ಲಭ್ಯವಿದ್ದು ಗೋಶಾಲೆ ಅಥವಾ ಮೇವು ಬ್ಯಾಂಕ್ ತೆರೆಯುವ ಅವಶ್ಯಕತೆ ಇರುವುದಿಲ್ಲ ಎಂದು ತಿಳಿಸಿದರು.

7) ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಬಳ್ಳಾರಿ ಇವರು ನಗರ ಸ್ಥಳೀಯ ಸಂಸ್ಥೆಗಳಲ್ಲಿ ಖಾಸಗಿ ಟ್ಯಾಂಕರ್ ಮೂಲಕ ಕುಡಿಯುವ ನೀರು ಸರಬರಾಜು ಮಾಡಲಾಗುತ್ತಿಲ್ಲ ಮತ್ತು ಬಳ್ಳಾರಿ ಮಹಾನಗರ ಪಾಲಿಕೆಯಲ್ಲಿ ಮಾತ್ರ ಕುಡಿಯುವ ನೀರಿನ ಕಾಮಗಾರಿಗಳ ದುರಸ್ತಿ ಸಮಯದಲ್ಲಿ ತಾತ್ಕಾಲಿಕವಾಗಿ ಇಲಾಖಾ ಟ್ಯಾಂಕರ್ ಮುಖಾಂತರ ನೀರು ಸರಬರಾಜು ಮಾಡಲು ಕ್ರಮ ಕೈಗೊಳ್ಳಲಾಗಿದೆ ಎಂದು ತಿಳಿಸಿದರು.

8) ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಬಳ್ಳಾರಿ ಇವರು ಪ್ರಸ್ತುತ ಜಿಲ್ಲೆಯಲ್ಲಿ ಪ್ರವಾಹ ಮತ್ತು ಮಳೆಯಿಂದಾದ ಹಾನಿಗಳ ಬಗ್ಗೆ ಪರಿಹಾರ ಕಾರ್ಯ ಪ್ರಗತಿಯಲ್ಲಿದ್ದು ಯಾವುದೇ ಸಮಸ್ಯೆ ಇರುವುದಿಲ್ಲ ಎಂದು ತಿಳಿಸಿದರು.

ಅಂತಿಮವಾಗಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಈ ಕೆಳಕಂಡ ಸೂಚನೆಗಳನ್ನು ನೀಡಿದರು.

1) ಆಗಸ್ಟ್ 2019ರ ತಿಂಗಳಲ್ಲಿ ಹಾನಿಯಾದ "ಸಿ" ವರ್ಗದ ಮನೆಗಳಿಗೆ ನೀಡಬೇಕಾದ ಹೆಚ್ಚುವರಿ ರೂ.25000/- ಪರಿಹಾರ ಮೊತ್ತವನ್ನು ಒಂದು ವಾರದೊಳಗೆ ನೀಡಲು ಸೂಚಿಸಿದರು.

2) ಸರ್ಕಾರದ ಹಂತದಲ್ಲಿ ವಿಲೇ ಆಗಲು ಯಾವುದಾದರೂ ಕಡತಗಳು ಬಾಕಿ ಇದ್ದಲ್ಲಿ ಅವುಗಳ ವಿವರವನ್ನು ನೀಡಲು ಸೂಚಿಸಿದರು.

3) 2019ರ ಸೆಪ್ಟಂಬರ್ ಮತ್ತು ಅಕ್ಟೋಬರ್ ತಿಂಗಳಲ್ಲಿ ಮಳೆಯಿಂದಾದ ಹಾನಿಗಳಿಗೆ ನಿಯಮಾನುಸಾರ ಪರಿಹಾರ ನೀಡಲು ಸೂಚಿಸಿದರು.

ಧನ್ಯವಾದಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ವಾಣಿಜ್ಯ ಮತು ಕೈಗಾರಿಕ ಇಲಾಖೆ,
ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,
ಬಳ್ಳಾರಿ ಜಿಲ್ಲೆ, ಬಳ್ಳಾರಿ.

**ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಮಾನ್ಯ ಸರ್ಕಾರದ ಕಾರ್ಯದರ್ಶಿಯವರು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಅಧ್ಯಕ್ಷತೆಯಲ್ಲಿ ದಿನಾಂಕ:30.10.2019 ರಂದು ಜರುಗಿದ ಉಡುಪಿ ಜಿಲ್ಲಾ ಮಟ್ಟದ ಅಧಿಕಾರಿಗಳೊಡನೆ ಜಿಲ್ಲಾಭಿವೃದ್ಧಿ, ಮರಳು ಸಮಸ್ಯೆ ಹಾಗೂ ನೆರೆ ಪರಿಹಾರ ಬಗ್ಗೆ ಪರಿಶೀಲನಾ ಸಭೆಯ ನಡವಳಿ:**

**ಸಮಯ: ಪೂರ್ವಾಹ್ನ 10.00 ಗಂಟೆ** | **ಸ್ಥಳ: ಜಿಲ್ಲಾಧಿಕಾರಿ ಕಛೇರಿ ಸಭಾಂಗಣ**

ಉಪಸ್ಥಿತರು:

1) ಶ್ರೀ ಎಂ.ಮಹೇಶ್ವರ ರಾವ್, ಭಾ.ಆ.ಸೇ. ಸರ್ಕಾರದ ಕಾರ್ಯದರ್ಶಿಯವರು, ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹಾಗೂ ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರು
2) ಶ್ರೀ ಜಿ.ಜಗದೀಶ, ಭಾ.ಆ.ಸೇ. ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
3) ಶ್ರೀಮತಿ ಪ್ರೀತಿ ಗೆಹಲೋಟ್, ಭಾ.ಆ.ಸೇ. ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯತ್, ಉಡುಪಿ ಜಿಲ್ಲೆ
4) ಶ್ರೀಮತಿ ನಿಶಾ ಜೇಮ್ಸ್, ಭಾ.ಪೊ.ಸೇ. ಜಿಲ್ಲಾ ಪೊಲೀಸ್ ಅಧೀಕ್ಷಕರು, ಉಡುಪಿ ಜಿಲ್ಲೆ
5) ಶ್ರೀ ಬಿ.ಸದಾಶಿವ ಪ್ರಭು, ಕ.ಆ.ಸೇ. ಅಪರ ಜಿಲ್ಲಾಧಿಕಾರಿ, ಉಡುಪಿ ಜಿಲ್ಲೆ
6) ಶ್ರೀ ಕೆ.ರಾಜು, ಕ.ಆ.ಸೇ(ಕಿ.ಶ್ರೇ). ಸಹಾಯಕ ಕಮೀಷನರು, ಕುಂದಾಪುರ

ಹಾಗೂ ಹಾಜರಿಯಲ್ಲಿ ಸಹಿ ಮಾಡಿದವರು

**********

ಸಭೆಯ ಮೊದಲಿಗೆ ಅಪರ ಜಿಲ್ಲಾಧಿಕಾರಿಯವರು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಸ್ವಾಗತಿಸುತ್ತಾ, ಜಿಲ್ಲಾಧಿಕಾರಿಯವರನ್ನು ಹಾಗೂ ಉಪಸ್ಥಿತರಿದ್ದ ಎಲ್ಲಾ ಅಧಿಕಾರಿಯವರನ್ನು ಸ್ವಾಗತಿಸುತ್ತಾ ಪರಿಶೀಲನಾ ಸಭೆಯನ್ನು ನಡೆಸಿಕೊಡುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರನ್ನು ಕೋರಿದರು.

<u>ಸಭೆಯಲ್ಲಿ ಚರ್ಚಿಸಿದ ಪ್ರಮುಖ ವಿಷಯಗಳು:</u>

- ಉಡುಪಿ ಜಿಲ್ಲೆಯಲ್ಲಿ ಪ್ರಸಕ್ತ ಸಾಲಿನಲ್ಲಿ ಕುಂದಾಪುರ ತಾಲೂಕಿನಲ್ಲಿ ಹೆಚ್ಚುವರಿ ಮಳೆ ಆಗಿದ್ದು, ಜಿಲ್ಲೆಯಲ್ಲಿ ಒಟ್ಟು 1417 ಹಾನಿ ಪ್ರಕರಣಗಳು ದಾಖಲಾಗಿದ್ದು, 1396 ಪ್ರಕರಣಗಳಿಗೆ ಪರಿಹಾರ ಪಾವತಿಸಲಾಗಿರುತ್ತದೆ. ಹಾಗೂ ಉಳಿಕೆ 21 ಪ್ರಕರಣಗಳ ಪಾವತಿಗೆ ಕ್ರಮವಹಿಸಲಾಗುತ್ತಿರುವ ಬಗ್ಗೆ ತಿಳಿಸಲಾಗಿ, ಈ ಬಗ್ಗೆ ಕೂಡಲೇ ಪಾವತಿಗೆ ಕ್ರಮ ವಹಿಸುವಂತೆ ತಹಶೀಲ್ದಾರರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು. ಹಾಗೂ ಜಿಲ್ಲೆಯಲ್ಲಿ ಪರಿಹಾರ ಪಾವತಿಗೆ ಹೆಚ್ಚಿನ ಅನುದಾನ ಕುರಿತಾಗಿ ಕೇಳಲಾಗಿ, ಜಿಲ್ಲಾಧಿಕಾರಿಯವರ ಪಿಡಿ ಖಾತೆಯಲ್ಲಿ ರೂ.46.29 ಕೋಟಿ ಅನುದಾನ ಲಭ್ಯವಿರುವ ಬಗ್ಗೆ ಜಿಲ್ಲಾಧಿಕಾರಿಯವರ ತಿಳಿಸಿದರು.

  (ಕ್ರಮ: ತಹಶೀಲ್ದಾರರು: ಕಾರ್ಕಳ/ಹೆಬ್ರಿ/ಕುಂದಾಪುರ/ಬೈಂದೂರು/ಬ್ರಹ್ಮಾವರ/ಉಡುಪಿ/ಕಾಪು)

- ಈ ಪ್ರಸಕ್ತ ಸಾಲಿನ ತೀವ್ರ ಮಳೆಯಿಂದಾಗಿ ರಾಷ್ಟ್ರೀಯ ಹೆದ್ದಾರಿಗಳು, ಸೇತುವೆಗಳು, ಕಟ್ಟಡಗಳಿಗೆ ಹಾನಿಯಾಗಿರುವ ಕುರಿತು ಪ್ರಾಕೃತಿಕ ವಿಕೋಪದಿಂದ ಹಾನಿಯಾದ ಮೂಲ ಸೌಕರ್ಯಗಳ ಕಾಮಗಾರಿಗಳಿಗೆ ರೂ.20 ಕೋಟಿ ಅನುದಾನ ಬಿಡುಗಡೆಗೊಂಡಿರುವ ಬಗ್ಗೆ ಜಿಲ್ಲಾಧಿಕಾರಿಯವರು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರ ಗಮನಕ್ಕೆ ತಂದರು.

- 2018-19 ನೇ ಸಾಲಿನ ಕೊಳೆರೋಗಕ್ಕೆ ಸಂಬಂಧಿಸಿದಂತೆ ಪರಿಹಾರ ಪಾವತಿಯಾದ ಪ್ರಕರಣಗಳ ಕುರಿತು ಈವರೆಗೆ ಗ್ರಾಮವಾರು ಪಟ್ಟಿ ಸ್ವೀಕೃತವಾಗದೇ ಇರುವ ಬಗ್ಗೆ ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಇವರು ಸಭೆಯ ಗಮನಕ್ಕೆ ತಂದಾಗ ಈ ಬಗ್ಗೆ Bhoomi Monitoring Cell ಗೆ ಜಿಲ್ಲಾಧಿಕಾರಿಯವರ ಮುಖಾಂತರ ಪತ್ರ ಕಳುಹಿಸುವಂತೆ ಹಾಗೂ ಪ್ರತಿಯನ್ನು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- 2019-20 ನೇ ಸಾಲಿನ ಮಳೆಹಾನಿಗೆ ಸಂಬಂಧಿಸಿದಂತೆ 26 ಹೆಕ್ಟೇರು ಬೆಳೆ ಹಾನಿಯಾಗಿರುವ ಬಗ್ಗೆ ಹಾಗೂ ಕೊಳೆ ರೋಗ ಪ್ರಕರಣಗಳ ಕುರಿತು ಸರ್ವೇ ಕಾರ್ಯಕ್ಕೆ ಅನುಮತಿ ನೀಡುವಂತೆ ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ಕೋರಲಾಗಿ ಈ ಬಗ್ಗೆ ಜಿಲ್ಲಾಧಿಕಾರಿಯವರೊಂದಿಗೆ ಚರ್ಚಿಸಿ ವರದಿಯೊಂದಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  ( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- ಅಕ್ಟೋಬರ್‌ನಲ್ಲಾದ 2 ನೇ ಹಂತದ ಮಳೆಯಿಂದಾಗಿ ಜಿಲ್ಲೆಯಲ್ಲಿ ಒಟ್ಟು 16 ಹೆಕ್ಟೇರ್ ನಷ್ಟು ಭತ್ತದ ಬೆಳೆ ಹಾನಿಯಾಗಿದೆ ಎಂದು ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ಈ ಹಾನಿಯ ಬಗ್ಗೆ ಪರಿಹಾರವನ್ನು ಪಾವತಿಸಲು ಪರಿಹಾರ ತಂತ್ರಾಂಶದಲ್ಲಿ ಹಾನಿ ವಿವರ ದಾಖಲಿಸಲು ಕ್ರಮ ವಹಿಸುವಂತೆ ಹಾಗೂ ಸಂಪೂರ್ಣ ವರದಿ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಜಂಟಿ ಕೃಷಿ ನಿರ್ದೇಶಕರಿಗೆ ತಿಳಿಸಿದರು.

( ಕ್ರಮ: ಜಂಟಿ ಕೃಷಿ ನಿರ್ದೇಶಕರು ಕೃಷಿ ಇಲಾಖೆ, ಉಡುಪಿ )

- ಜಿಲ್ಲೆಯಲ್ಲಿ Geographical Indication ಬೆಳೆಗಳಾದ ಮಟ್ಟು ಗುಳ್ಳ ಮತ್ತು ಉಡುಪಿ ಮಲ್ಲಿಗೆಗೆ ಮಾರುಕಟ್ಟೆಯಲ್ಲಿ ಹೆಚ್ಚಿನ ಅವಕಾಶ ಕಲ್ಪಿಸಲು ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ ಇವರು ಕೋರಲಾಗಿ ಈ ಬಗ್ಗೆ ಸೂಕ್ತ ಪ್ರಸ್ತಾವನೆಯನ್ನು ಸರ್ಕಾರಕ್ಕೆ ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಸಲ್ಲಿಸುವಂತೆ ಸೂಚಿಸಿದರು.

( ಕ್ರಮ: ಉಪನಿರ್ದೇಶಕರು ತೋಟಗಾರಿಕೆ ಇಲಾಖೆ, ಉಡುಪಿ )

- ಪ್ರಧಾನ ಮಂತ್ರಿಕ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ 135000 ರೈತರ ನೋಂದಣಿಯಾಗಿರುವ ಬಗ್ಗೆ ಜಂಟಿ ಕೃಷಿ ನಿರ್ದೇಶಕರು ತಿಳಿಸಿದರು. ನೋಂದಣಿಯಾದ ರೈತರ ಪೈಕಿ 5 ಸೆಂಟ್ಸ್ ಗಿಂತ ಕಡಿಮೆ ಜಮೀನು ಹೊಂದಿರುವ ರೈತರ ವಿವರಗಳನ್ನು ಪಡೆದು 10% ರಷ್ಟು ಅರ್ಜಿಗಳನ್ನು ಸ್ಥಳ ತನಿಖೆ ನಡೆಸಿ ಪರಿಶೀಲಿಸಿ ಕ್ರಮ ವಹಿಸುವಂತೆ ಜಂಟಿ ಕೃಷಿ ನಿರ್ದೇಶಕರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಜಂಟಿ ಕೃಷಿ ನಿರ್ದೇಶಕರು, ಉಡುಪಿ )

- ಬೆಳೆಗಳನ್ನು ಉತ್ತಮ ಗುಣಮಟ್ಟದಲ್ಲಿ ಯಾಂತ್ರೀಕರಣ ಮಾಡಿರುವ ಕುರಿತು ಬಾಗಲಕೋಟೆ ಜಿಲ್ಲೆಗೆ ಜಿಲ್ಲಾಧಿಕಾರಿಯವರು ಭೇಟಿ ನೀಡಿ ಪರಿಶೀಲಿಸುವಂತೆ ಹಾಗೂ ಅದರ ಮಾದರಿಯನ್ನು ಉಡುಪಿಯಲ್ಲಿ ಅಳವಡಿಸಲು ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.
- ಮೋಜಣಿ ಪ್ರಗತಿ ಬಗ್ಗೆ ಪರಿಶೀಲಿಸಲಾಗಿ ಸೆಪ್ಟೆಂಬರ್ ಅಂತ್ಯದಲ್ಲಿ ಒಟ್ಟು 9785 ಬಾಕಿ ಪ್ರಕರಣಗಳಿದ್ದು, ಈ ಬಗ್ಗೆ ವಿಚಾರಿಸಲಾಗಿ ಪಹಣಿ ತಿದ್ದುಪಡಿ ಅವಶ್ಯಕತೆಯಿಂದಾಗಿ ಹೆಚ್ಚಿನ ಪ್ರಕರಣಗಳು ಬಾಕಿ ಇವೆ ಎಂದು ಭೂದಾಖಲೆಗಳ ಉಪನಿರ್ದೇಶಕರು ತಿಳಿಸಿದರು. ಈ ಎಲ್ಲಾ ಪ್ರಕರಣಗಳನ್ನು ಮುಂದಿನ ತಿಂಗಳ ಸಭೆಯೊಳಗೆ ವಿಲೇವಾರಿ ಪ್ರಗತಿಯನ್ನು ಸಾಧಿಸುವಂತೆ ಎಲ್ಲಾ ತಹಸೀಲ್ದಾರರಿಗೆ, ಭೂದಾಖಲೆಗಳ ಉಪನಿರ್ದೇಶಕರಿಗೆ ನಿರ್ದೇಶಿಸಿದರು ಹಾಗೂ ಈ ಬಗ್ಗೆ ಜಿಲ್ಲಾಧಿಕಾರಿಯವರು ಖಚಿತಪಡಿಸಿಕೊಳ್ಳುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಭೂದಾಖಲೆಗಳ ಉಪನಿರ್ದೇಶಕರು/ಎಲ್ಲಾ ತಹಸೀಲ್ದಾರರು)

- ಭಾಗಶಃ ಡೀಮ್ಡ್ ಅರಣ್ಯ ವ್ಯಾಪ್ತಿಯಲ್ಲಿರುವ ಕ್ರಶರ್ ಪ್ರದೇಶಗಳನ್ನು ಸರ್ವೇ ಮಾಡಿರುವ ಬಗ್ಗೆ ಅರಣ್ಯ ಇಲಾಖೆ ಮತ್ತು ಸರ್ವೇ ಇಲಾಖೆಯವರಿಗೆ ಕೇಳಲಾಗಿ, ಸರ್ವೇ ಕಾರ್ಯವನ್ನು ಮುಗಿಸಿರುವುದಾಗಿ ಭೂದಾಖಲೆಗಳ ಉಪನಿರ್ದೇಶಕರು ತಿಳಿಸಲಾಗಿ ಕೂಡಲೇ ವರದಿಯನ್ನು ಜಿಲ್ಲಾಧಿಕಾರಿಯವರಿಗೆ ಸಲ್ಲಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ನಿರ್ದೇಶಿಸಿದರು.

(ಕ್ರಮ: ಭೂದಾಖಲೆಗಳ ಉಪನಿರ್ದೇಶಕರು/ ತಹಶೀಲ್ದಾರ್ ಕಾರ್ಕಳ, ಹೆಬ್ರಿ ಕುಂದಾಪುರ)

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ 2 ವಿದ್ಯಾರ್ಥಿ ನಿಲಯಗಳಿಗೆ ಜಮೀನು ಖರೀದಿ ಪ್ರಕ್ರಿಯೆ ಬಾಕಿ ಇರುವ ಬಗ್ಗೆ ಉಪ ನಿರ್ದೇಶಕರು ತಿಳಿಸಲಾಗಿ, ಸದರಿ ಜಮೀನಿನ ಬಗ್ಗೆ ಇರುವ ಸಮಸ್ಯೆಗಳಿಗೆ ಸಂಬಂಧಿಸಿ ಆಯಾ ಇಲಾಖಾಧಿಕಾರಿಯವರೇ ಖುದ್ದು ಸರ್ಕಾರಿ ಅಥವಾ ಖಾಸಗಿ ಜಮೀನುಗಳನ್ನು ಗುರುತಿಸಿ ನಂತರ ತಹಶೀಲ್ದಾರರ ಜೊತೆ ಚರ್ಚೆ ಮಾಡಿ ಪ್ರಸ್ತಾವನೆ ಸಲ್ಲಿಸಲು ಸೂಕ್ತ ಕ್ರಮ ವಹಿಸುವುದು. ಇಲ್ಲವಾದಲ್ಲಿ ಸ್ವಲ್ಪ ಸಮಯದ ವರೆಗೆ ಬಾಡಿಗೆ ಕಟ್ಟಡದಲ್ಲಿ ನಿರ್ವಹಿಸಲು ಜಿಲ್ಲಾಧಿಕಾರಿಯವರೊಡನೆ ಚರ್ಚಿಸಿ ಸೂಕ್ತ ಕ್ರಮ ವಹಿಸುವಂತೆ ಹಾಗೂ ವಸತಿ ನಿಲಯದ ವಿದ್ಯಾರ್ಥಿಗಳಿಗೆ ತರಬೇತಿ (Remedial Teaching) ನೀಡುತ್ತಿರುವ ಬಗ್ಗೆ ವಿಚಾರಿಸಲಾಗಿ, ಸದರಿ ವಿದ್ಯಾರ್ಥಿಗಳಿಗೆ ಖಾಯಂ ಶಿಕ್ಷಕರು ಲಭ್ಯವಿಲ್ಲದ ಕಾರಣ ಖಾಸಗಿ ಶಿಕ್ಷಕರಿಂದ ತರಬೇತಿಯನ್ನು ನೀಡಲಾಗುತ್ತಿರುವ

ಬಗ್ಗೆ ಉಪ ನಿರ್ದೇಶಕರು ತಿಳಿಸಿದರು. ಈ ಬಗ್ಗೆ ಪರಿಶೀಲಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಸಮಾಜ ಕಲ್ಯಾಣ ಇಲಾಖೆ, ಸಮಗ್ರ ಗಿರಿಜನ ಅಭಿವೃದ್ಧಿ ಯೋಜನಾ ಇಲಾಖೆ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆಯ ವಸತಿ ನಿಲಯಗಳಿಗೆ ಭೇಟಿ ನೀಡುವುದು, ಅಲ್ಲಿಯ ಬಯೋಮೆಟ್ರಿಕ್ ವ್ಯವಸ್ಥೆ, ಆಹಾರ, ಆರೋಗ್ಯ ತಪಾಸಣೆ, ವಿದ್ಯಾರ್ಥಿಗಳ ಪರೀಕ್ಷಾ ತೇರ್ಗಡೆ ಫಲಿತಾಂಶ ಹೆಚ್ಚಿಸಲು ನಿಯಮಾನುಸಾರ ಅಗತ್ಯ ಕ್ರಮ ವಹಿಸುವಂತೆ ಹಾಗೂ ಈ ಬಗ್ಗೆ ಮುತುವರ್ಜಿ ವಹಿಸುವಂತೆ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಉಡುಪಿ ಜಿಲ್ಲೆಯಲ್ಲಿ ಅಪೌಷ್ಟಿಕ ಮತ್ತು ತೀವ್ರ ಅಪೌಷ್ಟಿಕ ಮಕ್ಕಳು ಇಲ್ಲದಂತೆ ನೋಡಿಕೊಳ್ಳುವುದು. ಸ್ಥಳೀಯ ಮತ್ತು ವಲಸೆ ಮಕ್ಕಳ ಆರೋಗ್ಯದ ಕುರಿತಾದ ಮಾಹಿತಿಯನ್ನು ಪಡೆದು ಅವರಿಗೆ CSR ಅನುದಾನದಿಂದ ಮಕ್ಕಳ ಪೌಷ್ಟಿಕತೆ ಹೆಚ್ಚಿಸಲು ಆರೋಗ್ಯ ಕುಟುಂಬ ಕಲ್ಯಾಣ ಇಲಾಖೆಯ ಸಹಕಾರದೊಂದಿಗೆ ಸೂಕ್ತ ಕ್ರಮವಹಿಸುವಂತೆ ಹಾಗೂ ಅಪೌಷ್ಟಿಕ ಮಕ್ಕಳ ಬಗ್ಗೆ ಕಾಳಜಿ ಮಾಡಲು ಜಿಲ್ಲೆಯಲ್ಲಿ ನೋಡಲ್ ಅಧಿಕಾರಿಯವರನ್ನು ನೇಮಿಸಲು ಕ್ರಮವಹಿಸುವಂತೆ ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯಲ್ಲಿ ಸಿಬ್ಬಂದಿಯವರ ಕೊರತೆಯಿರುವ ಬಗ್ಗೆ ಸಭೆಯ ಗಮನಕ್ಕೆ ಉಪನಿರ್ದೇಶಕರು ತಂದಾಗ ಈ ಬಗ್ಗೆ ಅರೆ ಸರ್ಕಾರಿ ಪತ್ರವನ್ನು ನಿರ್ದೇಶಕರಿಗೆ ಕಳುಹಿಸಲು ಕ್ರಮ ವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಜಿಲ್ಲೆಯಲ್ಲಿ 90 Nutrition Rehabilitation Center (**NRC**) ಗಳಿದ್ದು, ಇವುಗಳಲ್ಲಿ 14 ತೀವ್ರ ಅಪೌಷ್ಟಿಕ ಮಕ್ಕಳ [Severe Acute Malnutrition (SAM)] ಪ್ರಕರಣಗಳಿಗೆ ವಿಶೇಷ ಗಮನ ನೀಡಿ ಚಿಕಿತ್ಸೆ ನೀಡಲಾಗುತ್ತಿದೆ. ಹಾಗೂ 2359 ಮಧ್ಯಮ ತೀವ್ರ ಅಪೌಷ್ಟಿಕ ಮಕ್ಕಳ [Moderate Acute Malnutrition (**MAM**)] ಪ್ರಕರಣಗಳು ಪ್ರತೀ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವಿಶೇಷ ಕಾಳಜಿಯೊಂದಿಗೆ ಚಿಕಿತ್ಸೆ ನೀಡಲಾಗುತ್ತಿದ್ದು, ಪ್ರಕರಣಗಳು ನಿಗದಿತ ಅವಧಿಯಲ್ಲಿ ಪಟ್ಟಿ ಮಾಡಲಾಗುತ್ತಿದೆ. ಎಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ಉಸ್ತುವಾರಿ ಕಾರ್ಯದರ್ಶಿಯವರಿಗೆ ತಿಳಿಸಿದರು. ಆರೋಗ್ಯ ಇಲಾಖೆಗೆ ಸಂಬಂಧಿಸಿದ ಪ್ರಸ್ತಾವನೆಗಳು ಸರ್ಕಾರದ ಹಂತದಲ್ಲಿ ಅನುಮೋದನೆಗೆ ಬಾಕಿ ಇದ್ದಲ್ಲಿ ಅದರ ಮಾಹಿತಿಯನ್ನು ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ಕಳುಹಿಸುವಂತೆ ಸೂಚಿಸಿದರು.

(ಕ್ರಮ: ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು, ಉಡುಪಿ)

- ಜಿಲ್ಲೆಯಲ್ಲಿ ಅಂಗನವಾಡಿಗಳಲ್ಲಿನ ವಲಸೆ ಬಾಲ ಕಾರ್ಮಿಕರ ಗ್ರೇಡ್-4 ಮತ್ತು ಗ್ರೇಡ್-3 ದತ್ತಾಂಶಗಳನ್ನು ಪಟ್ಟಿ ಮಾಡಿ ಅವರ ವ್ಯಕ್ತಿಚಿತ್ರವನ್ನು ಜಿಲ್ಲಾ ಕಾರ್ಮಿಕ ಅಧಿಕಾರಿ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು ತಯಾರಿಸುವಂತೆ ಹಾಗೂ ಜಿಲ್ಲೆಯಲ್ಲಿ ಪ್ರತಿಯೊಬ್ಬ ಬಾಲ ಕಾರ್ಮಿಕರು ಸಹ ಗುರುತಿಸಲ್ಪಡುವಂತೆ ಕ್ರಮ ವಹಿಸಲು ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ/ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಯವರು, ಉಡುಪಿ/ಜಿಲ್ಲಾ ಕಾರ್ಮಿಕ ಅಧಿಕಾರಿ, ಉಡುಪಿ)

- ಜಿಲ್ಲೆಯಲ್ಲಿ ದುಡಿಯುವ ಮಹಿಳೆಯರಿಗೆ Working women hostel ನ ಅವಶ್ಯಕತೆ ಬಗ್ಗೆ ಪರಿಶೀಲಿಸಲು ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಇವರಿಗೆ ಸೂಚಿಸಿದರು.

(ಕ್ರಮ: ಉಪನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಉಡುಪಿ)

- ಸಹಕಾರ ಇಲಾಖೆಗೆ ಸಂಬಂಧಿಸಿ ಬೆಳೆ ಸಾಲ ಮನ್ನಾ ಯೋಜನೆಯಡಿ ಬಾಕಿ ಇರುವ ಅರ್ಜಿಗಳು ಹಾಗೂ ಬ್ಯಾಂಕ್ ಗಳಲ್ಲಿನ ಸಾಲ ಮನ್ನಾ ಅರ್ಜಿಗಳ ಶೀಘ್ರ ವಿಲೇವಾರಿಗೆ ಕ್ರಮ ವಹಿಸುವುದು. ಸಹಕಾರ ಇಲಾಖೆಯ ನೋಂದಣಿ ಆದ ಸ್ವಸಹಾಯ ಸಂಘಗಳ ಮುಕ್ತಾಯದ ಅವಧಿ, ನಿರ್ವಹಣೆ, ಅವುಗಳ ಆಡಳಿತಾತ್ಮಕ ವಿಚಾರಣೆ ವಿವರ ಮತ್ತು ನಗದು ಲೇವಣಿ ಬಾಕಿ ಮಾಹಿತಿಯನ್ನು ಬ್ಯಾಂಕ್ ವಾರು ಸಲ್ಲಿಸುವಂತೆ ಹಾಗೂ ಸದ್ರಿ ವಿಷಯದ ಕುರಿತು ಕೈಗೊಳ್ಳಬಹುದಾದ ಕ್ರಮವನ್ನು ಅನುಸರಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸಹಕಾರಿ ಸಂಘಗಳ ಉಪನಿಬಂಧಕರಿಗೆ ಸೂಚಿಸಿದರು.

(ಕ್ರಮ: ಸಹಕಾರಿ ಸಂಘಗಳ ಉಪನಿಬಂಧಕರು)

- ಜಿಲ್ಲೆಯ ಎಲ್ಲಾ ಖಾಸಗಿ ಮತ್ತು ಸರ್ಕಾರಿ ಪ್ರಾಥಮಿಕ ಹಾಗೂ ಪ್ರೌಢ ಶಾಲೆಗಳು ಮತ್ತು ಪದವಿ ಪೂರ್ವ ಕಾಲೇಜುಗಳ ಮೂಲಭೂತ ಸೌಕರ್ಯಗಳು, ನಿರ್ವಹಣೆ, ಶಿಕ್ಷಕರ ಬೋಧನೆಯ ಗುಣಮಟ್ಟದ ಕುರಿತು ಪದವಿ ಪೂರ್ವ ಶಿಕ್ಷಣ ಇಲಾಖೆಯ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು, ಪ್ರತೀ ಶಾಲೆ/ಕಾಲೇಜು ಮುಖ್ಯಸ್ಥರಿಂದ ಖಾತರಿಪಡಿಸಿಕೊಳ್ಳುವಂತೆ ಹಾಗೂ ರಾಜ್ಯದಲ್ಲಿ ಜಿಲ್ಲೆಯು ಪ್ರಥಮ ಶ್ರೇಯಾಂಕ ಪಡೆಯಲು ಕೈಗೊಳ್ಳಬಹುದಾದ ಮಾರ್ಗಸೂಚಿಗಳನ್ನು ಜಿಲ್ಲಾಧಿಕಾರಿಯವರ ನೇತೃತ್ವದಲ್ಲಿ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್ ಇವರು ತೆಗೆದುಕೊಳ್ಳುವಂತೆ ಅಗತ್ಯವಿದ್ದಲ್ಲಿ ಉಸ್ತುವಾರಿ ಕಾರ್ಯದರ್ಶಿಯವರ ಸಹಕಾರವನ್ನು ಪಡೆಯುವಂತೆ ಸೂಚಿಸಲಾಯಿತು. ಪದವಿ ಪೂರ್ವ ಶಿಕ್ಷಣ ಇಲಾಖೆಯ ಕಾಲೇಜುಗಳ ಕಾರ್ಯಕ್ಷಮತೆಯನ್ನು ಸಹ ಗಣನೆಗೆ ತೆಗೆದುಕೊಳ್ಳುವಂತೆ ಖಾಸಗಿ/ ಸರ್ಕಾರಿ ಶಾಲಾ ಕಾಲೇಜುಗಳ ವರದಿಯನ್ನು ಪಡೆಯುವಂತೆ ಸಹ ಸೂಚಿಸಲಾಯಿತು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್ ಉಡುಪಿ/ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಉಡುಪಿ/ ಉಪನಿರ್ದೇಶಕರು,ಸಾರ್ವಜನಿಕ ಶಿಕ್ಷಣ ಇಲಾಖೆ, ಉಡುಪಿ )

- ಮಕ್ಕಳಿಗೆ ವಿತರಿಸಲಾಗುವ ಪಠ್ಯಪುಸ್ತಕ, ಸಮವಸ್ತ್ರ, ಶೂ ಸಾಕ್ಸ್, ಬೈಸಿಕಲ್ ಗಳ ಗುಣಮಟ್ಟವನ್ನು ಪರಿಶೀಲಿಸಿದ ಬಗ್ಗೆ ಹಾಗೂ ವಿತರಣೆಯಾದ ಬಗ್ಗೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು ಖಚಿತಪಡಿಸಿಕೊಳ್ಳುವಂತೆ ಮತ್ತು ಪ್ರತೀ ಶಾಲೆಗೆ ಭೇಟಿ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಜಿಲ್ಲೆಯಲ್ಲಿ Light Fishing ಮಾಡುವವರಿಗೆ ರೂ.5000 ಗಳ ದಂಡವನ್ನು ವಿಧಿಸಲಾಗುತ್ತಿದ್ದು, ಸದರಿ ದಂಡದ ನೋಟೀಸನ್ನು ಗಣನೆಗೆ ತೆಗೆದುಕೊಳ್ಳದೇ Light Fishing ಮಾಡುತ್ತಿದ್ದು, ಸದ್ರಿ ದಂಡದ ಮೊತ್ತವನ್ನು ಹೆಚ್ಚಿಗೆ ಮಾಡುವಂತೆ ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಇವರು ಕೋರಿದರು. ನೋಟೀಸನ್ನು ಗಣನೆಗೆ ತೆಗೆದುಕೊಳ್ಳದೇ ಇರುವವರ ಕೆರೊಸಿನ್ ಸಬ್ಸಿಡಿಯನ್ನು ರದ್ದುಪಡಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- Light Fishing ಗಾಗಿ ಬೋಟ್ ನಲ್ಲಿ ಜನರೇಟರ್ ತೆಗೆದುಕೊಂಡು ಹೋಗುತ್ತಿದ್ದು, Light Fishing ಬ್ಯಾನ್ ಆಗಿದ್ದು, ಜನರೇಟರ್ ಗಳನ್ನು ಬಂದರಿನ ಒಳಗಡೆ ತೆಗೆದುಕೊಂಡು ಹೋಗದಂತೆ ದ್ವಾರದಲ್ಲಿಯೇ ಪರಿಶೀಲನೆಗೆ ಒಳಪಡಿಸುವುದು ಅಗತ್ಯವಾಗಿದೆ ಎಂದು ಮೀನುಗಾರಿಕಾ ಉಪನಿರ್ದೇಶಕರು ಕೋರಿದಾಗ ಅಗತ್ಯ ನೆರವು ನೀಡುವಂತೆ ಜಿಲ್ಲಾ ಪೊಲೀಸ್ ಅಧೀಕ್ಷಕರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ತಿಳಿಸಿದರು.

(ಕ್ರಮ: ಪೊಲೀಸ್ ಅಧೀಕ್ಷಕರು, ಉಡುಪಿ/ ಪೊಲೀಸ್ ಅಧೀಕ್ಷಕರು, ಕರಾವಳಿ ಕಾವಲು ಪೊಲೀಸ್, ಉಡುಪಿ /ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- ಸಮುದ್ರಕ್ಕೆ ಹೋಗುವ ಹಡಗುಗಳು ಪರವಾನಿಗೆ ಸಂಬಂಧಿಸಿ 476 ಅರ್ಜಿಗಳು ಬಾಕಿ ಇದ್ದು, ಈ ಹಡಗುಗಳಿಗೆ ನೀಡಲಾಗುವ ಪರವಾನಿಗೆ ಕೇಂದ್ರ ಕಛೇರಿಯಿಂದ ಅನುಮೋದನೆ ಆಗಬೇಕಾಗಿದ್ದು, MMIS ನಂಬ್ರವು ಸಕ್ರೀಯಗೊಳಿಸದೇ ಪರವಾನಿಗೆ ಪ್ರಕ್ರಿಯೆ ನಡೆಯುವುದಿಲ್ಲ. ಆದುದರಿಂದ MMIS ನಂಬ್ರವನ್ನು ಸಕ್ರೀಯಗೊಳಿಸುವಂತೆ ಮತ್ತು ಪ್ರತಿಯೊಂದು ಚಿಕ್ಕ ಹಾಗೂ ಮಧ್ಯಮ ಹಡಗುಗಳಿಗೆ Boat Tracking System ನ್ನು ಅಳವಡಿಸಲು ಕೇಂದ್ರ ಕಛೇರಿಗೆ ಪತ್ರ ಬರೆಯಲಾಗಿದ್ದು, ಈ ಬಗ್ಗೆ ಈವರೆಗೆ ಅನುಮೋದನೆಗೆ ದೊರೆತಿರುವುದಿಲ್ಲ. ಈ ಅನುಮೋದನೆ ದೊರಕಿದ್ದಲ್ಲಿ ಸಮುದ್ರಕ್ಕೆ ಹೋಗುವ ಚಿಕ್ಕ ಹಾಗೂ ಮಧ್ಯಮ ಪ್ರಮಾಣದ ಹಡಗುಗಳ ಪತ್ತೆ ಹಚ್ಚುವುದು ಸುಲಭವಾಗುವ ಹಿನ್ನಲೆಯಲ್ಲಿ ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಇವರು ಕೋರಿದರು. ಈ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರ ಕಛೇರಿಗೆ ವಿವರವನ್ನು ಸಲ್ಲಿಸುವಂತೆ ಸೂಚಿಸಿದರು.

(ಕ್ರಮ: ಉಪನಿರ್ದೇಶಕರು, ಬಂದರು ಮತ್ತು ಮೀನುಗಾರಿಕೆ ಇಲಾಖೆ, ಉಡುಪಿ)

- ಜಿಲ್ಲೆಯಲ್ಲಿ ರೇಷ್ಮೆ ಇಲಾಖೆಯ ಫಾರ್ಮ್ ಗಳು ಇರುವ ಬಗ್ಗೆ ಪರಿಶೀಲಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- 2018-19 ನೇ ಸಾಲಿನ ಬರ ನಿರ್ವಹಣೆಗಾಗಿ ಟ್ಯಾಂಕರ್ ಮೂಲಕ ಸರಬರಾಜು ಮಾಡಲಾದ ನೀರಿನ ಬಿಲ್ಲುಗಳನ್ನು ಈವರೆಗೆ ಪಾವತಿಸದಿರುವ ದೂರುಗಳು ಸ್ವೀಕೃತವಾಗುತ್ತಿದ್ದು, ತಕ್ಷಣ ಪರಿಹರಿಸುವಂತೆ ಹಾಗೂ ಕಳೆದ ಬಾರಿ ನೀರಿನ ಸಮಸ್ಯೆಗಳಿದ್ದ ಕಡೆ ಶಾಶ್ವತ ಪರಿಹಾರ ಕಂಡುಕೊಳ್ಳುವಂತೆ ಜಿಲ್ಲಾಧಿಕಾರಿಯವರು ಕಾರ್ಯಕಾರಿ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ ಇವರಿಗೆ ಸೂಚಿಸಿದರು. ಮುಂದಿನ ಬರ ನಿರ್ವಹಣೆಗೆ ಟ್ಯಾಂಕರ್ ಮೂಲಕ ನೀರು ಸರಬರಾಜು ಮಾಡದಂತೆ ನಗರ ಸ್ಥಳೀಯ ಸಂಸ್ಥೆಗಳಿಗೆ ನಿರ್ದೇಶನ ನೀಡುವಂತೆ ಜಿಲ್ಲಾಧಿಕಾರಿಯವರು ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ ಇವರಿಗೆ ಸೂಚಿಸಿದರು. ಹಾಗೂ ನಗರಾಭಿವೃದ್ಧಿ ಇಲಾಖೆಯ ವಸತಿ ಯೋಜನೆಗೆ ಸಂಬಂಧಿಸಿ ಅನುದಾನ ಬಿಡುಗಡೆಯಾಗದಿರುವ ಬಗ್ಗೆ ಯೋಜನಾ ನಿರ್ದೇಶಕರು ತಿಳಿಸಲಾಗಿ ಈ ಬಗ್ಗೆ ಉಸ್ತುವಾರಿ ಕಾರ್ಯದರ್ಶಿಯವರಿಂದ KUIDFC ಗೆ ಅರೆ ಸರ್ಕಾರಿ ಪತ್ರವನ್ನು ಬರೆಯಲು ಸೂಚಿಸಲಾಯಿತು.

(ಕ್ರಮ:ಕಾರ್ಯಕಾರಿ ಅಭಿಯಂತರರು, ಗ್ರಾಮೀಣ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ರಜತಾದ್ರಿ, ಮಣಿಪಾಲ/ ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಉಡುಪಿ)

- ಉದ್ಯೋಗ ಖಾತ್ರಿ ಯೋಜನೆಯಡಿ ತೋಟಗಾರಿಕೆ, ಕೃಷಿ, ಜಲಾನಯನ ಇಲಾಖೆಗಳ ಅಭಿವೃದ್ಧಿಗಾಗಿ NREG ಅನುದಾನವನ್ನು ಸಂಪೂರ್ಣವಾಗಿ ಉಪಯೋಗಿಸಿಕೊಳ್ಳುವುದು ಹಾಗೂ ಜಲಸೌಕರ್ಯಗಳು, ಒಳನಾಡು ಮೀನುಗಾರಿಕೆ ಮುಂತಾದ ಚಟುವಟಿಕೆಗಳನ್ನು ಬೆಂಬಲಿಸಲು ಸೂಕ್ತ ಕ್ರಮವಹಿಸುವಂತೆ ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಮುಖ್ಯ ಕಾರ್ಯನಿರ್ವಹಣಾಧಿಕಾರಿಯವರು, ಜಿಲ್ಲಾ ಪಂಚಾಯತ್, ಉಡುಪಿ)

- ಪಡುಬಿದ್ರೆಯಲ್ಲಿ Blue Flag Beach ರಚನೆಗೆ ಸಂಬಂಧಿಸಿ Architecture Plan ನನ್ನು ಮಣಿಪಾಲ್ ನ ಮಾಹೆಯವರ ಸಹಕಾರದೊಂದಿಗೆ ಪಡೆದು ಅನುಷ್ಠಾನಗೊಳಿಸಲು ಕ್ರಮವಹಿಸುವಂತೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- ಪ್ರವಾಸೀ ಟ್ಯಾಕ್ಸಿ ಯೋಜನೆಯಡಿ ಜಿಲ್ಲೆಗೆ 56 ಅರ್ಜಿಗಳು ಸ್ವೀಕೃತವಾಗಿದ್ದು ಒಟ್ಟು 8 ಗುರಿಗಳಿವೆ. ಅನುದಾನ ಬಿಡುಗಡೆಯಾದ ತಕ್ಷಣ ಟ್ಯಾಕ್ಸಿ ವಿತರಣೆಗೆ ಕ್ರಮವಹಿಸುವುದಾಗಿ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಅನುದಾನ ಬಿಡುಗಡೆಗೆ ಸಂಬಂಧಿಸಿ ಕೇಂದ್ರ ಕಛೇರಿಗೆ ಪತ್ರ ಬರೆದಲ್ಲಿ ಸದ್ರಿ ಮಾಹಿತಿಯನ್ನು ಒದಗಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

(ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- ಕರ್ನಾಟಕ ದರ್ಶನಕ್ಕೆ 572 ವಿದ್ಯಾರ್ಥಿಗಳ ಪಟ್ಟಿಯನ್ನು Karnataka Tourism Infrastructure Limited ಇವರಿಗೆ ಈಗಾಗಲೇ ಸಲ್ಲಿಸಲಾಗಿರುವ ಬಗ್ಗೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಎಲ್ಲಾ ಟ್ರಾವೆಲ್ ಏಜೆಂಟ್ ಗಳನ್ನು ಒಳಗೊಂಡಂತೆ ಟ್ರಾವೆಲ್ ಎಕ್ಸ್ ಪೋ ವರ್ಕ್ ಶಾಪ್ ಆಯೋಜಿಸುವುದರಿಂದ ಪ್ರವಾಸೋದ್ಯಮ ಬೆಳವಣಿಗೆ ಸಾಧ್ಯವಾಗುತ್ತದೆ. ಎಲ್ಲಾ ಪಾಲುದಾರರು ಭಾಗಿಯಾದಲ್ಲಿ ಸರಿಯಾದ ಯೋಜನೆ ಹಾಕಿಕೊಳ್ಳಲು ಸಾದ್ಯವಾಗುವುದರಿಂದ ವರ್ಕ್ ಶಾಪ್ ಆಯೋಜಿಸಲು ಕ್ರಮವಹಿಸುವಂತೆ ಹಾಗೂ ಪಡುಕೆರೆ ಬೀಚ್ ಅಭಿವೃದ್ಧಿ ಪಡಿಸಿ ಸರ್ಫಿಂಗ್ ಗೆ ಉತ್ತೇಜನ ನೀಡಲು ಕ್ರಮವಹಿಸುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  (ಕ್ರಮ: ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ, ಉಡುಪಿ)

- Karnataka Tourism Vision Group (KTVG) ಶಿಫಾರಸ್ಸುಗಳಡಿ ಒಟ್ಟು 3 ಕಾಮಗಾರಿಗಳನ್ನು ಲೋಕೋಪಯೋಗಿ ಇಲಾಖೆಯಿಂದ ಕೈಗೊಳ್ಳಲು ಕೇಂದ್ರ ಕಚೇರಿಯಿಂದ ಅನುಮೋದನೆ ದೊರೆತಿದ್ದು ಅಂದಾಜು ಪಟ್ಟಿ ತಯಾರಿಸಲು ಬಾಕಿ ಇರುವ ಬಗ್ಗೆ ಸಹಾಯಕ ನಿರ್ದೇಶಕರು ಪ್ರವಾಸೋದ್ಯಮ ಇಲಾಖೆ ಇವರು ತಿಳಿಸಿದರು. ಸದ್ರಿ ಅಂದಾಜು ಪಟ್ಟಿಯನ್ನು ಶೀಘ್ರವಾಗಿ ತಯಾರಿಸಿ ಕೊಡುವಂತೆ ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆಗೆ ನೀಡುವಂತೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  (ಕ್ರಮ: ಕಾರ್ಯನಿರ್ವಾಹಕ ಅಭಿಯಂತರರು ಲೋಕೋಪಯೋಗಿ ಇಲಾಖೆ)

- ಕೈಗಾರಿಕಾ ವಸಾಹತುಗಳ ಸ್ಥಾಪನೆಗೆ ಸಂಬಂಧಿಸಿ ಸೂಕ್ತ ಜಾಗವನ್ನು ಗುರುತಿಸುವಂತೆ ಸಹಾಯಕ ಕಮೀಷನರ್, ಕುಂದಾಪುರ ಇವರಿಗೆ ಮಾನ್ಯ ಉಸ್ತುವಾರಿ ಕಾರ್ಯದರ್ಶಿಯವರು ಸೂಚಿಸಿದರು.

  (ಕ್ರಮ: ಸಹಾಯಕ ಕಮೀಷನರ್, ಕುಂದಾಪುರ)

**(ಎಂ.ಮಹೇಶ್ವರ್ ರಾವ್)**
ಸರ್ಕಾರದ ಕಾರ್ಯದರ್ಶಿ
ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ
(ಎಂಎಸ್ಎಂಇ ಮತ್ತು ಗಣಿ)
ಹಾಗೂ
ಉಡುಪಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ., ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ದಿನಾಂಕ: 21.10.2019 ರಂದು ಪೂರ್ವಾಹ್ನ 11.30 ಗಂಟೆಗೆ ತಾಲ್ಲೂಕು ಕಚೇರಿ ಸಭಾಂಗಣ, ಶಿಡ್ಲಘಟ್ಟ ತಾಲ್ಲೂಕಿನಲ್ಲಿ ನಡೆಸಲಾದ ಚಿಕ್ಕಬಳ್ಳಾಪುರ ಜಿಲ್ಲೆಯ ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನಾ ಸಭೆಯ ನಡಾವಳಿಗಳು.

********

ಅಧ್ಯಕ್ಷತೆ: ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ.,
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಸಹಕಾರ ಇಲಾಖೆ ಹಾಗೂ ಚಿಕ್ಕಬಳ್ಳಾಪುರ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು.

ಸಭೆಯಲ್ಲಿ ಹಾಜರಿದ್ದವರು :

1) ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ.
2) ಮುಖ್ಯ ಕಾರ್ಯ ನಿರ್ವಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ ಜಿಲ್ಲೆ.
3) ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
4) ಉಪನಿರ್ದೇಶಕರು, ಪದವಿ ಪೂರ್ವ ಶಿಕ್ಷಣ ಇಲಾಖೆ, ಚಿಕ್ಕಬಳ್ಳಾಪುರ.
5) ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಚಿಕ್ಕಬಳ್ಳಾಪುರ.
6) ಉಪನಿರ್ದೇಶಕರು, ತೋಟಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
7) ಉಪ ಅರಣ್ಯ ಸಂರಕ್ಷಣಾಧಿಕಾರಿಗಳು, ಸಾಮಾಜಿಕ ಅರಣ್ಯ ಇಲಾಖೆ, ಚಿಕ್ಕಬಳ್ಳಾಪುರ.
8) ಹಿರಿಯ ಸಹಾಯಕ ನಿರ್ದೇಶಕರು, ವಾರ್ತ ಮತ್ತು ಪ್ರಚಾರ ಇಲಾಖೆ, ಚಿಕ್ಕಬಳ್ಳಾಪುರ.
9) ಜಂಟಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ ಜಿಲ್ಲೆ.
10) ಉಪನಿರ್ದೇಶಕರು, ರೇಷ್ಮೆ ಇಲಾಖೆ, ಚಿಕ್ಕಬಳ್ಳಾಪುರ.
11) ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ ಚಿಕ್ಕಬಳ್ಳಾಪುರ.
12) ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರು & ನೈರ್ಮಲ್ಯ ವಿಭಾಗ ಚಿಕ್ಕಬಳ್ಳಾಪುರ.
13) ಜಿಲ್ಲೆಯ ಎಲ್ಲಾ ತಹಶೀಲ್ದಾರ್‌ಗಳು ಚಿಕ್ಕಬಳ್ಳಾಪುರ ಜಿಲ್ಲೆ.
14) ಜಿಲ್ಲೆಯ ಎಲ್ಲಾ ಕಾರ್ಯನಿರ್ವಾಹಣಾಧಿಕಾರಿಗಳು, ಚಿಕ್ಕಬಳ್ಳಾಪುರ.
15) ಇತರೆ ಎಲ್ಲಾ ಜಿಲ್ಲಾ ಹಾಗೂ ತಾಲ್ಲೂಕು ಮಟ್ಟದ ಅಧಿಕಾರಿಗಳು

ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರಾದ ಡಾ॥ ಎನ್.ನಾಗಾಂಭಿಕಾದೇವಿ, ಭಾ.ಆ.ಸೇ., ರವರಿಗೆ ತಹಶೀಲ್ದಾರ್, ಶಿಡ್ಲಘಟ್ಟ ತಾಲ್ಲೂಕು ರವರು ಸ್ವಾಗತ ಕೋರಿ ಜಿಲ್ಲೆಯ ಎಲ್ಲಾ ಇಲಾಖೆಗಳ ಪ್ರಗತಿ ಪರಿಶೀಲನೆ ಸಭೆಯ ಅಧ್ಯಕ್ಷತೆಯನ್ನು ವಹಿಸಿ ಸಭೆಯನ್ನು ನಡೆಸಿಕೊಡಲು ಕೋರಿದರು. ನಂತರ ಸಭೆಯನ್ನು ಪ್ರಾರಂಭಿಸಿ ಈ ಕೆಳಕಂಡ ಇಲಾಖೆಗಳ ಬಗ್ಗೆ ಪ್ರಗತಿ ಪರಿಶೀಲನೆಯನ್ನು ನಡೆಸಲಾಯಿತು.

ಇಲಾಖಾವಾರು ಪ್ರಗತಿ ಪರಿಶೀಲನೆ:-



Scanned by CamScanner

1) **ಕೃಷಿ ಇಲಾಖೆ :-**

ಜಂಟಿ ನಿರ್ದೇಶಕರು, ಕೃಷಿ ಇಲಾಖೆ ರವರು ಮಾತನಾಡಿ, ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನಲ್ಲಿ ಅಕ್ಟೋಬರ್ 18ರವರೆಗೂ ಉತ್ತಮ ಮಳೆಯಾಗಿರುವುದರಿಂದ ಮುಂಗಾರುನಲ್ಲಿ ಒಟ್ಟು 154000 ಹೆಕ್ಟೇರ್‌ನಷ್ಟು ಪ್ರದೇಶದಲ್ಲಿ ಬಿತ್ತನೆ ಗುರಿಯನ್ನು ಹೊಂದಲಾಗಿ 131358 ಹೆಕ್ಟರ್‌ನಷ್ಟು ಪ್ರದೇಶದಲ್ಲಿ 85.30% ರಷ್ಟು ಬಿತ್ತನೆಯಾಗಿದ್ದು, ರಾಗಿ ಬೆಳೆ ಉತ್ತಮವಾಗಿ ಬೆಳೆದಿರುವುದರಿಂದ ಜಾನುವಾರುಗಳಿಗೆ ಮೇವು ಲಭ್ಯವಾಗುವುದಾಗಿ ತಿಳಿಸಿದರು.

- 2018 ರ ಮುಂಗಾರು ಹಂಗಾಮಿನ ಬೆಳೆ ವಿಮೆಯನ್ನು ಒಟ್ಟು 22514 ರೈತರಿಗೆ ಒಟ್ಟು 3762.77 ಲಕ್ಷಗಳನ್ನು ಬಿಡುಗಡೆಗೊಳಿಸಬೇಕಾಗಿದ್ದು, 3114.50 ಲಕ್ಷಗಳು ಬಿಡುಗಡೆಯಾಗಿದ್ದು, ಒಟ್ಟು 18617 ರೈತರಿಗೆ ಜಮೇ ಮಾಡಲಾಗಿರುತ್ತದೆಂದು ತಿಳಿಸಿದರು. ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಸಭೆಯನ್ನು ಆಯೋಜಿಸಿ ಉಳಿದ ಫಲಾನುಭವಿಗಳಿಗೂ ಬೆಳೆವಿಮೆಯ ಮೊತ್ತವನ್ನು ಶೀಘ್ರವಾಗಿ ಪಾವತಿಸಲು ಸಂಬಂಧಪಟ್ಟ ವಿಮೇ ಕಂಪನಿಗೆ ಸೂಚಿಸಲಾಗಿರುತ್ತದೆಂದು ತಿಳಿಸಿದರು.
- ಬಾಕಿ ಉಳಿದ 15% ಬಿತ್ತನೆ ಪ್ರದೇಶದಲ್ಲಿ ರೈತರಿಗೆ ಉತ್ತೇಜಸಿ ನಿಗದಿತ ಗುರಿಯನ್ನು ಸಾಧಿಸಲು ಸೂಚಿಸಿದರು.
- ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಬಿತ್ತನೆ ಬೀಜ ಘಟಕ ಸ್ಥಾಪಿಸಲು ಅನುಮತಿಯನ್ನು ಜಂಟಿ ನಿರ್ದೇಶಕರು, ಕೋರಿದರು. ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಜಿಲ್ಲಾಡಳಿತ ವತಿಯಿಂದ ಪ್ರಸ್ತಾವನೆಯನ್ನು ಸಲ್ಲಿಸಿದಲ್ಲಿ ಮಂಜೂರು ಮಾಡಲು ಕ್ರಮವಹಿಸಲಾಗುವುದು ಎಂಬುದಾಗಿ ತಿಳಿಸಿದರು.
- ನಗರ ಪ್ರದೇಶದ ಸಾರ್ವಜನಿಕರಿಗೆ ವ್ಯವಸಾಯದ ಬಗ್ಗೆ ಅರಿವು ಮೂಡಿಸಲು ಒಂದು ಕ್ರಿಯಾಯೋಜನೆಯನ್ನು ಸಿದ್ಧಪಡಿಸಿಕೊಂಡು ಬಿತ್ತನೆ ಯಾವ ರೀತಿ ಮಾಡಬೇಕು ಎಂಬುದರ ಬಗ್ಗೆ ಅರಿವು ಕಾರ್ಯಕ್ರಮವನ್ನು ಆಯೋಜಿಸಲು ಸೂಚಿಸಿದರು.

**(ಕ್ರಮ: ಜಿಲ್ಲಾಧಿಕಾರಿಗಳು, ಮುಖ್ಯಕಾರ್ಯನಿರ್ವಾಹಣಾಧಿಕಾರಿಗಳು ಮತ್ತು ಜಂಟಿ ಕೃಷಿ ನಿರ್ದೇಶಕರು, ಕೃಷಿ ಇಲಾಖೆ, ಚಿಕ್ಕಬಳ್ಳಾಪುರ)**

2) **ತೋಟಗಾರಿಕಾ ಇಲಾಖೆ:-**

ಉಪನಿರ್ದೇಶಕರು, ತೋಟಾಗಾರಿಕೆ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ತೋಟಾಗಾರಿಕಾ ಇಲಾಖೆಗೆ ಸಂಬಂಧಿಸಿದಂತೆ, ಯೋಜನೆಗಳಾದ ಪಿ.ಎಮ್.ಕೆ.ಎಸ್.ವೈ (ಸೂಕ್ಷ್ಮ ನೀರಾವರಿ), ರಾಷ್ಟ್ರೀಯ ತೋಟಾಗಾರಿಕೆ ಮಿಷನ್, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ, ಸಮಗ್ರ ತೋಟಗಾರಿಕೆ ಅಭಿವೃದ್ಧಿ ಯೋಜನೆ, ಕೃಷಿ ಭಾಗ್ಯ ಯೋಜನೆಯಡಿಯಲ್ಲಿ ಶೇ 99.41 ರಷ್ಟು ಪ್ರಗತಿ ಸಾಧಿಸಲಾಗಿರುದಾಗಿ ತಿಳಿಸಿದರು.

- ಜಿಲ್ಲೆಯಲ್ಲಿ ನರೇಗಾ ಯೋಜನೆಯಡಿಯಲ್ಲಿ 1800 ಹೆಕ್ಟರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳನ್ನು ವಿಸ್ತರಿಸುವ ಕಾರ್ಯದೇಶವನ್ನು ನೀಡಲಾಗಿದೆ ಎಂದು ತಿಳಿಸಿದರು.
- ತೋಟಗಾರಿಕೆ ಬೆಳೆಯ ವಿಸ್ತೀರ್ಣವನ್ನು ವಿಸ್ತರಿಸಲು ಕ್ರಮವಹಿಸಲು ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ರವರಿಗೆ ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ತೋಟಗಾರಿಕಾ ಇಲಾಖೆ, ಚಿಕ್ಕಬಳ್ಳಾಪುರ)**

3) **ರೇಷ್ಮೆ ಇಲಾಖೆ : -**

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ರೇಷ್ಮೆ ಬೆಳೆಯ ದರದ ಬಗ್ಗೆ ವಿಚಾರಿಸಿದಾಗ ಉಪನಿರ್ದೇಶಕರು ರೇಷ್ಮೆ ಗೂಡಿನ ದರವು 300/- ರಿಂದ 400/- ರೂಗಳ ವರೆಗೆ ಹೆಚ್ಚಾಗಿರುತ್ತದೆ ಎಂದು ತಿಳಿಸಿದರು.



Scanned by CamScanner

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಶಿಡ್ಲಘಟ್ಟ ತಾಲ್ಲೂಕಿನ ರೇಷ್ಮೆ ಮಾರುಕಟ್ಟೆ ಪ್ರದೇಶದ ಸುತ್ತ ಮುತ್ತಲು ಸಾಂಕ್ರಾಮಿಕ ರೋಗಗಳು ಪೂಪಾದಿಂದ ಉಂಟಾಗುತ್ತಿದ್ದು, ಈ ಬಗ್ಗೆ ಸಾರ್ವಜನಿಕರಿಂದ ದೂರುಗಳು ಸ್ವೀಕೃತವಾಗುತ್ತಿವೆ. ಆದ್ದರಿಂದ ಈ ರೀತಿ ಸಾಂಕ್ರಾಮಿಕ ರೋಗಗಳು ಉಂಟಾಗದಂತೆ ಶಾಶ್ವತ ಪರಿಹಾರ ಒದಗಿಸಲು ಸೂಚಿಸಿದರು.

- ಶಿಡ್ಲಘಟ್ಟ ತಾಲ್ಲೂಕಿನಲ್ಲಿ ಬೆಳೆಯುವ ರೇಷ್ಮೆಯು ಜಗತ್ತಿನಲ್ಲಿಯೇ ಅತೀ ಮೃದುವಾದ ಬೆಳೆಯಾಗಿ ಗುರುತಿಸಲಾಗಿರುವುದರಿಂದ ಜಿಯೋಟ್ಯಾಗ್ ಮಾಡಲು ಅವಶ್ಯಕವಿರುವ ದಾಖಲೆಗಳನ್ನು ತಯಾರಿಸಿ ಜಿಯೋಟ್ಯಾಗ್ ಮಾಡಲು ತಿಳಿಸಿದರು.
- ರೇಷ್ಮೆ ಮಾರುಕಟ್ಟೆಯನ್ನು ಸ್ವಚ್ಛತೆಯಿಂದ ಶುದ್ಧವಾಗಿ ಇಟ್ಟುಕೊಳ್ಳಲು ಸೂಚಿಸಿದರು.

(ಕ್ರಮ ; ರೇಷ್ಮೆ ಉಪನಿರ್ದೇಶಕರು, ಚಿಕ್ಕಬಳ್ಳಾಪುರ)

4) <u>ಕುಡಿಯುವ ನೀರಿನ ಸರಬರಾಜು ಕುರಿತು:-</u>

ಕಾರ್ಯಪಾಲಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ, ಚಿಕ್ಕಬಳ್ಳಾಪುರ ರವರು ಮಾತನಾಡಿ, ಪ್ರಸ್ತುತ ಚಿಕ್ಕಬಳ್ಳಾಪುರ ಜಿಲ್ಲೆಯಲ್ಲಿ ಒಟ್ಟು 95 ಗ್ರಾಮಗಳಿಗೆ ಕುಡಿಯುವ ನೀರಿನ ಸಮಸ್ಯೆ ಇದ್ದು, 26 ಗ್ರಾಮಗಳಲ್ಲಿ ಟ್ಯಾಂಕರ್‌ಗಳ ಮೂಲಕ ಮತ್ತು 69 ಗ್ರಾಮಗಳಲ್ಲಿ ಖಾಸಗಿ ಕೊಳವೆಬಾವಿಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿರುವುದಾಗಿ ತಿಳಿಸಿದರು.

- ನಗರ ಪ್ರದೇಶದ ವ್ಯಾಪ್ತಿಯಲ್ಲಿ ಚಿಂತಾಮಣಿ ತಾಲ್ಲೂಕಿನಲ್ಲಿ ಒಟ್ಟು 20 ವಾರ್ಡ್‌ಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇದ್ದು, 25 ಟ್ಯಾಂಕರ್‌ಗಳ ಮುಖಾಂತರ ಕುಡಿಯುವ ನೀರನ್ನು ಸರಬರಾಜು ಮಾಡಲಾಗುತ್ತಿದೆ ಎಂದು ತಿಳಿಸಿದರು.
- ಕುಡಿಯುವ ನೀರಿಗೆ 14ನೇ ಹಣಕಾಸು ಯೋಜನೆಯಡಿಯಲ್ಲಿ ಅನುದಾನ ಬಳಸಲು ಸೂಚಿಸಲಾಯಿತು.
- ನೋಡಲ್ ಅಧಿಕಾರಿಗಳು ಗ್ರಾಮಗಳಿಗೆ ಭೇಟಿ ನೀಡಿ ಪರಿಶೀಲಿಸಿ, ಸದರಿ ಗ್ರಾಮಗಳಲ್ಲಿ ಕುಡಿಯುವ ನೀರಿನ ಸಂಬಂಧ ಕೈಗೊಳ್ಳಬಹುದಾದ ಶಾಶ್ವತ ಪರಿಹಾರದ ಕುರಿತು ದೃಢೀಕರಿಸಿ ವರದಿಯನ್ನು ಸಲ್ಲಿಸುವಂತೆ ತಿಳಿಸಿದರು.
- ಗ್ರಾಮ ಪಂಚಾಯಿತಿವಾರು ಚಾಲ್ತಿ ಮತ್ತು ಚಾಲ್ತಿ ಇಲ್ಲದ ಕೊಳವೆಬಾವಿಗಳ ವಿವರ ಹಾಗೂ ಗ್ರಾಮ ಪಂಚಾಯಿತಿಗಳಲ್ಲಿ ಲಭ್ಯವಿರುವ ದಾಸ್ತಾನುಗಳ ಬಗ್ಗೆ ವರದಿಯನ್ನು ಸಲ್ಲಿಸಲು ಸೂಚಿಸಿದರು.
- ಏಪ್ರೀಲ್-2019 ರ ಮಾಹೆಯಿಂದ ತಹಲೆವರೆಗೂ ಕೊರೆದಿರುವ ಕೊಳವೆಬಾವಿಗಳಲ್ಲಿ ನೀರಿನ ಲಭ್ಯತೆ ಪ್ರಮಾಣದ ಬಗ್ಗೆ ಪರಿಶೀಲನೆ ಮಾಡಲು ಸೂಚಿಸಿದರು.
- **ಜಿಲ್ಲೆಯ ಎಲ್ಲಾ ಸರ್ಕಾರಿ ಕಛೇರಿಗಳಲ್ಲಿ ನವೆಂಬರ್ ಮಾಹೆಯ ಒಳಗೆ ಮಳೆ ನೀರು ಕೊಯ್ಲುನ್ನು ಅಳವಡಿಸಲು ಸೂಚಿಸಿದರು. ಮತ್ತು ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿಯೂ ಕೂಡ ಮಳೆ ನೀರು ಕೊಯ್ಲುನ್ನು ಅಳವಡಿಸಲು ಸೂಕ್ತ ಕ್ರಮವಹಿಸಲು ಜಿಲ್ಲೆಯ ಎಲ್ಲಾ ಇಲಾಖೆಯ ಕಚೇರಿಯ ಮುಖ್ಯಸ್ಥರಿಗೆ ಸೂಚಿಸಲಾಯಿತು.**
- ಸರ್ಕಾರಿ ಕಛೇರಿಯಲ್ಲಿ ಮಳೆ ನೀರು ಕೊಯ್ಲುನ್ನು ಅಳವಡಿಸಿದ ಅಧಿಕಾರಿಗಳಿಗೆ ಅಭಿನಂದನೆಯನ್ನು ತಿಳಿಸಿದರು.

(ಕ್ರಮ: ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ/ಮುಖ್ಯ ಕಾರ್ಯನಿರ್ವಹಕಾಧಿಕಾರಿಗಳು, ಜಿಲ್ಲಾ ಪಂಚಾಯಿತಿ/ ಜಿಲ್ಲಾ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ/ಕಾರ್ಯಪಾಲಕ ಇಂಜಿನಿಯರ್, ಗ್ರಾಮೀಣ ಕುಡಿಯುವ ನೀರು ಸರಬರಾಜು ಮತ್ತು ನೈರ್ಮಲ್ಯ ವಿಭಾಗ, ಜಿಲ್ಲೆಯ ಎಲ್ಲಾ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು)

Scanned by CamScanner

5) ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ:-

ಉಪ ನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವೆ ಇಲಾಖೆ, ರವರು ಮಾತನಾಡಿ, ರೈತರ ಬಳಿ ಲಭ್ಯವಿರುವ ಮೇವು ಮುಂದಿನ 12 ವಾರಗಳ ಅವಧಿಗೆ ಸಾಕಾಗುತ್ತದೆ ಎಂದು ತಿಳಿಸಿದರು. ಮಳೆ ಬಂದಿರುವುದರಿಂದ ಜಾನುವಾರುಗಳಿಗೆ ಮೇವಿನ ಕೊರತೆ ಇಲ್ಲದ ಕಾರಣ ಜಿಲ್ಲೆಯಲ್ಲಿ ಸ್ಥಾಪಿಸಲಾಗಿದ್ದ ಗೋಶಾಲೆಗಳನ್ನು ಮುಚ್ಚಲಾಗಿದ್ದು ಮೇವಿಗಾಗಿ ಯಾವುದೇ ತೊಂದರೆ ಇರುವುದಿಲ್ಲ ಎಂದು ತಿಳಿಸಿದರು. ಮುಂಬರುವ ದಿನಗಳಲ್ಲಿ ಯಾವುದೇ ಸಮಸ್ಯೆಯಾಗದಂತೆ ಕ್ರಮ ಕೈಗೊಳ್ಳಲು ಉಸ್ತುವಾರಿ ಕಾರ್ಯದರ್ಶಿಗಳು ಉಪನಿರ್ದೇಶಕರು, ಪಶುಪಾಲನಾ ಇಲಾಖೆ ರವರಿಗೆ ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ಪಶುಪಾಲನಾ ಮತ್ತು ಪಶು ವೈದ್ಯಕೀಯ ಸೇವಾ ಇಲಾಖೆ, ಚಿಕ್ಕಬಳ್ಳಾಪುರ)**

6) ನರೇಗಾ ಯೋಜನೆ:-

ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮಾತನಾಡಿ, ಮಹಾತ್ಮಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಲ್ಲಿ 2019-20 ನೇ ಸಾಲಿನಲ್ಲಿ ಶೇ. 65.99 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ ಮತ್ತು ಬಾಕಿ ಇರುವ ಅನುದಾನ ಬಿಡುಗಡೆಯಾಗಿದೆ ಎಂದು ತಿಳಿಸಿದರು.

- ನರೇಗಾ ಯೋಜನೆಯಡಿಯಲ್ಲಿ ಮಲ್ಟಿ ಚೆಕ್ ಡ್ಯಾಂಗಳನ್ನು ನಿರ್ಮಿಸಲಾದಂತಹ ಪ್ರದೇಶಗಳಲ್ಲಿ ಗಿಡಗಳನ್ನು ನಾಟಿ ಮಾಡಿ ಸಂಗ್ರಹಣಾ ನೀರನ್ನು ಗಿಡಗಳಿಗೆ ಬಳಸಲು ಸೂಚಿಸಿದರು.

**(ಕ್ರಮ: ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು, ಜಿಲ್ಲಾ ಪಂಚಾಯಿತಿ, ಚಿಕ್ಕಬಳ್ಳಾಪುರ)**

7) ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ :-

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಅಧಿಕಾರಿಗಳು ಮಾತನಾಡಿ, ಜಿಲ್ಲೆಯಲ್ಲಿ ಅಂಗನವಾಡಿ ಮಕ್ಕಳಿಗೆ ಬಿಸಿಯೂಟ ಯೋಜನೆ ವ್ಯವಸ್ಥಿತವಾಗಿ ನಡೆಯುತ್ತಿದೆ ಎಂದು ತಿಳಿಸಿದರು.

- ಮುಖ್ಯ ಕಾರ್ಯನಿರ್ವಾಹಣಾಧಿಕಾರಿಗಳು ಮಾತನಾಡಿ, ಉಪನಿರ್ದೇಶಕರು ಶಿಕ್ಷಣ ಇಲಾಖೆ ಮತ್ತು ಸಂಬಂಧಪಟ್ಟ ಅಧಿಕಾರಿಗಳೊಂದಿಗೆ ಸಭೆಯನ್ನು ಮಾಡಿ ನಗರ ಮತ್ತು ಗ್ರಾಮಾಂತರ ಪ್ರದೇಶಗಳಲ್ಲಿ ಅಂಗನವಾಡಿ ಕಟ್ಟಡ ನಿರ್ಮಿಸಲು ಬಾಕಿ ಇರುವ ನಿವೇಶನಗಳನ್ನು ಈಗಾಗಲೇ ನೀಡಲಾಗಿದೆ ಎಂದು ತಿಳಿಸಿದರು. ಜಿಲ್ಲಾ ಉಸ್ತುಕಾರಿ ಕಾರ್ಯದರ್ಶಿಗಳು ಮಾತನಾಡಿ, ಅಂಗನವಾಡಿ ಕಟ್ಟಡಗಳನ್ನು ತುರ್ತಾಗಿ ನಿರ್ಮಿಸಲು ಸೂಚಿಸಿದರು.
- ಮಕ್ಕಳ ಅಪೌಷ್ಠಿಕತೆ ಮಟ್ಟವನ್ನು 221 ರಿಂದ 195 ಕ್ಕೆ ಕಡಿಮೆಯಾಗಿದ್ದು, ಅಪೌಷ್ಠಿಕತೆ ಮಕ್ಕಳನ್ನು ಆರೋಗ್ಯ ಕೇಂದ್ರದಲ್ಲಿ ಸೇರ್ಪಡೆ ಮಾಡಿ ಅವರ ಪೌಷ್ಠಿಕ ಮಟ್ಟವನ್ನು ಸುಧಾರಿಸುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದು ತಿಳಿಸಿದರು.

**(ಕ್ರಮ: ಉಪನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಯೋಜನಾ ನಿರ್ದೇಶಕರು ನಗರಾಭಿವೃದ್ಧಿ ಇಲಾಖೆ, ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಚಿಕ್ಕಬಳ್ಳಾಪುರ)**

8) ಕಂದಾಯ ಇಲಾಖೆ :-

ಉಪವಿಭಾಗಾಧಿಕಾರಿಗಳು ಮಾತನಾಡಿ, ಸ್ವಯಂ ಪ್ರೇರಿತವಾಗಿ ವಿಶೇಷ ಕಾರ್ಯಕ್ರಮಗಳನ್ನು ಹಾಕಿಕೊಂಡು ಬಾಕಿ ಇರುವ ಪಹಣಿ ಕಲಂ 3&9 ತಿದ್ದುಪಡಿ ಮಾಡಲು ಎಲ್ಲಾ ತಹಶೀಲ್ದಾರ್‌ಗಳಿಗೆ ಗುರಿಯನ್ನು ನೀಡಲಾಗಿರುವುದಾಗಿ ತಿಳಿಸಿದರು.

ಉಸ್ತುವಾರಿ ಕಾರ್ಯದರ್ಶಿಗಳು ಮಾತನಾಡಿ, ಕಂದಾಯ ಇಲಾಕೆಯಲ್ಲಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಚಿಸಿದರು.

**(ಕ್ರಮ: ಉಪವಿಭಾಗಾಧಿಕಾರಿಗಳು ಹಾಗೂ ಜಿಲ್ಲೆಯ ಎಲ್ಲಾ ತಹಶೀಲ್ದಾರ್, ಚಿಕ್ಕಬಳ್ಳಾಪುರ ಜಿಲ್ಲೆ.)**



Scanned by CamScanner

9) **ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ:**

ಉಪನಿರ್ದೇಶಕರು, ಸಾರ್ವಜನಿಕ ಇಲಾಖೆ ರವರು ಮಾತನಾಡಿ, ಭಾಷಾ ವಿಷಯಗಳಲ್ಲಿ ಮಕ್ಕಳ ಕಲಿಕಾ ಗುಣಮಟ್ಟ ಖಾತ್ರಿಪಡಿಸಲು ಕೊಳ್ಳಲು SPELL BEE ಸ್ಪರ್ಧೆಗಳನ್ನು ಕನ್ನಡ ಮತ್ತು ಆಂಗ್ಲ ಭಾಷೆಗಳಲ್ಲಿ ನಡೆಸಿ ಕ್ಲಸ್ಟರ್, ತಾಲ್ಲೂಕು ಮತ್ತು ಜಿಲ್ಲಾ ಹಂತದ ಸ್ಪರ್ಧೆಗಳನ್ನು ನಡೆಸಿ ಬಹುಮಾನಗಳನ್ನು ನೀಡುವುದು. ಕನ್ನಡ ಭಾಷೆಯ ಸ್ಪರ್ಧೆಗಳನ್ನು ನಡೆಸಿ ವಿಜೇತರಿಗೆ ನವೆಂಬರ್-1 ರ ರಾಜ್ಯೋತ್ಸವದ ದಿನ ಬಹುಮಾನಗಳನ್ನು ನೀಡಲು ಯೋಜಿಸಲಾಗಿದೆ ಎಂದು ತಿಳಿಸಿದರು.

- ಮಕ್ಕಳ ಕಲಿಕಾ ಮಟ್ಟವನ್ನು ಹೆಚ್ಚಿಸಲು ಕ್ರಮ ವಹಿಸಲು ಸೂಚಿಸಿದರು.
- ಜಿಲ್ಲಾ ಗ್ರಂಥಾಲಯದಲ್ಲಿ ಕಾಲೇಜು ವಿದ್ಯಾರ್ಥಿಗಳಿಗೆ ವಿಶೇಷ ತರಬೇತಿ ಕಾರ್ಯಗಾರವನ್ನು ಆಯೋಜಿಸಿ, ಮಕ್ಕಳಿಗೆ ಸ್ಪರ್ಧಾತ್ಮಕ ಪರೀಕ್ಷೆಗಳ ಬಗ್ಗೆ ಯಾವ ರೀತಿಯಲ್ಲಿ ತಯಾರಿ ಮಾಡಿಕೊಳ್ಳಬೇಕು ಮತ್ತು ಯಾವ ಹುದ್ದೆಗೆ ಯಾವ ಅರ್ಹತೆಗಳು ಇರಬೇಕು ಎನ್ನುವುದರ ಬಗ್ಗೆ ಕಾರ್ಯಗಾರವನ್ನು ಆಯೋಜಿಸಲು ಸೂಚಿಸಿದರು.
- ಗ್ರಂಥಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಹಾಗೂ ಸಾರ್ವಜನಿಕರಿಗೆ ಉಪಯೋಗವಾಗುವಂತಹ ಪುಸ್ತಕಗಳನ್ನು ಇಡಲು ಸೂಚಿಸಿದರು.
- ವಿದ್ಯಾರ್ಥಿಗಳಲ್ಲಿರುವ ವಿಶೇಷ ಪ್ರತಿಭೆಗಳನ್ನು ಹೊರತರುವ ಕಾರ್ಯಗಾರವನ್ನು ಆಯೋಜಿಸಿ, ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಧನವನ್ನು ನೀಡಲು ಸೂಚಿಸಿದರು.

**(ಕ್ರಮ: ಉಪನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ,ಮತ್ತು ಪದವಿ ಪೂರ್ವ ಶಿಕ್ಷಣ ಇಲಾಖೆ, ಮುಖ್ಯ ಗ್ರಂಥಾಲಯದ ಅಧಿಕಾರಿಗಳು, ಚಿಕ್ಕಬಳ್ಳಾಪುರ)**

10. **ನಿಗಮ ಮತ್ತು ಮಂಡಳಿಗಳು:**

ಗಂಗಾ ಕಲ್ಯಾಣ ಯೋಜನೆಯಡಿ ಕೊಳವೆಬಾವಿಗಳನ್ನು ಕೊರೆಯಲು ಹೈಕೋರ್ಟ್ ಆದೇಶ ಮಾಡಲಾಗಿದ್ದು, ತುರ್ತಾಗಿ ಕಾರ್ಯಾದೇಶ ನೀಡಿ ಕೊಳವೆಬಾವಿಗಳನ್ನು ಕೊರೆಯಲು ಕ್ರಮವಹಿಸಲು ಎಲ್ಲಾ ನಿಗಮಗಳ ಮುಖ್ಯಸ್ಥರಿಗೆ ಸೂಚಿಸಿದರು.

**(ಕ್ರಮ: ವ್ಯವಸ್ಥಾಪಕರು, ಜಿಲ್ಲೆಯ ಎಲ್ಲಾ ನಿಗಮ ಮಂಡಳಿಗಳು ಚಿಕ್ಕಬಳ್ಳಾಪುರ ಜಿಲ್ಲೆ, ಚಿಕ್ಕಬಳ್ಳಾಪುರ)**

ಸಭೆಯಲ್ಲಿ ಚರ್ಚಿಸಿ ನೀಡಲಾದ ನಿರ್ದೇಶನಗಳಂತೆ ಅಗತ್ಯ ಕ್ರಮಗಳನ್ನು ಕೈಗೊಂಡು ಮುಂದಿನ ಸಭೆಯ ಒಳಗಾಗಿ ಸಂಬಂಧಪಟ್ಟ ಎಲ್ಲಾ ಇಲಾಖಾ ಅಧಿಕಾರಿಗಳು ಅನುಪಾಲನಾ ವರದಿಯನ್ನು ಸಲ್ಲಿಸಲು ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು. ನಂತರ ಇತರೆ ವಿಷಯಗಳು ಏನು ಇಲ್ಲದೇ ಇರುವುದರಿಂದ ತಹಶೀಲ್ದಾರ್, ಶಿಡ್ಲಘಟ್ಟ ತಾಲ್ಲೂಕು ರವರು ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

**(ಡಾ॥ ಎನ್.ನಾಗಾಂಬಿಕಾದೇವಿ, ಭಾ.ಆ.ಸೇ.)**
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಸಹಕಾರ ಇಲಾಖೆ ಮತ್ತು
ಚಿಕ್ಕಬಳ್ಳಾಪುರ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ,
ಕರ್ನಾಟಕ ಸರ್ಕಾರ, ಬೆಂಗಳೂರು.

ಪ್ರತಿಯನ್ನು:

1. **ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ಕರ್ನಾಟಕ ಸರ್ಕಾರ, ವಿಧಾನಸೌಧ, ಬೆಂಗಳೂರು ರವರಿಗೆ ಮಾಹಿತಿಗಾಗಿ ಸಲ್ಲಿಸಿದೆ.**
2. **ಜಿಲ್ಲಾಧಿಕಾರಿಗಳು, ಚಿಕ್ಕಬಳ್ಳಾಪುರ ಜಿಲ್ಲೆ ರವರಿಗೆ ಕಳುಹಿಸುತ್ತಾ ಸಭಾ ನಡಾವಳಿಗೆ ಅನುಪಾಲನಾ ವರದಿಯನ್ನು ಸಲ್ಲಿಸಲು ಸೂಚಿಸಿದೆ.**



Scanned by CamScanner

DPAR - AR

yadukumar - SO

**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಕಛೇರಿ**
**ಶಿಕ್ಷಣ ಇಲಾಖೆ (ಉನ್ನತ ಶಿಕ್ಷಣ)**

**ಸಂಖ್ಯೆ:** ಇಡಿ 123 ಅಮುಕಾ 2019 ದಿ: 16/10/2019

**ಟಿಪ್ಪಣಿ**

**ವಿಷಯ:** ಗದಗ ಜಿಲ್ಲಾ ಪ್ರಗತಿ ಪರಿಶೀಲನಾ ವರದಿ.
**ಉಲ್ಲೇಖ:** ಅಧಿಸೂಚನೆ ಪತ್ರ ಸಂಖ್ಯೆ:ಸಿಆಸುಇಆಸು/02/ಇಸಪ/2019 (ಭಾ–1), ದಿ:01/10/2019.

***

ದಿ:01/10/2019ರ ಸರ್ಕಾರದ ಅಧಿಸೂಚನೆ ಅಧಿಸೂಚನೆ ಪತ್ರ ಸಂಖ್ಯೆ:ಸಿಆಸುಇಆಸು/02/ಇಸಪ/2019(ಭಾ–1)ರಲ್ಲಿ ನನ್ನನ್ನು ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ನೇಮಿಸಲಾಗಿದೆ. ದಿ:14/10/2019ರಂದು ಗದಗ ಜಿಲ್ಲೆಯ ಜಿಲ್ಲಾಧಿಕಾರಿಯವರ ಕಚೇರಿ ಸಭಾಂಗಣದಲ್ಲಿ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯನ್ನು ನಡೆಸಿ ಈ ಕೆಳಕಂಡ ವಿಷಯಗಳ ಬಗ್ಗೆ ಚರ್ಚಿಸಿರುತ್ತೇನೆ:

1) 2019 ಗದಗ ಜಿಲ್ಲೆಯ ಋತುಮಾನ ಪರಿಸ್ಥಿತಿ ಬಗ್ಗೆ.
2) ನರಗುಂದ ಮತ್ತು ರೋಣ ತಾಲ್ಲೂಕುಗಳಲ್ಲಿ ಪ್ರವಾಹ ಸಂಭವಿಸಬಹುದಾದ ಹಳ್ಳಿಗಳ ಬಗ್ಗೆ.
3) ನರಗುಂದ ಮತ್ತು ರೋಣ ತಾಲ್ಲೂಕುಗಳಲ್ಲಿ ಪ್ರವಾಹಕ್ಕೊಳಗಾದ ಹಳ್ಳಿಗಳ ಬಗ್ಗೆ.
4) ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಪ್ರವಾಹ ಸಂಭವಿಸಬಹುದಾದ ಹಳ್ಳಿಗಳ ಬಗ್ಗೆ.
5) ಶಿರಹಟ್ಟಿ ಮತ್ತು ಮುಂಡರಗಿ ತಾಲ್ಲೂಕುಗಳಲ್ಲಿ ಪ್ರವಾಹಕ್ಕೊಳಗಾದ ಹಳ್ಳಿಗಳ ಬಗ್ಗೆ.
6) ಅತಿವೃಷ್ಟಿ/ಪ್ರವಾಹದಿಂದಾಗಿ ಹಾನಿಗೊಳಗಾದ ಮನೆಗಳ ವಿವರಗಳ ಬಗ್ಗೆ.
7) ಅತಿವೃಷ್ಟಿ/ಪ್ರವಾಹದಿಂದ ಉಂಟಾದ ಜಾನುವಾರು ಹಾನಿ ವಿವರಗಳ ಬಗ್ಗೆ.
8) ಪರಿಹಾರ ಡಾಟಾ ಎಂಟ್ರಿ ವರದಿಗಳ ಬಗ್ಗೆ.
9) ನೆರೆ ಸಂತ್ರಸ್ಥ ಕುಟುಂಬಗಳಿಗೆ ವಿಶೇಷ ಆಹಾರ ಕಿಟ್‌ಗಳನ್ನು ವಿತರಣೆ ಮಾಡಿದ ವಿವರಗಳ ಬಗ್ಗೆ.

ಈ ಮೇಲ್ಕಂಡ ವಿಷಯಗಳು ಹಾಗೂ ಇನ್ನು ಇತರೆ ವಿಷಯಗಳ ಬಗ್ಗೆ ಸುದೀರ್ಘವಾಗಿ ಚರ್ಚಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿರುತ್ತೇನೆ. ಪ್ರಗತಿ ಪರಿಶೀಲನಾ ಸಭೆಯ ನಡವಳಿಯ ಪ್ರತಿಯನ್ನು ಇದರೊಂದಿಗೆ ಅವಗಾಹನೆಗಾಗಿ ಲಗತ್ತಿಸಿರುತ್ತೇನೆ.

**(ಡಾ: ರಾಜ್‌ಕುಮಾರ್ ಖತ್ರಿ)**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ, ಉನ್ನತ ಶಿಕ್ಷಣ ಇಲಾಖೆ ಹಾಗೂ ಗದಗ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ

(... ವಿಜಯ್ ಭಾಸ್ಕರ್)

**ಗೆ:**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ಸಿಆಸುಇ (ಆಸು),
ಬೆಂಗಳೂರು.

**ಪ್ರತಿಯನ್ನು ಗೌರವಗಳೊಂದಿಗೆ ಮಾಹಿತಿಗಾಗಿ:**
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.

ಮಾನ್ಯ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು, ಇವರ ಅಧ್ಯಕ್ಷತೆಯಲ್ಲಿ ದಿನಾಂಕ:23.10.2019 ರಂದು 5.30 ಗಂಟೆಗೆ ಅತಿವೃಷ್ಟಿ/ಪ್ರವಾಹದ ಕುರಿತು ಪರಿಶೀಲನಾ ಸಭೆಯ ನಡುವಳಿಗಳು.

ಸಭೆಗೆ ಹಾಜರಿದ್ದ ಅಧಿಕಾರಿಗಳು:

1. ಜಿಲ್ಲಾಧಿಕಾರಿಗಳು ಬೆಳಗಾವಿ ಜಿಲ್ಲೆ
2. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ ಬೆಳಗಾವಿ.
3. ಅಪರ ಜಿಲ್ಲಾಧಿಕಾರಿಗಳು, ಬೆಳಗಾವಿ
4. ಆಯುಕ್ತರು, ಮಹಾನಗರ ಪಾಲಿಕೆ, ಬೆಳಗಾವಿ
5. ಯೋಜನಾ ನಿರ್ದೇಶಕರು, ನಗರಾಭಿವೃದ್ಧಿ ಕೋಶ, ಜಿಲ್ಲಾಧಿಕಾರಿಗಳ ಕಾರ್ಯಾಲಯ, ಬೆಳಗಾವಿ.
6. ಉಪವಿಭಾಗಾಧಿಕಾರಿಗಳು, ಬೆಳಗಾವಿ, ಬೈಲಹೊಂಗಲ, ಚಿಕ್ಕೋಡಿ.
7. ಅಧೀಕ್ಷಕ ಅಭಿಯಂತರರು, ಹೆಸ್ಕಾಂ ಬೆಳಗಾವಿ,ಚಿಕ್ಕೋಡಿ.
8. ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ.
9. ಉಪ-ನಿರ್ದೇಶಕರು, ಪಶು ಪಾಲನೆ ಇಲಾಖೆ, ಬೆಳಗಾವಿ.
10. ಉಪ-ನಿರ್ದೇಶಕರು, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಬೆಳಗಾವಿ.
11. ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಬೆಳಗಾವಿ .
12. ಅಪರ ಜಿಲ್ಲಾ ಆರೋಗ್ಯ ಕುಟುಂಬ ಕಲ್ಯಾಣ ಅಧಿಕಾರಿಗಳು, ಚಿಕ್ಕೋಡಿ
13. ಉಪ-ನಿರ್ದೇಶಕರು ತೋಟಗಾರಿಕೆ ಇಲಾಖೆಬೆಳಗಾವಿ.
14. ಉಪ-ನಿರ್ದೇಶಕರು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಬೆಳಗಾವಿ.
15. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು ಬೆಳಗಾವಿ.
16. ಉಪ-ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ ಬೆಳಗಾವಿ, ಚಿಕ್ಕೋಡಿ.
17. ಉಪ-ನಿರ್ದೇಶಕರು ವಾರ್ತಾ ಮತ್ತು ಪ್ರಚಾರ ಇಲಾಖೆ ಬೆಳಗಾವಿ.
18. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ಹಿಡಕಲ್ ಡ್ಯಾಂ.
19. ಅಧೀಕ್ಷಕ ಅಭಿಯಂತರರು, ಕನೀನಿನಿ ಜಿಆರ್‌ಬಿಸಿಸಿ ವೃತ್ತ ನವಿಲುತೀರ್ಥ .
20. ಕಾರ್ಯನಿರ್ವಾಹಕ ಅಭಿಯಂತರು, ಗ್ರಾಕುನೀ& ನೈರ್ಮಲ್ಯ ವಿಭಾಗ, ಬೆಳಗಾವಿ, ಚಿಕ್ಕೋಡಿ.
21. ತಹಶೀಲ್ದಾರರು, ಬೆಳಗಾವಿ, ಖಾನಾಪೂರ, ಹುಕ್ಕೇರಿ, ಬೈಲಹೊಂಗಲ, ಕಿತ್ತೂರು, ಸವದತ್ತಿ, ರಾಮದುರ್ಗ, ಗೋಕಾಕ, ಚಿಕ್ಕೋಡಿ, ರಾಯಬಾಗ, ಅಥಣಿ, ಮೂಡಲಗಿ, ಕಾಗವಾಡ, ನಿಪ್ಪಾಣಿ.

ಸಭೆಯ ಪ್ರಾರಂಭದಲ್ಲಿ ಹಾಜರಿದ್ದ ಎಲ್ಲ ಅಧಿಕಾರಿಗಳವರನ್ನು ಅಪರ ಜಿಲ್ಲಾಧಿಕಾರಿಗಳು ಬೆಳಗಾವಿ ಇವರು ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಿದರು. ಬೆಳಗಾವಿ ಜಿಲ್ಲೆಯ ಕುರಿತು ಸಾಮಾನ್ಯ ಮಾಹಿತಿ ಹಾಗೂ ಋತುಮಾನ ಪರಿಸ್ಥಿತಿಯ ಬಗ್ಗೆ ಸಭೆಗೆ ಮಾಹಿತಿಯನ್ನು ನೀಡಿದರು.

ಜಿಲ್ಲೆಯಲ್ಲಿ ಆಗಿರುವ ಮಳೆಯ ವಿವರವನ್ನು ಜಂಟಿ ಕೃಷಿ ನಿರ್ದೇಶಕರು, ಬೆಳಗಾವಿ ಇವರು ದಿನಾಂಕ:01.10.2019 ರಿಂದ22.10.2019ವರೆಗೆ 94.00 ಮಿಮೀ ವಾಡಿಕೆ ಮಳೆಯಾಗಿದ್ದು, 201 ಮಿಮೀ ವಾಸ್ತವಿಕ ಮಳೆ ಆಗಿರುತ್ತದೆ. ಶೇ 115ರಷ್ಟು ಮಳೆ ಆಗಿದೆ. 2019ನೇ ಹಿಂಗಾರು ಹಂಗಾಮಿನಲ್ಲಿ 3,20,202 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ ಗುರಿ ಹೊಂದಿದ್ದು, ಇದರಲ್ಲಿ 22175 ಹೆಕ್ಟೇರ್ ಪ್ರದೇಶದಲ್ಲಿ

ಬಿತ್ತನೆಯಾಗಿದ್ದು, 6.9% ರಷ್ಟು ಬಿತ್ತನೆ ಆಗಿದೆ ಎಂದು ಸಭೆಗೆ ತಿಳಿಸಿದರು. ಜಿಲ್ಲೆಯಲ್ಲಿ 216793.20 ಹೆಕ್ಟೇರ್ ಪ್ರದೇಶದಲ್ಲಿ ಕೃಷಿ ಬೆಳೆಗಳು, 4578.11 ಹೆಕ್ಟೇರ್ ಪ್ರದೇಶದಲ್ಲಿ ತೋಟಗಾರಿಕೆ ಬೆಳೆಗಳು ಹಾಗೂ 56.70 ಹೆಕ್ಟೇರ್ ಪ್ರದೇಶದಲ್ಲಿ ರೇಷ್ಮೆ ಬೆಳೆಗಳು ಹೀಗೆ ಒಟ್ಟು 2,21,428.01 ಹೆಕ್ಟೇರ್ ಪ್ರದೇಶದಲ್ಲಿ ಬೆಳೆಗಳು ಹಾನಿಯಾಗಿರುವುದಾಗಿ ಜಂಟಿ ಸಮೀಕ್ಷಾ ವರದಿಯು ಸ್ವೀಕೃತವಾಗಿದೆ. ಸದರಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಜಿಲ್ಲಾಧಿಕಾರಿಗಳು ಮಾತನಾಡಿ, 2018-19ನೇ ಸಾಲಿನ ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ರೈತರ ವಿವರಗಳನ್ನು ಇಂದೀಕರಣ ಮಾಡಲಾಗುತ್ತಿದೆ. ಒಟ್ಟು 115690 ರೈತರ ಪೈಕಿ ಇದುವರೆಗೆ 97629 ರೈತರ ವಿವರಗಳನ್ನು ಇಂದೀಕರಣ ಮಾಡಲಾಗಿದೆ. 18061 ರೈತರ ವಿವರಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಶೇ 84.4ರಷ್ಟು ಪ್ರಗತಿ ಸಾಧಿಸಲಾಗಿದೆ. 2019ನೇ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಬೆಳೆಹಾನಿಗೊಳಗಾದ ರೈತರ ವಿವರಗಳನ್ನು ಪರಿಹಾರ ತಂತ್ರಾಂಶದಲ್ಲಿ ಇಂದೀಕರಣ ಮಾಡಲಾಗುತ್ತಿದೆ. ಒಟ್ಟು 2,05,354 ರೈತರ ಪೈಕಿ ಇದುವರೆಗೆ 1,04,967 ರೈತರ ವಿವರಗಳನ್ನು ಇಂದೀಕರಣ ಮಾಡಲಾಗಿದೆ. 1,00,387 ರೈತರ ವಿವರಗಳನ್ನು ದಾಖಲಿಸುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಶೇ 51.1 ರಷ್ಟು ಪ್ರಗತಿ ಸಾಧಿಸಲಾಗಿದೆ.

ಇತ್ತೀಚೆಗೆ ಕಳೆದ ಎರಡು-ಮೂರು ದಿನಗಳಿಂದ ಜಿಲ್ಲೆಯಲ್ಲಿ ಅತಿವೃಷ್ಟಿಯಾಗುತ್ತಿದ್ದು, ದಿನಾಂಕ:22.10.2019 ರಂದು ಮಹಾರಾಷ್ಟ್ರ ರಾಜ್ಯದ ಜಲಾಶಯಗಳಿಂದ ಜಿಲ್ಲೆಗೆ 1.11 ಲಕ್ಷ ಕ್ಯೂಸೆಕ್ಸ್ ನೀರು ಹರಿದು ಬರುತ್ತಿದೆ. ಅಲ್ಲದೇ ಅತಿವೃಷ್ಟಿಯಿಂದಾಗಿ ಮಲಪ್ರಭಾ ನದಿಯ ನೀರಿನ ಪ್ರಮಾಣದಲ್ಲಿ ಹೆಚ್ಚಳವಾಗಿ ನವಿಲುತೀರ್ಥ ಜಲಾಶಯದಿಂದ ದಿನಾಂಕ:20.10.2019ರಂದು 35000 ಕ್ಯೂಸೆಕ್ಸ್, ದಿನಾಂಕ:21.10.2019ರಂದು 36094 ಕ್ಯೂಸೆಕ್ಸ್ ನೀರನ್ನು ಹರಿಬಿಡಲಾಗಿದೆ. ಇದರಿಂದಾಗಿ ರಾಮದುರ್ಗ ತಾಲೂಕಿನ ಹಂಪಿಹೊಳಿ ಗ್ರಾಮದ 70 ಕುಟುಂಬಗಳ 226 ಜನರನ್ನು ಹಾಗೂ 47 ಜಾನುವಾರುಗಳನ್ನು ಸ್ಥಳಾಂತರಿಸಿದ್ದು, 02 ಪರಿಹಾರ ಕೇಂದ್ರಗಳನ್ನು ತೆರೆಯಲಾಗಿದೆ. ರಾಮದುರ್ಗ ತಾಲೂಕಿಗೆ ಒಂದು ಎಸ್‌ಡಿಆರ್‌ಎಫ್ ತಂಡವನ್ನು ನಿಯೋಜಿಸಲಾಗಿದೆ. ಜಿಲ್ಲೆಯಲ್ಲಿ ಒಟ್ಟು 03 ಪರಿಹಾರ ಕೇಂದ್ರಗಳು ಚಾಲ್ತಿಯಲ್ಲಿರುತ್ತವೆ. 10 ಜಾನುವಾರು ಶಿಬಿರಗಳನ್ನು ತೆರೆಯಲಾಗಿದೆ.

ಜಿಲ್ಲಾಧಿಕಾರಿಗಳ ಪಿಡಿ ಖಾತೆಯಲ್ಲಿ ಬರಪರಿಹಾರ ಕಾರ್ಯಗಳಿಗಾಗಿ ಹಾಗೂ ಅತೀವೃಷ್ಟಿ/ಪ್ರವಾಹದ ಪರಿಹಾರಗಳಿಗಾಗಿ ಒಟ್ಟು ರೂ. 89198.51 ಲಕ್ಷ ಲಭ್ಯವಿದ್ದು, ಇದರಲ್ಲಿ ರೂ.27946.60 ಲಕ್ಷ ಬಿಡುಗಡೆ ಮಾಡಿದ್ದು, ಇನ್ನೂ ರೂ.61251.91 ಲಕ್ಷ ಶಿಲ್ಕು ಇರುತ್ತದೆ. ಈಗಾಗಲೇ ಜಿಲ್ಲೆಯ ಎಲ್ಲ ತಹಶೀಲ್ದಾರರಿಗೆ ಜಿಲ್ಲೆಯಲ್ಲಿ ತೆರೆಯಲಾದ ಪರಿಹಾರ ಕೇಂದ್ರಗಳ ನಿರ್ವಹಣೆ, ಜನ-ಜಾನುವಾರುಗಳ ರಕ್ಷಣೆಗಾಗಿ ಕೈಗೊಂಡ ರಕ್ಷಣಾ ಕಾರ್ಯಗಳಿಗೆ ತಗುಲಿದ ವೆಚ್ಚಗಳನ್ನು ಭರಿಸಲು ಹಾಗೂ ಅತೀವೃಷ್ಟಿ/ಪ್ರವಾಹದಿಂದ ಉಂಟಾಗಬಹುದಾದ ಮಾನವ, ಜೀವ ಹಾನಿ, ಜಾನುವಾರು, ಮನೆಗಳ ಹಾನಿಗಳಿಗೆ ಸರ್ಕಾರದ ಮಾರ್ಗಸೂಚಿಯ ಅನ್ವಯ ಪರಿಹಾರದ ಮೊತ್ತವನ್ನು ವಿತರಿಸಲು ಒಟ್ಟು ರೂ.16573.38ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ಸಾರ್ವಜನಿಕ ಸ್ಥಳಗಳಲ್ಲಿ ಬಂದು ಬಿದ್ದಿರುವ ಗಿಡಗಂಟಿಗಳು, ಮಣ್ಣಿನ ಕೆಸರನ್ನು, ಕಸಕಡ್ಡಿ (Debris), ಪ್ರವಾಹದ ನೀರನ್ನು (Draining off flood water in affected area) ತೆರವುಗೊಳಿಸುವುದು ಹಾಗೂ ಮೃತ ದೇಹಗಳನ್ನು/ಶವಗಳನ್ನು ವಿಲೇವಾರಿ (Disposal of dead bodies/Carcases) ಮಾಡುವ ಕ್ರಮಗಳನ್ನು ಸಂಬಂಧಿಸಿದ ಆಯಾ ಗ್ರಾಮ ಪಂಚಾಯತಗಳ ಮೂಲಕ ಕೈಗೊಳ್ಳಲು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಜಿಲ್ಲಾ ಪಂಚಾಯತ ಬೆಳಗಾವಿ ಇವರಿಗೆ ರೂ.200.00ಲಕ್ಷ ಹಾಗೂ ನಗರ ಸ್ಥಳೀಯ ಸಂಸ್ಥೆಗಳ ಮುಖ್ಯಾಧಿಕಾರಿಗಳಿಗೆ ರೂ.36.00ಲಕ್ಷಗಳನ್ನು ಬಿಡುಗಡೆ ಮಾಡಲಾಗಿದೆ. ನೆರೆ ಹಾವಳಿಯಿಂದ ಅಲ್ಪಸ್ವಲ್ಪ ಹಾನಿಗೊಳಗಾದ (ಶೇ 15ರಿಂದ ಶೇ25ರಷ್ಟು) ಮನೆಗಳಿಗೆ ಸಂಬಂಧಿಸಿದಂತೆ ಹಾನಿಗೊಳಗಾದ ಪ್ರತಿ ಮನೆಗೆ

ರೂ.25,000/-ಗಳಂತೆ ಪರಿಹಾರ ಧನವನ್ನು ನೀಡಲು ತಹಶೀಲ್ದಾರರಿಗೆ ಒಟ್ಟು ರೂ.4920.00 ಲಕ್ಷ ಹಾಗೂ ಪ್ರಧಾನ ವ್ಯವಸ್ಥಾಪಕರು ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ಬೆಂಗಳೂರು ಇವರಿಗೆ ರೂ.4538.46ಲಕ್ಷ ಒಟ್ಟು ರೂ..9458.46 ಲಕ್ಷ ಅನುದಾನವನ್ನು ಬಿಡುಗಡೆ ಮಾಡಲಾಗಿದೆ. ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಸಂತ್ರಸ್ತರಿಗೆ ಉಚಿತವಾಗಿ ಆಹಾರ ಕಿಟ್‌ಗಳನ್ನು ವಿತರಿಸಲು ವಿಶೇಷ ಆಹಾರ ಪ್ಯಾಕೆಟ್‌ಗಳನ್ನು ಸಿದ್ದಪಡಿಸಿದ ಬಿಲ್ಲು ರೂ.192.63ಲಕ್ಷಗಳನ್ನು ವ್ಯವಸ್ಥಾಪಕರು, ಟಿಎಪಿಸಿಎಂಎಸ್ ಸಂಕೇಶ್ವರ ಇವರಿಗೆ ಬಿಡುಗಡೆ ಮಾಡಲಾಗಿದೆ. ಪಿಡಿ ಖಾತೆಯಲ್ಲಿ ಲಭ್ಯವಿರುವ ರೂ.61251.91ಲಕ್ಷ ಮೊತ್ತವನ್ನು ಅತೀವೃಷ್ಟಿ/ಪ್ರವಾಹದ ಪರಿಹಾರಗಳಿಗಾಗಿ ಬಳಸಿಕೊಳ್ಳಲಾಗುವುದು. ಸದರಿ ಅನುದಾನವನ್ನು ಅವಶ್ಯಕತೆಗೆ ಅನುಸಾರವಾಗಿ ಬಳಸಿಕೊಳ್ಳಲಾಗುವುದು ಎಂದು ಸಭೆಗೆ ವಿವರಿಸಿದರು.

ಮುಂದುವರೆದು, ಅತಿವೃಷ್ಟಿ/ಪ್ರವಾಹದಿಂದಾಗಿ ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ತಂತ್ರಾಂಶದಲ್ಲಿ ಒಟ್ಟು43582ಮನೆಗಳ ವಿವರಗಳನ್ನು ದಾಖಲಿಸಿ ಈ ಕಚೇರಿಯಿಂದ ಅನುಮೋದನೆಯಾಗಿದ್ದು, ಇವುಗಳಲ್ಲಿ 35453 ಮನೆಗಳಿಗೆ ಒಟ್ಟು ರೂ.120.71ಕೋಟಿ ಪರಿಹಾರ ವಿತರಿಸಲಾಗಿದೆ. 81.3% ರಷ್ಟು ಪ್ರಗತಿ ಸಾಧಿಸಲಾಗಿದೆ. ಪಂಚಾಯತ ರಾಜ ಇಂಜಿನಿಯರಿಂಗ ಇಲಾಖೆ, ಗ್ರಾಮೀಣ ಕುಡಿಯುವ ನೀರು & ನೈರ್ಮಲ್ಯ ಇಲಾಖೆ, ಹೆಸ್ಕಾಂ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಗಳಿಂದ ಕ್ರಿಯಾ ಯೋಜನೆಯನ್ನು ಪಡೆಯಲಾಗಿದ್ದು, ಅತಿವೃಷ್ಟಿ/ ಪ್ರವಾಹದಿಂದ ಹಾನಿಗೊಳಗಾದ ಮೂಲಭೂತ ಸೌಕರ್ಯಗಳ ಪುನರ್ ಸ್ಥಾಪನೆ ಮತ್ತು ದುರಸ್ತಿ ಕಾಮಗಾರಿಗಳ ಕುರಿತು ರೂ.78.79ಕೋಟಿಗಳ ಮೊತ್ತದ ಕ್ರಿಯಾ ಯೋಜನೆಯ ತಾಲೂಕುವಾರು, ಇಲಾಖೆವಾರು, ಕಾಮಗಾರಿವಾರು ವಿವರಗಳನ್ನು ಮಾನ್ಯ ಸರ್ಕಾರದ ಕಾರ್ಯದರ್ಶಿಗಳು ಕಂದಾಯ ಇಲಾಖೆ (ವಿಪತ್ತು ನಿರ್ವಹಣೆ) ಬೆಂಗಳೂರು ಇವರಿಗೆ ಸಲ್ಲಿಸಲಾಗಿದೆ. ಜಿಲ್ಲೆಯಲ್ಲಿ 166 ಅಂಗನವಾಡಿ ಕಟ್ಟಡಗಳ ಪುನರ್‌ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ರೂ.1660.00 ಲಕ್ಷಗಳ ಮೊತ್ತದ ಕ್ರಿಯಾ ಯೋಜನೆಯನ್ನು ಹಾಗೂ ಜಿಲ್ಲೆಯಲ್ಲಿ 900 ಸರ್ಕಾರ ಪ್ರಾಥಮಿಕ ಶಾಲೆಗಳ 1498 ಕೊಠಡಿಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ಪ್ರತಿ ಕೊಠಡಿಗೆ ರೂ.5.00 ಲಕ್ಷಗಳಂತೆ ಒಟ್ಟು ರೂ. 7490.00 ಲಕ್ಷ ಹಾಗೂ 21 ಸರ್ಕಾರಿ ಪ್ರೌಢ ಶಾಲೆಗಳ 63 ಕೊಠಡಿಗಳ ನಿರ್ಮಾಣ ಕಾಮಗಾರಿಗಳನ್ನು ಕೈಗೊಳ್ಳಲು ರೂ. 315.00 ಲಕ್ಷಗಳ ಒಟ್ಟು ರೂ.7805.00ಲಕ್ಷ ಮೊತ್ತದ ಕ್ರಿಯಾ ಯೋಜನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗಿದೆ. ಸರ್ಕಾರದ ಆದೇಶ ದಿನಾಂಕ:19.10.2019ರ ಆದೇಶಕ್ಕೆ ಲಗತ್ತಿಸಿದ ಅನುಬಂಧ-1ರಲ್ಲಿನ ಅಗಸ್ಟ್ 2019 ರಡಿ ಅತಿವೃಷ್ಟಿಯಿಂದ ಹಾನಿಗೊಳಗಾದ ಶಾಲೆಗಳ ದುರಸ್ತಿ ಕಾಮಗಾರಿಗಳನ್ನು ದಿನಾಂಕ:30.09.2019ರ ಆದೇಶದಡಿ ಬಿಡುಗಡೆಯಾದ ಅನುದಾನದಿಂದ ಕೈಗೊಳ್ಳಲು ಆದೇಶಿಸಲಾಗಿದೆ. ಅನುಬಂಧ-1ರಲ್ಲಿ ಬೆಳಗಾವಿ ಜಿಲ್ಲೆಯ ರೂ. 6531.90ಲಕ್ಷಗಳ ಮೊತ್ತದ 4723 ಶಾಲಾ ಕೊಠಡಿಗಳ ಕಾಮಗಾರಿಗಳನ್ನು ಕೈಗೊಳ್ಳಲು ತಿಳಿಸಲಾಗಿದೆ. ಅದೇ ರೀತಿ ಉಳಿದ ಸಾರ್ವಜನಿಕ ಆಸ್ತಿಗಳಾದ ರಸ್ತೆ, ಸೇತುವೆ, ಅಂಗನವಾಡಿ ಕಟ್ಟಡಗಳು, ಕುಡಿಯುವ ನೀರು ಸರಬರಾಜು ಯೋಜನೆಗಳು, ಪ್ರಾಥಮಿಕ ಆರೋಗ್ಯ ಕೇಂದ್ರಗಳ ಕಟ್ಟಡಗಳ ಕಾಮಗಾರಿಗಳನ್ನು ಕೈಕೊಳ್ಳಬೇಕಾಗಿರುತ್ತದೆ. ಈ ಕುರಿತು ಜಿಲ್ಲೆಯ ಪಂಚಾಯತ ರಾಜ್ ಇಂಜನೀರಿಂಗ ಇಲಾಖೆ, ಲೋಕೋಪಯೋಗಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಗಳ ಅಧಿಕಾರಿಗಳ ಸಭೆಯನ್ನು ಜರುಗಿಸಿದ್ದು, ಅಂದಾಜು ಪತ್ರಿಕೆಗಳನ್ನು ಸಿದ್ದಪಡಿಸಿ, ಅನುಮೋದನೆಗಾಗಿ ಸಲ್ಲಿಸಲು ಈಗಾಗಲೇ ತಿಳಿಸಲಾಗಿದೆ ಎಂದು ಸಭೆಗೆ ವಿವರಿಸಿದರು.

ಖಾನಾಪೂರ ತಾಲೂಕಿನ ಬೈಲೂರು, ಕುಸಮಳಿ, ಜಾಂಬೋಟಿ ಗ್ರಾಮಗಳಿಗೆ ಭೇಟಿ ನೀಡಿದ್ದು, ಸದರಿ ಗ್ರಾಮಗಳಲ್ಲಿ ಅತಿವೃಷ್ಟಿ/ಪ್ರವಾಹ ಪೀಡಿತ ರಸ್ತೆ, ಬೆಳೆಗಳ ಹಾನಿ, ಮನೆಗಳ ಹಾನಿ, ಅಂಗನವಾಡಿ ಹಾಗೂ

ಶಾಲಾ ಕಟ್ಟಡಗಳಿಗೆ ಆಗಿರುವ ಹಾನಿಯ ಬಗ್ಗೆ ಹಾಗೂ ಕೈಗೊಂಡ ಪರಿಹಾರ ಕ್ರಮಗಳ ಕುರಿತು ಪರಿಶೀಲನೆಯನ್ನು ಕೈಗೊಳ್ಳಲಾಗಿದೆ. ಈ ಕೆಳಕಂಡ ಕ್ರಮಗಳನ್ನು ಕೈಕೊಳ್ಳುವಂತೆ ಸಭೆಗೆ ಹಾಜರಿದ್ದ ಎಲ್ಲ ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ನಿರ್ದೇಶನವನ್ನು ನೀಡಲಾಯಿತು.

1. ಜಿಲ್ಲೆಯ ಎಲ್ಲ ತಹಶೀಲ್ದಾರರು ಅತಿವೃಷ್ಟಿ/ಪ್ರವಾಹದಿಂದ ಹಾನಿಗೊಳಗಾದ ಮನೆಗಳಿಗೆ ಸಂಬಂಧಿಸಿದಂತೆ, ರಾಜೀವ ಗಾಂಧಿ ವಸತಿ ನಿಗಮ ನಿಯಮಿತ ಇವರ ತಂತ್ರಾಂಶದಲ್ಲಿ "ಸಿ" ವರ್ಗೀಕರಣದ ಮನೆಗಳಿಗೆ ಸಂಬಂಧಿಸಿದಂತೆ ಪಟ್ಟಿಯನ್ನು ಜನರೇಟ್ ಮಾಡಿ, ಅರ್ಹ ಫಲಾನುಭವಿಗಳ ಖಾತೆಗೆ ಪರಿಹಾರವನ್ನು ವಿತರಣೆ ಮಾಡಲು ಕ್ರಮ ಕೈಗೊಳ್ಳಬೇಕು.
2. "ಬಿ" ವರ್ಗೀಕರಣದ ಮನೆಗಳಿಗೆ ಸಂಬಂಧಿಸಿದಂತೆ 2ನೇ ಹಂತದ ಪರಿಹಾರ ವಿತರಣೆ ಮಾಡಲು ಪಟ್ಟಿಯನ್ನು ತಹಶೀಲ್ದಾರರು, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ ಇವರು ಜಂಟಿಯಾಗಿ ಸಹಿಯನ್ನು ಮಾಡಬೇಕು. ಸದರಿ ಪಟ್ಟಿಗೆ ಉಪವಿಭಾಗಾಧಿಕಾರಿಗಳು ಕೌಂಟರ ಸಹಿಯನ್ನು ಮಾಡಿ, ಜಿಲ್ಲಾಧಿಕಾರಿಗಳಿಗೆ ಸಲ್ಲಿಸಬೇಕು. ಜಿಪಿಎಸ್ ಟ್ಯಾಗಿಂಗ ಮಾಡಲು ಬಾಕಿ ಇರುವ ಪ್ರಕರಣಗಳನ್ನು ಹಾಗೂ ತಹಶೀಲ್ದಾರ ಅಡಿಟ್ ಮಾಡಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು ಇತ್ಯರ್ಥಗೊಳಿಸಬೇಕು.

3. ಯಾವುದೇ ಇಲಾಖೆಯ ಜಿಲ್ಲಾ, ಉಪವಿಭಾಗ ಹಾಗೂ ತಾಲೂಕು ಮಟ್ಟದ ಅಧಿಕಾರಿಗಳು ತಮ್ಮ ಕೇಂದ್ರಸ್ಥಾನವನ್ನು ಬಿಟ್ಟು ಹೋಗಬಾರದು.

4. ನದಿ ಪಾತ್ರದಲ್ಲಿ ಬರುವಂತಹ ಗ್ರಾಮಗಳ ಜನರಿಗೆ ಬೇರೆಡೆ ಸ್ಥಳಾಂತರಿಸಲು ಕ್ರಮ ಕೈಗೊಳ್ಳಬೇಕು. ಪೋಲಿಸ್ ಇಲಾಖೆಯವರು, ಅಗ್ನಿಶ್ಯಾಮಕ ಸಿಬ್ಬಂದಿಗಳನ್ನು, ರಾಜ್ಯ ವಿಪತ್ತು ಸ್ಪಂದನಾ ಪಡೆ "ಸಿ" ಕಂಪನಿ, ಸಮಾದೇಷ್ಟರು ಜಿಲ್ಲಾ ಗೃಹರಕ್ಷಕದ ದಳ ಬೆಳಗಾವಿ, ಪಂಚಾಯತ ರಾಜ ಇಂಜನೀಯರಿಂಗ ಹಾಗೂ ಲೋಕೋಪಯೋಗಿ ಇಲಾಖೆಯ ಅಭಿಯಂತರರು ಪ್ರವಾಹದ ಸಂದರ್ಭದಲ್ಲಿ ಬೇಕಾಗುವ ಅಗತ್ಯವಾದ ಬೋಟಗಳನ್ನು ಸೇರಿದಂತೆ ಇನ್ನಿತರ ರಕ್ಷಣಾ ಸಾಮಗ್ರಿಗಳನ್ನು ಹಾಗೂ ಸಿಬ್ಬಂದಿಗಳನ್ನು ಯಾವುದೇ ಸಮಯದಲ್ಲಿ ಉಪಯೋಗಿಸುವ ಸ್ಥಿತಿಯಲ್ಲಿ ಸಿದ್ಧವಾಗಿಟ್ಟುಕೊಳ್ಳಬೇಕು. ಹೆಸ್ಕಾಂ ಇಲಾಖೆಯವರು ನದಿ ಪಾತ್ರದಲ್ಲಿ ಬರುವಂತಹ ವಿದ್ಯುತ್ ಕಂಬಗಳನ್ನು ಬೇರೆಡೆಗೆ ಸ್ಥಳಾಂತರಿಸಲು ಅಥವಾ ಅದಕ್ಕೆ ಬೇಕಾಗುವ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು. ಅದೇ ರೀತಿಯಾಗಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಬೆಳಗಾವಿ, ಚಿಕ್ಕೋಡಿ ಇವರು ಅಗತ್ಯವಾದ ನುರಿತ ವೈದ್ಯರು, ಸಿಬ್ಬಂಧಿ ಹಾಗೂ ಔಷಧಗಳೊಂದಿಗೆ ಪ್ರವಾಹಪೀಡಿತ ಸ್ಥಳಗಳಲ್ಲಿ ಸನ್ನದ್ಧರಾಗಿರಬೇಕು. ಸಂಬಂಧಿಸಿದ ಉಪ ವಿಭಾಗಾಧಿಕಾರಿಗಳು ತಮ್ಮ ಉಪವಿಭಾಗ ವ್ಯಾಪ್ತಿಯಲ್ಲಿ ಅತಿವೃಷ್ಟಿ/ಪ್ರವಾಹದ ಸಂದರ್ಭದಲ್ಲಿ ಕೈಗೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳ ಕುರಿತು ಸಾರ್ವಜನಿಕರಿಗೆ ಅಗತ್ಯವಾದ ತಿಳುವಳಿಕೆಯನ್ನು ಹಾಗೂ ಜಿಲ್ಲಾ ಆಡಳಿತ ವತಿಯಿಂದ ಕೈಗೊಳ್ಳಲಾಗುತ್ತಿರುವ ಕ್ರಮಗಳ ಬಗ್ಗೆ ದಿನಪತ್ರಿಕೆ ಹಾಗೂ ಮಾಧ್ಯಮಗಳ ಮೂಲಕ ಸಾರ್ವಜನಿಕರಲ್ಲಿ ಅರಿವು ಮೂಡಿಸಲು ವ್ಯಾಪಕವಾಗಿ ಪ್ರಚಾರ ಕಾರ್ಯವನ್ನು ಕೈಗೊಳ್ಳಬೇಕು.

5. ಸಂಬಂಧಿಸಿದ ತಹಶೀಲ್ದಾರರು ಎನ್‌ಡಿಆರ್‌ಎಫ್/ಎಸ್‌ಡಿಆರ್‌ಎಫ್ ಮಾರ್ಗಸೂಚಿಯನ್ವಯ ಅರ್ಹ ಸಂತ್ರಸ್ತ ಕುಟುಂಬವನ್ನು ಆಯ್ಕೆ ಮಾಡಿ, ಪರಿಹಾರ ಧನವನ್ನು ವಿತರಿಸಲು

ನಿಯಮಾನುಸಾರ ಕ್ರಮ ಜರುಗಿಸಿ, ಪರಿಹಾರವನ್ನು ವಿತರಣೆ ಮಾಡಿದ ಬಗ್ಗೆ ದೃಢೀಕೃತ ಫೋಟೋಗಳ ದಾಖಲೆಗಳನ್ನು ನಿರ್ವಹಿಸತಕ್ಕದ್ದು. ಬಿಡುಗಡೆ ಮಾಡಿದ ಅನುದಾನವನ್ನು ಸರ್ಕಾರವು ಕಾಲ-ಕಾಲಕ್ಕೆ ಹೊರಡಿಸಿದ ಮಾರ್ಗಸೂಚಿಗಳನ್ವಯ ಅರ್ಹ ಸಂತ್ರಸ್ತರಿಗೆ ಪರಿಹಾರ ಧನವನ್ನು ವಿತರಣೆ ಮಾಡತಕ್ಕದ್ದು. ಒಂದು ವೇಳೆ ಅರ್ಹ ಸಂತ್ರಸ್ತ ಕುಟುಂಬವನ್ನು ಆಯ್ಕೆ ಮಾಡುವಲ್ಲಿ ಹಾಗೂ ಪರಿಹಾರ ಧನ ವಿತರಣೆ ಮಾಡಲು ಯಾವುದೇ ಲೋಪದೋಷಗಳು ಉಂಟಾದಲ್ಲಿ ಸಂಬಂಧಿಸಿದ ತಹಶೀಲ್ದಾರರನ್ನು ನೇರವಾಗಿ ಜವಾಬ್ದಾರರನ್ನಾಗಿ ಮಾಡಲಾಗುವದು. ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು ಅರ್ಹ ಸಂತ್ರಸ್ತ ಕುಟುಂಬಗಳಿಗೆ ಪರಿಹಾರ ಸಂದಾಯವಾಗುತ್ತಿರುವ ಬಗ್ಗೆ, ಸರ್ಕಾರದ ನಿರ್ದೇಶನಗಳು ಪಾಲನೆಯಾಗುತ್ತಿರುವ ಬಗ್ಗೆ ಮೇಲ್ವಿಚಾರಣೆಯನ್ನು ಕೈಗೊಳ್ಳತಕ್ಕದ್ದು.

6. ಅತಿವೃಷ್ಟಿ/ಪ್ರವಾಹದಿಂದಾಗಿ ಉಂಟಾದ ಹಾನಿಗಳಿಗೆ ಸಂಬಂಧಿಸಿದಂತೆ, ಪರಿಹಾರ ಧನ ವಿತರಿಸಲು ಬಾಕಿಯಿರುವ ಎಲ್ಲ ಪ್ರಕರಣಗಳನ್ನು ನಿಯಮಾನುಸಾರ ಇತ್ಯರ್ಥಪಡಿಸಿ, ಸೂಕ್ತ ಪರಿಹಾರ ಧನವನ್ನು ವಿತರಿಸಲು ಜಿಲ್ಲೆಯ ಎಲ್ಲ ಉಪವಿಭಾಗಾಧಿಕಾರಿಗಳು/ತಹಶೀಲ್ದಾರರು ಕ್ರಮ ಜರುಗಿಸತಕ್ಕದ್ದು.

7. ಪಂಚಾಯತ ರಾಜ್ ಇಂಜನೀರಿಂಗ ಇಲಾಖೆ, ಲೋಕೋಪಯೋಗಿ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಸಾರ್ವಜನಿಕ ಶಿಕ್ಷಣ ಇಲಾಖೆ, ಜಿಲ್ಲಾ ಆರೋಗ್ಯ & ಕುಟುಂಬ ಕಲ್ಯಾಣ ಇಲಾಖೆಗಳ ಅಧಿಕಾರಿಗಳು ಸಾರ್ವಜನಿಕ ಆಸ್ತಿಗಳ ದುರಸ್ತಿ ಕಾಮಗಾರಿಗಳನ್ನು ಕೈಗೊಳ್ಳಲು ತ್ವರಿತಗತಿಯಲ್ಲಿ ಅಂದಾಜು ಪತ್ರಿಕೆಗಳನ್ನು ಜಿಲ್ಲಾಧಿಕಾರಿಗಳಿಗೆ ಸಲ್ಲಿಸಿ, ಅನುಮೋದನೆಯನ್ನು ಪಡೆದುಕೊಂಡು ಕಾಮಗಾರಿಗಳನ್ನು ತೀವ್ರಗತಿಯಲ್ಲಿ ಪೂರ್ಣಗೊಳಿಸಬೇಕು.

8. 2018-19ನೇ ಸಾಲಿನ ಹಿಂಗಾರು ಹಂಗಾಮಿಗೆ ಸಂಬಂಧಿಸಿದಂತೆ ಹಾಗೂ 2019ನೇ ಮುಂಗಾರು ಹಂಗಾಮಿನಲ್ಲಿ ಅತಿವೃಷ್ಟಿ/ಪ್ರವಾಹದಿಂದ ಬೆಳೆ ಹಾನಿಗಳಿಗೆ ಸಂಬಂಧಿಸಿದಂತೆ ಪರಿಹಾರ ತಂತ್ರಾಂಶದಲ್ಲಿ ರೈತರ ವಿವರಗಳನ್ನು ಇಂದೀಕರಣ ಕಾರ್ಯವನ್ನು ಆದಷ್ಟು ಬೇಗನೆ ಪೂರ್ಣಗೊಳಿಸಲು ಸೂಚನೆಗಳನ್ನು ನೀಡಿದರು.

9. ಖಾನಾಪೂರ ತಾಲೂಕಿನ ಬೈಲೂರ ಸಮೀಪದ ರಸ್ತೆಯ ಹಾನಿ ಹಾಗೂ ಕುಸಮಳಿ ಗ್ರಾಮದ ಬಳಿಯಿರುವ ಬೆಳಗಾವಿ-ಗೋವಾ ರಾಷ್ಟ್ರೀಯ ಹೆದ್ದಾರಿಯಲ್ಲಿ ಉಂಟಾದ ಭೂ ಕುಸಿತವಾಗಿದ್ದು, ಸದರಿ ರಸ್ತೆಗಳನ್ನು ದುರಸ್ತಿ ಮಾಡಲು ಸಂಬಂಧಿಸಿದ ಲೋಕೋಪಯೋಗಿ ಇಲಾಖೆಯವರು ಕ್ರಮ ಜರುಗಿಸಬೇಕು.

10. ಖಾನಾಪೂರ ತಾಲೂಕಿನ ಜಾಂಬೋಟಿವಾಡ & ಜಾಂಬೋಟಿ ಗ್ರಾಮದಲ್ಲಿನ ಅಂಗನವಾಡಿ ಕೇಂದ್ರಗಳಿಗೆ ಭೇಟಿ ನೀಡಲಾಗಿದೆ. ಜಾಂಬೋಟಿ ಗ್ರಾಮದಲ್ಲಿನ ಸ್ಥಳೀಯ ಅನುದಾನಿತ ಪ್ರೌಢ

ಶಾಲೆಯ ಕೊಠಡಿ, ಅಕ್ಷರ ದಾಸೋಹ ಕೊಠಡಿ, ನಿರಿನ ಭಾವಿ ಭೂ ಕುಸಿತಕ್ಕೆ ಒಳಗಾಗಿದ್ದು, ಇವುಗಳ ಕುರಿತು ಸಂಬಂಧಿಸಿದ ಇಲಾಖೆಯವರು ಸೂಕ್ತ ಕ್ರಮಗಳನ್ನು ಕೈಗೊಳ್ಳಲು ಸೂಚಿಸಲಾಯಿತು.

ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು
ಜಲಸಂಪನ್ಮೂಲ ಇಲಾಖೆ ಹಾಗೂ ಬೆಳಗಾವಿ
ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು

**ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಿಬೇಕಾದ ನಮೂನೆ**

**ವಿಜಯಪುರ ಜಿಲ್ಲೆ**

| ಕ್ರ ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ವಿಜಯಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ॥ ಜೆ. ರವಿಶಂಕರ್, ಭಾ.ಆ.ಸೇ., |
| 3 | ಭೇಟಿಯಾದ / ಪ್ರವಾಸದ ದಿನಾಂಕ | 24.10.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | **ಪ್ರವಾಹ ಪರಿಸ್ಥಿತಿ**<br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಮಾತನಾಡಿ, ಜಿಲ್ಲೆಯಲ್ಲಿ ಇತ್ತೀಚಿಗೆ ಆದ ಮಳೆ ಮತ್ತು ಡೋಣಿ ನದಿಯ ಪ್ರವಾಹದಿಂದ ಆಗಿರುವ ಹಾನಿಯ ಕುರಿತು ಮಾಹಿತಿ ನೀಡಲು ತಿಳಿಸಿದರು.<br><br>ಜಿಲ್ಲಾಧಿಕಾರಿಗಳವರು ಮಾತನಾಡಿ, ಜಿಲ್ಲೆಯಲ್ಲಿ ದಿನಾಂಕ: 19/10/2019 ರಿಂದ 21/10/2019ರ ವರೆಗೆ ಉತ್ತಮವಾದ ಮಳೆಯಾಗಿದ್ದು, ಆದರೆ ಡೋಣಿ ನದಿಯ ಮೇಲ್ಭಾಗದ ಪ್ರದೇಶದಲ್ಲಿ ಉತ್ತಮ ಮಳೆಯಾಗಿರುವುದರಿಂದ ಡೋಣಿ ನದಿಗೆ ಪ್ರವಾಹ ಬಂದಿರುತ್ತದೆ.<br><br>ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಹೆಚ್ಚುವರಿ ನೀರನ್ನು ಹೊರಗೆ ಬಿಟ್ಟಿರುವುದರಿಂದ ಹಾಗೂ ಅಫಜಲಪೂಲ ತಾಲೂಕಿನ ಸೊನ್ನ ಬ್ಯಾರೇಜಿನ ಹಿನ್ನೀರಿನಿಂದಾಗಿ ಸಿಂದಗಿ ತಾಲೂಕಿನ ತಾರಾಪೂರ ಗ್ರಾಮದ ಸಂಪರ್ಕ ರಸ್ತೆಯ ಮೇಲೆ 2-3 ಅಡಿ ನೀರು ನಿಂತಿದ್ದು, ಸಧ್ಯಕ್ಕೆ ಗ್ರಾಮಸ್ಥರಿಗೆ ಯಾವುದೇ ತೊಂದರೆ ಇರುವುದಿಲ್ಲ ಎಂದು ಸಭೆಗೆ ಮಾಹಿತಿ ನೀಡಿದರು.<br><br>ಮಳೆಯಿಂದಾಗಿ ಜಿಲ್ಲೆಯಲ್ಲಿ ಒಟ್ಟು 299 ಮನೆಗಳು ಹಾನಿಗೊಳಗಾಗಿದ್ದು, ಕಂದಾಯ, ಗ್ರಾಮೀಣ ಅಭಿವೃದ್ಧಿ ಮತ್ತು ತಾಂತ್ರಿಕ ಅಧಿಕಾರಿಗಳ ತಂಡವನ್ನು ರಚಿಸಿ ಸರ್ವೆ ಕಾರ್ಯ ಕೈಕೊಳ್ಳಲು ತಹಶೀಲ್ದಾರರಿಗೆ ಸೂಚಿಸಲಾಗಿದೆ. ನಂತರ ಸಮೀಕ್ಷಾ ತಂಡದ ವರದಿಯನ್ನು ಆಧರಿಸಿ ಎಸ್.ಡಿ.ಆರ್.ಎಫ್./ ಎನ್.ಡಿ.ಆರ್.ಎಫ್. ರ ಮಾರ್ಗಸೂಚಿಯ ಅನುಸಾರ ಅಥವಾ ಸರ್ಕಾರವು ಈ ಕುರಿತು ನೀಡುವ ಆದೇಶಗಳಿಗೆ ಅನುಸಾರವಾಗಿ ಸಂತ್ರಸ್ತರಿಗೆ ಪರಿಹಾರಧನವನ್ನು ವಿತರಿಸಲಾಗುವುದು. ಹಾಗೂ ಮಾಹೆ ಅಗಸ್ಟ್‌ನಲ್ಲಿ ಸಂಭವಿಸಿದ ಪ್ರವಾಹದಿಂದ ಹಾನಿಗೀಡಾದ "ಸಿ" ದರ್ಜೆಯ ಮನೆಗಳಿಗೆ ಈಗಾಗಲೇ ರೂ.25,000/- ಪರಿಹಾರಧನವನ್ನು ವಿತರಿಸಲಾಗಿದ್ದು, ಸರ್ಕಾರದ ಇತ್ತೀಚಿನ ಆದೇಶದ ಮೇರೆಗೆ ಹೆಚ್ಚುವರಿಯಾಗಿ ರೂ.25,000/- ಪರಿಹಾರಧನವನ್ನು ವಿತರಿಸುವ ಕುರಿತು ಕ್ರಮ ಜರುಗಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.<br><br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಮಾತನಾಡಿ ಇತ್ತೀಚಿನ ಮಳೆಯಿಂದ ಹಾನಿಗೀಡಾಗಿರುವ ಮನೆಗಳ ಸಮೀಕ್ಷಾ ಕಾರ್ಯವನ್ನು ಕೂಡಲೇ |

ಪೂರ್ಣಗೊಳಿಸಲು ಮತ್ತು "ಸಿ" ದರ್ಜೆಯ ಮನೆಗಳಿಗೆ ರೂ.25,000/- ಪರಿಹಾರಧನವನ್ನು ವಿತರಿಸಲು ಸೂಚಿಸಿದರು.

ಡೋಣಿ ನದಿಯ ಪ್ರವಾಹದಿಂದಾಗಿ ಜಿಲ್ಲೆಯಲ್ಲಿ ಒಟ್ಟು 4903 ಹೆಕ್ಟೇರ್‌ನಲ್ಲಿ ಬೆಳೆದಿರುವಂತೆ ಬೆಳೆಯು ನಾಶವಾಗಿದ್ದು ಕಂದಾಯ, ಕೃಷಿ ಮತ್ತು ತೋಟಗಾರಿಕಾ ಇಲಾಖಾ ಅಧಿಕಾರಿಗಳ ತಂಡವನ್ನು ರಚಿಸಿ ಸರ್ವೆ ಕಾರ್ಯ ಕೈಕೊಳ್ಳಲು, ಸಮೀಕ್ಷಾ ತಂಡದ ವರದಿಯ ಮೇರೆಗೆ ಬೆಳೆ ಹಾನಿಯ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲು ತಹಶೀಲ್ದಾರರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಸನ್ 2018-19ನೇ ಸಾಲಿನ ಹಿಂಗಾರು ಬೆಳೆಹಾನಿಯ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ಪೂರ್ಣಪ್ರಮಾಣದಲ್ಲಿ ಅಳವಡಿಸಲಾಗಿದ್ದು 6109 ಭಾಗಶಃ ಎಂಟ್ರಿಗಳು ಬಾಕಿ ಉಳಿದಿದ್ದು, ಅವುಗಳನ್ನು ಪೂರ್ಣಗೊಳಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಮಾತನಾಡಿ ಡೋಣಿ ನದಿಯ ಪ್ರವಾಹದಿಂದ ಹಾನಿಗೀಡಾದ ಬೆಳೆಗಳ ಹಾನಿಯ ವರದಿಯನ್ನು ಸಮೀಕ್ಷಾ ತಂಡದಿಂದ ಪೂರ್ಣಗೊಳಿಸಿ ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸಿದರು.

<u>ಮಿನಿ ವಿಧಾನಸೌಧ</u>

ಜಿಲ್ಲೆಯಲ್ಲಿ ಒಟ್ಟು 7 ಹೊಸ ತಾಲೂಕುಗಳ ರಚನೆಯಾಗಿದ್ದು, ತಿಕೋಟಾ ಮತ್ತು ಬಬಲೇಶ್ವರ ತಾಲೂಕುಗಳ ಮಿನಿ ವಿಧಾನಸೌಧ ರಚನೆ ಕುರಿತು ಒಟ್ಟು ರೂ.10.00 ಕೋಟಿ ಮೊತ್ತಕ್ಕೆ ಮಂಜೂರಾತಿ ನೀಡಿದ್ದು, ಆದರೆ ಸದರ ಆದೇಶವನ್ನು ತಡೆ ಹಿಡಿಯಲಾಗಿದೆ ಹಾಗೂ ಚಡಚಣ ತಾಲೂಕಿನ ಮಿನಿ ವಿಧಾನಸೌಧ ನಿರ್ಮಾಣದ ಕುರಿತು ನಗರದ ಸಮೀಪದಲ್ಲಿ ಯಾವುದೇ ಸ್ಥಳದ ಅಲಭ್ಯತೆ ಇರುವುದರಿಂದ ಲೋಕೋಪಯೋಗಿ ಇಲಾಖೆಯ ಸ್ಥಳದಲ್ಲಿ ನಿರ್ಮಿಸುವ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಮಾತನಾಡಿ ಲೋಕೋಪಯೋಗಿ ಇಲಾಖೆಯ ಸ್ಥಳವು ಯೋಗ್ಯವಾಗಿದ್ದಲ್ಲಿ ಮಿನಿ ವಿಧಾನಸೌಧ ನಿರ್ಮಾಣದ ಕುರಿತು ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸಲು ಸೂಚಿಸಿದರು.

**(ಡಾ|| ಜೆ. ರವಿಶಂಕರ್, ಭಾ.ಆ.ಸೇ.)**
**ವ್ಯವಸ್ಥಾಪಕ ನಿರ್ದೇಶಕರು,**
**ಕ.ನ.ನೀ.ಸ ಮತ್ತು ಒ.ಚ ಮಂಡಳ, ಬೆಂಗಳೂರು**
**ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,**
**ವಿಜಯಪುರ**

**ದಿನಾಂಕ 15-10-2019 ರಂದು ಬೆಳಿಗ್ಗೆ 11.00 ಗಂಟೆಗೆ ಡಾ: ಎಸ್. ಸೆಲ್ವಕುಮಾರ್, ಮಾನ್ಯ ಸರ್ಕಾರದ ಕಾರ್ಯದರ್ಶಿಗಳು, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ಹಾಗೂ ಕೊಪ್ಪಳ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ಕೊಪ್ಪಳ ಜಿಲ್ಲಾ ಪಂಚಾಯಿತ್ ಜೆ.ಹೆಚ್ ಪಾಟೀಲ್ ಸಭಾಂಗಣದಲ್ಲಿ ಜರುಗಿದ ಜಿಲ್ಲೆಯ ಪ್ರಗತಿ ಪರಿಶೀಲನಾ ಸಭೆಯ ನಡುವಳಿಗಳು**

ಸಭೆಯಲ್ಲಿ ಉಪಸ್ಥಿತರಿದ್ದವರು: ಹಾಜರಾತಿ ವಹಿಯ ಪ್ರಕಾರ

ದಿನಾಂಕ :15-10-2019 ರಂದು ಬೆಳ್ಳಿಗೆ 11.00 ಗಂಟೆಗೆ ಕೊಪ್ಪಳ ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಕೊಪ್ಪಳ ಜಿಲ್ಲೆಯ ಪ್ರಗತಿ ಪರಿಶೀಲನೆ ಸಭೆಯನ್ನು ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದಶಿಗಳು ರವರ ಅಧ್ಯಕ್ಷತೆಯಲ್ಲಿ ಜರುಗಿಸಲಾಯಿತು. ಅಪರ ಜಿಲ್ಲಾಧಿಕಾರಿಗಳು ಇವರು ಸಭೆಗೆ ಆಗಮಿಸಿದ ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳುರವರನ್ನು ಸ್ವಾಗತಿಸಿದರು ಹಾಗೂ ಮಾನ್ಯ ಜಿಲ್ಲಾಧಿಕಾರಿಗಳು ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಹಾಗೂ ಹಾಜರಿದ್ದ ಎಲ್ಲಾ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ಸಭೆಗೆ ಸ್ವಾಗತಿಸಿ ಸಭೆಯನ್ನು ಪ್ರಾರಂಭಿಸಲಾಯಿತು.

ಮಾನ್ಯ ಕೊಪ್ಪಳ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸಭೆಗೆ ಹಾಜರಾಗಿದ್ದ ಅಧಿಕಾರಿಗಳನ್ನು ಸ್ವಾಗತಿಸುತ್ತಾ, ಕೃಷಿ ಇಲಾಖೆಗೆ ಸಂಬಂಧಿಸಿದ ಮಾಹಿತಿಯನ್ನು ನೀಡಲು ಸೂಚಿಸಿದರು.

ಕೃಷಿ ಇಲಾಖೆ :-

ಜಂಟಿ ಕೃಷಿ ನಿರ್ದೇಶಕರು ಮಾತನಾಡುತ್ತಾ ಸಭಗೆ ಜಿಲ್ಲೆಯ ಮಳೆ ಬಗ್ಗೆ ವಿವರಿಸುತ್ತಾ, ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಮಳೆ ಕೊರತೆ ಆಗಿದ್ದು ಗಂಗಾವತಿ ತಾಲೂಕಿನಲ್ಲಿ 18% ಕಡಿಮೆ ಆಗಿದೆ ಯಲಬುರ್ಗಾ ತಾಲ್ಲೂಕಿನಲ್ಲಿ-9% ಕಡಿಮೆ ಆಗಿರುತ್ತದೆ ಜಿಲ್ಲೆಯಲ್ಲಿ ಹಿಂಗಾರು ಹಂಗಾಮಿನಲ್ಲಿ ಜಿಲ್ಲೆಯಲ್ಲಿ ಉತ್ತಮ ಮಳೆಯಾಗಿರುತ್ತದೆ ಹಾಗೂ ಹಿಂಗಾರು ಹಂಗಾಮಿನಲ್ಲಿ ಬಿತ್ತನೆ ಬೀಜ ಶೇಂಗಾ, ಜೋಳ ಮತ್ತು ಕಡಲೆ ಬಿತ್ತನೆ ಬೀಜವನ್ನು ಪರೀಕ್ಷೆ ಮಾಡಿ ಅದು ಉತ್ತಮವಾದ್ದುದೆಂದು ಪರಿಗಣಿಸಿದ ಮೇಲೆ ವಿತರಣೆ ಮಾಡಲಾಗುತ್ತದೆ. ಬಿತ್ತನೆ ಬೀಜವನ್ನು ರಿಯಾಯತಿ ದರದಲ್ಲಿ ರೈತರಿಗೆ ನೀಡಲಾಗುತ್ತಿದೆ. ಪ್ರತಿ ವರ್ಷ ನವಂಬರ್ ತಿಂಗಳಲ್ಲಿ ಬೀಜಗಳನ್ನು ನೀಡುತ್ತೇವೆ. ಆದರೆ ಈ ಸಲ ರೈತರ ಬೇಡಿಕೆಯಿಂದ ಬೀಜಗಳನ್ನು ವಿತರಿಸುತ್ತಿದ್ದೇವೆ. ಹಿಂಗಾರು ಹಂಗಾಮಿನಲ್ಲಿ ಯೂರಿಯಾ ಗೊಬ್ಬರ ಈ ತಿಂಗಳು 80% ದಾಸ್ತಾನು ಇದೆ. ಜಿಲ್ಲೆಯಲ್ಲಿ ಪಿ.ಎಂ.ಕಿಸಾನ್ ಯೋಜನೆಯಡಿ 1.54 ಲಕ್ಷ ನೊಂದಾಯಿಸಿಕೊಂಡಿದ್ದಾರೆ. ರೈತರಿಗೆ ಈ ಯೋಜನೆಯಡಿ ರೂ.6000/- ಸಾವಿರ ರೂಪಾಯಿ ನೀಡಲಾಗುತ್ತದೆ. ಮುಂದುವರೆದು 2016-17ನೇ ಸಾಲಿನಲ್ಲಿ ರೈತರಿಗೆ ಬೆಳೆ ವಿಮೆ ನೀಡಲಾಗಿದೆ. ಕೆಲವು ರೈತರಿಗೆ ಬೆಳೆ ವಿಮೆ ಬಂದಿಲ್ಲ ಕಾರಣ ಬೆಳೆ ಬೆಳೆದು ಬೆಳೆಯಲ್ಲಿ ಬದಲಾವಣೆ ಮಾಡಿ ಬೆಳೆ ಕಾಟವು ಆಗಿರುವುದರಿಂದ ಬೆಳೆ ವಿಮೆ ಬಂದಿರುವುದಿರುವುದಿಲ್ಲ. ಇದರಿಂದ ಇಡೀ ಜಿಲ್ಲೆಗೆ ನಷ್ಟವಾತದೆ. ಸಧ್ಯಕ್ಕೆ ಅನುದಾನ ಬಂದಿದ್ದು, ಸದರಿ ಅನುದಾನ ಆಯುಕ್ತರ ಖಾತೆಯಲ್ಲಿದೆ ಇನ್ನೂ ಕೆಲವು ದಿನಗಳಲ್ಲಿ ಹಣ ನೇರವಾಗಿ ರೈತರ ಖಾತೆಗೆ ವರ್ಗಾವಣೆಯಾಗುತ್ತದೆ ಎಂದು ಸಭೆಗೆ ತಿಳಿಸಿದರು. ಕೂಡಲೇ ರೈತರಿಗೆ ಪರಿಹಾರ ವಿತರಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ಕಂದಾಯ ಇಲಾಖೆ:-

ಕುಡಿಯುವ ನೀರು :

ಅಪರ ಜಿಲ್ಲಾಧಿಕರಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಈಗ ಉತ್ತಮ ಮಳೆಯಾಗಿರುವುದರಿಂದ ಸಧ್ಯಕ್ಕೆ ಜಿಲ್ಲೆಯಲ್ಲಿ ಟ್ಯಾಂಕರ್‌ಗಳ ಮೂಲಕ 5 ಗ್ರಾಮಗಳಿಗೆ ಮತ್ತು 98 ಗ್ರಾಮದಲ್ಲಿ 122 ಖಾಸಗಿ ಕೊಳವೆಭಾವಿಯನ್ನು ಬಾಡಿಗೆ ಆಧಾರದ ಮೂಲಕ ಪಡೆದು ಭೂ ಮಾಲೀಕರಿಗೆ ಪಂಚಾಯತಿ ಮೂಲಕ ಪ್ರತಿತಿಂಗಳಿಗೆ ರೂ.10.000/- ಸಾವಿರ ನೀಡಲಾಗುತ್ತಿದೆ.

ಈಗಾಗಲೇ ಜಿಲ್ಲಾಧಿಕಾರಿಗಳ ಎಸ್.ಡಿ.ಆರ್.ಎಫ್. ಖಾತೆಯಿಂದ ಅಗಸ್ಟ 2019ರ ವರಗೆ ಕುಡಿಯುವ ನೀರಿನ ಸಲುವಾಗಿ ಅನುದಾನ ಬಿಡುಗಡೆ ಮಾಡಲಾಗಿರುತ್ತದೆ. ಸೆಪ್ಟಂಬರ ರಿಂದ ಸಂಬಂಧಿಸಿದ ಗ್ರಾಮ ಪಂಚಾಯತ್ ಹಂತದಲ್ಲಿ ಹಣ ಪಾವತಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

ಜಿಲ್ಲಾ ಉಸ್ತವಾರಿ ಕಾರ್ಯದರ್ಶಿಗಳು ಮಾತನಾಡುತ್ತಾ, ಜಿಲ್ಲೆಯಲ್ಲಿ ಪ್ರವಾಹದಿಂದ ಉಂಟಾದ ನಷ್ಟವೆಷ್ಟು ? ಪರಿಹಾರ ಕ್ರಮ ಯಾವ ರೀತಿಯಲ್ಲಿ ಕೈಗೊಂಡಿದ್ದೀರಿ ಎಂದು ಪ್ರಶ್ನಿಸಿದರು. ಅದರನ್ವಯ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಜಿಲ್ಲೆಯ ಗಂಗಾವತಿ ಹಾಗೂ ಕೊಪ್ಪಳ ತಾಲ್ಲೂಕಿನ ಕೆಲಭಾಗಗಳಲ್ಲಿ ತುಂಗಾಭದ್ರಾ ನದಿಗೆ ಹೆಚ್ಚುನೀರು ಬಿಟ್ಟಿರುವುದರಿಂದ ಮುನಿರಬಾದ್ ಗ್ರಾಮದಲ್ಲಿ ಸುಮಾರು 150 ಮನೆಗಳಿಗೆ ನೀರು ನುಗ್ಗಿರುತ್ತದೆ. ಸದರಿ ಸಂತ್ರಸ್ಥರಿಗೆ ಸರ್ಕಾರದ ನಿರ್ದೇಶನದ ಪ್ರಕಾರ ಪ್ರತಿ ಮನೆಗೆ ರೂ.10,000/- ಸಾವಿರ ರಂತೆ ಒಟ್ಟು 15.00ಲಕ್ಷ ಪರಿಹಾರವನ್ನು ವಿತರಿಸಲಾಗಿರುತ್ತದೆ. ಮತ್ತು 3 ಕಚ್ಚಾ ಮನೆಗಳು ಭಾಗಶಃ ಹಾನಿಯಾಗಿದ್ದು, ಸದರಿ ಸಂತ್ರಸ್ಥರಿಗೆ ರೂ.25,000/- ಸಾವಿರದಂತೆ ಒಟ್ಟು ರೂ.75,000/- ಸಾವಿರಗಳನ್ನು ಪಾವತಿಸಲಾಗಿರುತ್ತದೆ. ವಿರೂಪಾಪುರಗಡ್ಡಿಯಲ್ಲಿ ರೆಸಾರ್ಟ್ ಮಾಲೀಕರ ವಿರುದ್ಧ ದೂರು ದಾಖಲಿಸಲಾಗಿದೆ. ಸೆಪ್ಟಂಬರ - 2019 ರ ಮಾಹೆಯಲ್ಲಿ ಸುರಿದ ಮಳೆಯಿಂದ ಜಿಲ್ಲೆಯಲ್ಲಿ ಒಟ್ಟು 176 ಪಕ್ಕಾ ಮನೆಗಳು ಭಾಗಶಃ ಹಾನಿಯಾಗಿರುತ್ತವೆ. 3 ಕಚ್ಚಾ ಮನೆಗಳು ಸಂಪೂರ್ಣವಾಗಿ ಬಿದ್ದಿರುತ್ತವೆ. 60 ಮನೆಗಳಲ್ಲಿ ನೀರು ನುಗ್ಗಿರುತ್ತದೆ. ಮತ್ತು 56 ಹೆಕ್ಟರ್ ಕೃಷಿ ಬೆಳೆ ಮತ್ತು 51 ಹೆಕ್ಟರ್ ತೋಟಗಾರಿಗೆ ಬೆಳೆ ಹನಿಯಾಗಿರುತ್ತವೆ 8 ಜಾನುವಾರಿಗಳು ಮೃತಪಟ್ಟಿರುತ್ತವೆ. ಲೋಕೋಪಯೋಗಿ ಇಲಾಖೆಯ 2 ಸೇತುವೆ ಮತ್ತು 5 ರಸ್ತೆಗಳು ಹಾನಿಯಾಗಿರುತ್ತವೆ. ಅದಲ್ಲದೆ 59 ಕಂಬಗಳು, 47 ಟ್ರಾನ್ಸ ಫರಗಳು, 4 ಕೀ.ಮೀ. ವಿದ್ಯುತ್ ಲೈ ಹಾನಿಯಾಗಿರುತ್ತವೆ. ಹನಿಯಾದ ಬೆಳೆ ಮತ್ತು ಮನೆಗಳಿಗೆ ಜಂಟಿ ಸಮೀಕ್ಷೆ ಮಾಡಿ ತೀರ್ವವಾಗಿ ಪರಿಹಾರ ನೀಡಲು ಜಿಲ್ಲೆಯ ತಹಶಿಲ್ದಾರರಿಗೆ ನಿರ್ದೇಶನ ನೀಡಲಾಗಿದೆ ಎಂದು ಸಭೆಗೆ ತಿಳಿಸಿದರು. ಕೂಡಲೇ ಸರ್ವೆ ಕಾರ್ಯ ಪೂರ್ಣಗೊಳಿಸಿ ಪರಿಕಾರ ವಿರತಣೆ ಮಾಡಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

**ಸಮಾಜ ಕಲ್ಯಾಣ ಇಲಾಖೆ** : ಇಲಾಖಾಧಿಕಾರಿಗಳು ಮಾತನಾಡುತ್ತಾ, ಪರಿಶಿಷ್ಟ ಜಾತಿಗಾಗಿ ಸ್ಮಶಾನಕ್ಕೆ 1 ಕೋಟಿ ಅನುದಾನ ಬಿಡುಗಡೆಯಾಗಿದೆ. ಅದರಲ್ಲಿ 63 ಲಕ್ಷ ಖರ್ಚಾಗಿದೆ. ಇದರಲ್ಲಿ 8 ಗ್ರಾಮಗಳಲ್ಲಿ ಈಗಾಗಲೇ ಜಮೀನು ಖರೀದಿ ಮಾಡಲಾತಿರುತ್ತದೆ. ಪರಿಶಿಷ್ಠ ಪಂಗಡದವರಿಗೆ ಸ್ಮಶಾನಕ್ಕೆ 25.00 ಲಕ್ಷ ಅನುದಾನ ಬಿಡುಗಡೆಯಾಗಿದೆ. ಅದರಲ್ಲಿ 18.00 ಲಕ್ಷ ಖರ್ಚಾಗಿದೆ. ಇದರಲ್ಲಿ 3 ಗ್ರಾಮಗಳಲ್ಲಿ ಈಗಾಗಲೇ ಜಮೀನು ಖರೀದಿ ಮಾಡಲಾಗಿರುತ್ತದೆ ಎಂದು ಸಭೆಯ ಗಮನಕ್ಕೆ ತಂದರು. ಮುಂದುವರೆದು ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಸಾರ್ವಜನೀಕ ರುಧ್ರಭೂಮಿಗಾಗಿ ಸರ್ಕಾರಿ ಜಮೀನ್ನು ಕಾಯ್ದಿರಿಸಲು ತಹಶೀಲ್ದಾರರುಗಳಿಂದ ಪ್ರಸ್ತಾವನೆಗಳು ಸ್ವೀಕೃತವಾಗಿದ್ದು, ತ್ವರಿತವಾಗಿ ಸರ್ಕಾರಕ್ಕೆ ಕಳುಹಿಸಲಾಗುವುದು ಎಂದು ಸಭೆಗೆ ತಿಳಿಸಿದರು.

**ಅಂಬೇಡ್ಕರ್ ಅಭಿವೃದ್ಧಿ ನಿಗಮ** : ಅಧಿಕಾರಿಗಳು ಮಾತನಾಡುತ್ತಾ, ಗಂಗಾಕಲ್ಯಾಣ ಯೋಜನೆಯಡಿಯಲ್ಲಿ 2017-18ನೇ ಸಾಲಿನಲ್ಲಿ ಒಟ್ಟು 125 ಕೊಳವೆಭಾವಿಗಳ ವಿದ್ಯುದ್ದೀಕರಣಕ್ಕೆ ಬಾಕಿ ಇರುತ್ತದೆ. ಪ್ರಮುಖ ಬಹು ಒಡೆತನ ಯೋಜನ ಕಾರ್ಯಕ್ರಮದಡಿ ಪರಿತ್ಯಕ್ತ ದೇವದಾಸಿ ಭೂರಹಿತ 18 ಕೃಷಿಕಾರ್ಮಿಕ ಮಹಿಳೆಯರಿಗೆ ಒಟ್ಟು 50 ಎಕರೆ ಜಮಿನನ್ನು ಖರೀದಿಗಾಗಿ ಅನುಮೋದನೆ ನೀಡಲಾಗಿದ್ದು ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗಿರುತ್ತದೆ. ಅಲೆಮಾರಿ ಕೋಶದ ಭೂ ಒಡೆತನ ಯೋಜನೆಯಡಿಯಲ್ಲಿ ಮೊದಲ ಹಂತದಲ್ಲಿ ಕನಕಗಿರಿ ಹಾಗೂ ಗಂಗಾವತಿ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಅಲೆಮಾರಿ ಜನಾಂಗದವರಿಗೆ 280 ಎಕರೆ ನೀರಾವರಿ ಜಮಿನನ್ನು ಒಟ್ಟು 280 ಫಲಾಪೇಕ್ಷಿಗಳಿಗೆ ಖರೀದಿಗಾಗಿ ಅನುಮೋದನೆ ನೀಡಲಾಗಿದ್ದು ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲು ಕ್ರಮವಹಿಸಲಾಗಿರುತ್ತದೆ. ವಾಲ್ಮೀಕಿ ನಿಗಮಕ್ಕೆ ಭೂ ಒಡೆತನ ಯೋಜನೆಯಡಿ ಪ್ರಸ್ತಾವನೆಗಳು ಬಂದಿದ್ದು ಜಮೀನು ಖರೀದಿಗೆ ಆಯ್ಕೆ ಸಮಿತಿ ಅನುಮೋದನೆ ಪಡೆದು ಜಮೀನು ಖರೀದಿಗೆ ಕೇಂದ್ರ ಕಛೇರಿಗೆ ಪ್ರಸ್ತಾವನೆಯನ್ನು ಸಲ್ಲಿಸಲಾಗುವುದು. ಒಟ್ಟು 40 ಜನ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲು ಅವಕಾಶ ವಿದ್ದು ರೂ.6,00,00,000/- ಅನುದಾನ ಜಿಲ್ಲೆಗೆ ನಿಗಧಿಯಾಗಿದೆ ಎಂದು ಸಭೆಗೆ ತಿಳಿಸಿದರು.

**ಅಲ್ಪಸಂಖ್ಯಾತ ಇಲಾಖೆ** :

ಕರ್ನಾಟಕ ಅಲ್ಪಸಂಖ್ಯಾತರ ಅಭಿವೃದ್ಧಿ ನಿಗಮ: ಅಧಿಕಾರಿಗಳು ಮಾತನಾಡುತ್ತಾ, ಗಂಗಾಕಲ್ಯಾಣ ಯೋಜನೆಯಡಿ 2016-17, ಭೌತಿಕಗುರಿ- 58, ಭೌತಿಕ ಸಾಧನೆ - 58, ವಿದ್ಯೂದ್ದೀಕರಣ ಬಾಕಿ- 00, 2017-18 , ಭೌತಿಕಗುರಿ- 42, ಭೌತಿಕ ಸಾಧನೆ - 42, ವಿದ್ಯೂದ್ದೀಕರಣ ಬಾಕಿ- 18, ಹಾಗೂ 2018-19 , ಭೌತಿಕಗುರಿ- 42, ಭೌತಿಕ ಸಾಧನೆ - 00, ವಿದ್ಯೂದ್ದೀಕರಣ ಬಾಕಿ- 00, (ಕೇಂದ್ರ ನಿಗಮ ಕಛೇರಿಯಲ್ಲಿಟೆಂಡರ್ ಪ್ರಕ್ರೀಯೆ ಪ್ರಗತಿಯಲ್ಲಿದೆ) 2019-20 ನೇ ಸಾಲಿನ .1) ಸ್ವಯಂಉದ್ಯೋಗಯೋಜನೆ: ರೂ, 1.00 ಲಕ್ಷದೊಳಗೆಇರುವ ಯೋಜನೆಗಳಿಗೆ ಶೇಕಡಾ 50 ಅಥವಾಗರಿಷ್ಠ ರೂ, 35,000/- ರೂಗಳ ಸಹಾಯಧನ ಮತ್ತು 1.00 ಲಕ್ಷ ಕ್ಕಿಂತ ಹೆಚ್ಚಿನ ಮೌಲ್ಯದ ಯೋಜನೆಗಳಿಗೆ ಘಟಕ ವೆಚ್ಚದ ಶೇಕಡಾ 33 ಅಥವಾಗರಿಷ್ಠ ಮಿತಿರೂ. 2.00 ಲಕ್ಷ ಸಹಾಯಧನ ಸೌಲಭ್ಯ 2)ಶ್ರಮಶಕ್ತಿಯೋಜನೆ: ಘಟಕ ವೆಚ್ಚ ರೂ, 50,000/-ಗಳಿಗೆ ಶೇ 50% ರ ಸಹಾಯದನ ಸೌಲಭ್ಯ. 3) ಮೈಕ್ರೋ ಮಹೀಳಾ ಗುಂಪಿನ ಪ್ರತಿ ಸದಸ್ಯರಿಗೆರೂ.10,000/- ಶೇ 50% ರ ಸಹಾಯದನ ಸೌಲಭ್ಯ.ಈ ಎಲ್ಲಾಯೋಜನೆಗಳಿಗೆ ಆನ್‌ಲೈನ್ ಮೂಲಕ ಅರ್ಜಿ ಸಲ್ಲಿಸುವಕೊನೆಯ, ದಿನಾಂಕ 30-09-2019ಇದ್ದು ಬಂದಿರುವಎಲ್ಲಾ ಅರ್ಜಿಗಳನ್ನು ಪರಿಶೀಲಿಸಿ ಫಲಾನುಭವಿಗಳ ಆಯ್ಕೆ ಸಮೀತಿ ಸಭೆಗೆ ಪ್ರಸ್ತಾವನೆಗಳನ್ನು ಮಂಡಿಸುವಕಾರ್ಯ ಪ್ರಗತಿಯಲ್ಲಿದೆ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ರೈತರ ಆತ್ಮಹತ್ಯೆ ಪ್ರಕರಣ: ಕೊಪ್ಪಳ ಜಿಲ್ಲೆಯಲ್ಲಿ 2018-19 ಮತ್ತು 2019-20ರಲ್ಲಿ ಒಟ್ಟು 40 ಪ್ರಕರಣಗಳು ದಾಖಲಾಗಿದ್ದು, ಇದರಲ್ಲಿ 28 ಪ್ರಜರಣಗಳನ್ನು ಅಂಗೀಕರಿಸಲಾತದೆ. 6 ಪ್ರಕರಣಗಳನ್ನು ತಿರಸ್ಕರಿಸಲಾಗಿದ್ದು, ಇನ್ನು 6 ಪ್ರಕರಣಗಳು ಇತ್ಯರ್ಥಕ್ಕೆ ಬಾಕಿ ಇರುತ್ತವೆ. 28 ಪ್ರಕರಣಗಳಲ್ಲಿ 25 ಪ್ರಕರಣಗಳಿಗೆ ಪರಿಹಾರ ನೀಡಲಾಗಿದ್ದು, 3 ಪ್ರಕರಣಗಳಿಗೆ ನಡವಳಿ ಮಾಡಲಾಗಿದ್ದು, ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕರ ಕಛೇರಿಗೆ ಕಳುಹಿಸಲಾತರುತ್ತದೆ ಎಂದು ಸಹಾಯಕ ಆಯುಕ್ತರು ಸಭೆಗೆ ತಿಳಿಸಿದರು. ಕೃಷಿ ಇಲಾಖೆ ಜಂಟಿ ಕೃಷಿ ನಿರ್ದೇಶಕರು ಮಾತನಾಡಿ ಬಂದ ನಡವಳಿಗಳನ್ನು ನಮ್ಮ ಇಲಾಖೆ ಕೇಂದ್ರ ಕಛೇರಿಗೆ ಕಳುಹಿಸಲಾಗಿದ್ದು, ಕೇಂದ್ರ ಕ್ಚಛೆರಿಯಿಚಿದ ಅನುದಾನ ಬಂದ ಮೇಲೆ ಕೆ2 ನಲ್ಲಿ ಬಿಲ್ಲು ಮಾಡಬೇಕಾಗಿದ್ದು, 1 ಮತ್ತು 2ನೇ ಅನುದಾನ ಬಿಡುಗಡೆಗೆ ಲಿಂಕ್ ಆದಮೇಲೆ ಕೂಡಲೇ ಆಧ್ಯತೆಯ ಮೇರೆಗೆ ಪರಿಹಾರ ನೀಡಲಾಗುವುದು ಎಂದು ಸಭೆಗೆ ತಿಳಿಸಿದರು. ಕೂಡಲೇ ರೈತ ಆತ್ಮಹತ್ಯೆ ಪ್ರಕರಣಗಳಿಗೆ ಪರಿಹಾರ ವಿತರಿಸಲು ಸೂಕ್ತ ಕ್ರಮ ಜರುಗಿಸಲು ಮಾನ್ಯ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು ಸೂಚಿಸಿದರು.

ಸಾಲಮನ್ನ : ಲೀಡ್ ಬ್ಯಾಂಕ್ ಮ್ಯಾನೇಜರ್ ಮಾತನಾಡಿ ರೂ.258.92 ಕೋಟಿ ಅನುದಾನ ಬಂದಿದ್ದು, 90% ರೈತರಿಗೆ ಸಾಲಮನ್ನ ಮಾಡಲಾಗಿರುತ್ತದೆ. ಇನ್ನೂ ಬಾಕಿ ಉಳಿದೆ 10 ಸಾವಿರ ಜನರಿಗೆ ರೇಷನ್ ಕಾರ್ಡ್ ತೊಂದರೆಯಿಂದ ಅನುದಾನ ಬಿಡುಗಡೆಯಾಗಿಲ್ಲ ಎಂದು ಸಭೆಗೆ ತಿಳಿಸಿದರು.

ಸಹಕಾರ ಇಲಾಖೆ : ಅಧಿಕಾರಿಗಳು ಮಾತನಾಡಿ ರೂ.80.46 ಕೋಟಿ ಅನುದಾನ ಬಿಡುಗಡೆಯಾಗಿದ್ದು, ಇನ್ನು ರೂ.23.79ಕೋಟಿ ಬಿಡುಗಡೆಯಾಗಬೇಕಾಗಿದೆ ಎಂದು ಸಭೆಗೆ ತಿಳಿಸಿದರು.

ಪಿಂಚಣಿ ಇಲಾಖೆ : ಮಾನ್ಯ ಅಪರ ಜಿಲ್ಲಾಧಿಕಾರಿಗಳು ಮಾತನಾಡುತ್ತ, ಜಿಲ್ಲೆಯಲ್ಲಿ ವಿವಿಧ ಪಿಂಚಣಿಯ ಆಧಾರ ಸೀಡಿಂಗ್ 1.81ಲಕ್ಷಗಳ ಪೈಕಿ 1.43 ಲಕ್ಷ ಸಿಡಿಂಗ್ ಮಾಡಲಾಗಿದ್ದು, 38 ಸಾವಿರ ಸಿಡಿಂಗ್ ಕಾರ್ಯ ಪ್ರಗತಿಯಲ್ಲಿದೆ. ಜಿಲ್ಲೆಯಲ್ಲಿ 3036 ತಾತ್ಕಾಲಿಕ ಸಸ್ಪೆಂಡ್ ಪ್ರಕರಣಗಳಲ್ಲಿ ಮನೆ ಮನೆಗೆ ಹೋಗಿ ಅರ್ಹ ಫಲಾನುಭವಿಗಳನ್ನು ಪರಿಶಿಲಿಸಿ ಕ್ರಮ ಜರುಗಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಪೋಡಿ ಮುಕ್ತಾ ಅದಾಲತ್ : ಅಧಿಕಾರಿಗಳು ಮಾತನಾಡಿ ಗುರಿ ಮತ್ತು ಸಾಧನೆಗಳನ್ನು ವಿವರಿಸುತ್ತಾ, ಜಿಲ್ಲೆಯಲ್ಲಿ ಪೋಡಿ ಮುಕ್ತ ಅದಾಲತ ಪ್ರಗತಿ ಉತ್ತಮವಾಗಿದೆಂದು ಸಭೆಗೆ ತಿಳಿಸಿದರು.

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ:

ನರೇಗಾ : ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು ಮಾತನಾಡಿ ಜಿಲ್ಲೆಗೆ 51.00ಲಕ್ಷ ಮಾನವ ದಿನಗಳ ಗುರಿಯನ್ನು ನಿಗದಿಪಡಿಸಲಾಗಿದೆ. ಅದರಂತೆ ಸೆಪ್ಟಂಬರ-2019ರ ಅಂತ್ಯದವರೆಗೆ 35.25ಲಕ್ಷ ಮಾನವ ದಿನಗಳನ್ನು ಸೃಜನೆ ಮಾಡಲಾಗಿರುತ್ತದೆ. ಶೇ69.12% ಗುರಿ ಸಾಧಿಸಲಾಗಿದೆ. ಈಗಾಗಲೇ ಆರ್ಥಿಕ ಗುರಿ ರೂ.224.34ಲಕ್ಷಗಳ ಪೈಕಿ ರೂ:157.70ಲಕ್ಷಗಳ ಗುರಿ ಸಾಧಿಸಲಾಗಿದೆ. ಶೆ70.29% ಸಾಧನೆ ಮಡಲಾಗಿರುತ್ತದೆ. ಮತ್ತು ಎರಡುವರೆ ತಿಂಗಳಿಂದ ರಾಜ್ಯ ಸರ್ಕಾರ ಮತ್ತು ಕೇಂದ್ರ ಸರ್ಕಾರದಿಂದ ಇಲ್ಲಿಯವರೆಗೆ ಕೂಲಿ ಅನುದಾನ ಬಿಡುಗಡೆಯಾಗಿರುವುದಿಲ್ಲ. ಸೆಪ್ಟಂಬರ್ 23 ರಂದು 200 ಕೋಟಿ ಬಿಡುಗಡೆಯಾಗಿದೆ.

ಸ್ವಚ್ಛ ಭಾರತ: ಎಲ್.ಓ.ಬಿ ವೈಯಕ್ತಿಕ ಶೌಚಾಲಯಗಳ ಒಟ್ಟು ಗುರಿ 7566 ಇದ್ದು, ಪ್ರಸ್ತುತ 3871 ಶೌಚಾಲಯಗಳು ಪೂರ್ಣಗೊಂಡಿದ್ದು, ಇನ್ನು ಬಾಕಿ ಉಳಿದ ಶೌಚಾಲಯಗಳನ್ನು ಈ ತಿಂಗಳ ಅಂತ್ಯದೊಳಗೆ ಪೂರ್ಣಗೊಳಿಸಲಾಗುವುದು. 2019-20ನೇ ಸಾಲಿಗೆ ಗಂಗಾವತಿ ತಾಲೂಕಿನ 6 ಗ್ರಾಮ ಪಂಚಾಯತಿಗಳಿಗೆ ಘನ ತ್ಯಾಜ್ಯ ವಿಲೇವಾರಿ ಅನುಷ್ಠಾನಕ್ಕಾಗಿ ಮಂಜೂರಿ ದೊರೆತಿದ್ದು, ಅನುದಾನ ಬಿಡುಗಡೆಯಾಗಿದ್ದು ಕರ್ಯಕ್ರಮ ಅನುಷ್ಟಾನಕ್ಕಾಗಿ ಕ್ರಮವಹಿಸಲಾಗಿರುತ್ತದೆ. ಇನ್ನುಳಿದ 14 ಗ್ರಾಮ ಪಂಚಾಯತಿಗಳಿಗೆ ಸ್ಥಳ ಲಭ್ಯವಿದ್ದು, ಗ್ರಾಮ ಪಂಚಾಯತಿಗಳಿಗೆ ಸ್ಥಳ ಹಸ್ತಾಂತರ ಪ್ರಕ್ರಿಯೆ ಜಾರಿಯಲ್ಲಿದ್ದು, ಕೂಡಲೇ ಅನುಷ್ಠಾನಗೊಳಿಸುವುದಾಗಿ ತಿಳಿಸಿದರು.

ನಮ್ಮ ಗ್ರಾಮ ನಮ್ಮ ಯೋಜನೆ : 14ನೇ ಹಣಕಾಸು ಆಯೋಗದಡಿಯಲ್ಲಿ ಸಾಮಾನ್ಯ ಮೂಲ ಅನುದಾನ 1 & 2 ಹಂತಗಳಲ್ಲಿ ಬಿಡುಗಡೆಯಾಗಿರುತ್ತದೆ. ಬಿಡುಗಡೆಯಾದ ಅನುದಾನಕ್ಕೆ ಕ್ರಿಯಾ ಯೋಜನೆ ತಯಾರಿಸಿ ಅನುಮೋದನೆ ನೀಡಿ ಕಾಮಗಾರಿಗಳನ್ನು ಅನುಷ್ಟಾನಗೊಳಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು.

ಶಿಕ್ಷಣ ಇಲಾಖೆ : ಶಿಕ್ಷಣ ಇಲಾಖೆಯ ಬಿಓ ಮಾತನಾಡಿ 2018ರ ಬ್ಲಾಕ್ ಮಟ್ಟದ ಸರ್ವೇ ಪ್ರಕಾರ ಜಿಲ್ಲೆಯಲ್ಲಿ 1017 ಮಕ್ಕಳು ಶಾಲೆಯಿಂದ ಹೊರಗೆ ಉಳಿದಿದ್ದು, ಇದುವರೆಗೂ 55 ಮಕ್ಕಳನ್ನು ಶಾಲೆಗೆ ಸೇರಿಸಲಾಗಿದೆ ಉಳಿದವರು ವಯಸ್ಸು ಮೀರದವರು. ಅಂಗಲವಿಕಲರ ಮಕ್ಕಳನ್ನು ಗುರುತಿಸಲಾಗುತ್ತಿದೆ ಎಂದು ಸಭೆಗೆ ತಿಳಿಸಿದರು. ಶೈಕ್ಷಣ ವರ್ಷ ಮುಗಿಯಲು ಬಂದಿದ್ದು, ಈವರೆಗೂ 55 ಮಕ್ಕಳನ್ನು ಶಾಲೆಗೆ ಸೇರಿಸಿದ್ದೀರಿ ಎಂದು ಮಾನ್ಯ ಕಾರ್ಯದರ್ಶಿಗಳು ಪ್ರಶ್ನಿಸಿದರು? ಅಂಗವಿಕಲರು ಶೇ.10ರಷ್ಟು ಇರಬಹುದು ಉಳಿದ ಮಕ್ಕಳನ್ನು ಯವಾಗ ಸೇರಿಸಿವಿರಿ ತಕ್ಷಣ ಕ್ರಮ ಕೈಗೊಂಡು ವರದಿ ಸಲ್ಲಿಸಲು ಕಾರ್ಯದರ್ಶಿಗಳು ಅಧಿಕಾರಿಗಳಿಗೆ ಸೂಚಿಸಿದರು. ಅಧಿಕಾರಿಗಳು ಮಾತನಾಡುತ್ತಾ, ವಯೋಮಿತಿ ಮ್ಮಿರಿದ ಇತ್ಯಾದಿ ಮಕ್ಕಳು ಗೃಹ ಆಧಾರಿತ ಶಿಕ್ಷಣ ಕ್ಕೆ ಒಳಪಡುವ ಮಕ್ಕಳು ಇತ್ಯಾದಿ ಬೇಗ ಗುರುತಿಸಿ ಅರ್ಹ ಮಕ್ಕಳನ್ನು ಬೇಗ ಮುಖ್ಯ ವಾಹಿನಿಗೆ ತರಲು ಬ್ಲಾಕ್ ಹಂತದ ಅಧಿಕಾರಿಗಳಿಗೆ ಪತ್ರ ಮೂಲಕ ತಿಳಿಸಿ ಬೇಗ ಮಾಡುವ್ವದಾಗಿ ತಿಳಿಸಿದರು. ಪಠ್ಯ ಪುಸ್ತಕಗಳು ಎಲ್ಲಾರಿಗೆ ಪೂರೈಕೆಯಾಗಿವೆ ಎಂದು ಅಧಿಕಾರಿಗಳಿಗೆ ಸಭಾಧ್ಯಕ್ಷರು ಕೇಳಲಾಗಿ, ಅಧಿಕಾರಿಗಳು ಮಾತನಾಡುತ್ತಾ, ಎಲ್ಲಾ ವಿಧ್ಯಾರ್ಥಿಗಳಿಗೆ ಪಠ್ಯ ಪುಸ್ತಕಗಳನ್ನು ವಿತರಿಸಲಾಗಿರುತ್ತದೆ. ಯಾವುದೇ ಕೊರತೆ ಇರುವುದಿಲ್ಲವೆಂದು ಹಾಗೂ ಉಪಹಾರ, ಕ್ಷೀರಭಾಗ್ಯ ಕೊಡುತ್ತಿದ್ದೇವೆ ಎಂದು ಸಭೆಗೆ ತಿಳಿಸಿದರು. ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡುತ್ತಾ, ಶಾಲಾ ಆವರಣಗಳಲ್ಲಿ ಅಂಗನವಾಡಿ ಕೇಂದ್ರಗಳ ಕಟ್ಟಡ ಕಟ್ಟಲು ನಿವೇಶನವನ್ನು ನೀಡಲು ಅಧಿಕಾರಿಗಳಿಗೆ ಅಗತ್ಯ ಕ್ರಮ ಕೈಗೊಳ್ಳಲು ತಿಳಿಸಿದರು.

ಆರೋಗ್ಯ ಇಲಾಖೆ : ಅಧಿಕಾರಿಗಳು ಮಾತನಾಡಿ ರಾಷ್ಟ್ರೀಯ ಆರೋಗ್ಯ ಅಭಿಯಾನದಲ್ಲಿ ಜಿಲ್ಲೆಗೆ ಗ್ರಾಮೀಣ ಮತ್ತು ನಗರಗಳಿಗೆ 2018-19ನೇ ಸಾಲಿಗೆ ರೂ.3839.10ಲಕ್ಷ ಮತ್ತು 2019-20ನೇ ಸಾಲಿಗೆ ರೂ.3855.00ಲಕ್ಷಗಳ ಅನುದಾನ ನಿಗದಿಪಡಿಸಲಾಗಿದ್ದು, 2018-19ನೇ ಸಾಲಿಗೆ ಶೇ77% ಮತ್ತು 2019.20ನೇ ಸಾಲಿಗೆ ಶೇ32% ರಷ್ಟು ಅನುದಾನ ಖರ್ಚು ಮಾಡಲಾಗಿರುತ್ತದೆ. ತಾಯಂದಿರ ಮರಣವು ಜಿಲ್ಲೆಯಲ್ಲಿ 2019-20ನೇ ಸಾಲಿಗೆ 78.8 ಎಂ.ಎಂ.ಆರ್ ದರ ಇರುತ್ತದೆ. ಶಿಶು ಮರಣವು 11.5 ಐ.ಎಂ.ಆರ್. ಇರುತ್ತದೆ. ಮಾನ್ಯ ಜಿಲ್ಲಾಧಿಕಾರಿಗಳು ಮಾತನಾಡಿ ಗಂಗಾವತಿ ಆಸ್ಪತ್ರೆಗೆ ನ್ಯಾಷನಲ್ ಪ್ರಶಸ್ತಿ ಬಂದಿದೆ ಎಂದು ಸಭೆಗೆ ತಿಳಿಸಿದರು.

**ಆಯುಷ್ಮಮಾನ ಯೋಜನೆ:** ಆರೋಗ್ಯಾಧಿಕಾರಿಗಳು ಮಾತನಾಡಿ, ಕೊಪ್ಪಳ ಜಿಲ್ಲೆಯಲ್ಲಿ ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆಯು ದಿನಾಂಕ 30-10-2018 ರಿಂದ ಜಿಲ್ಲಾ ಆಸ್ಪತ್ರೆ, ಎಲ್ಲಾ ತಾಲೂಕು ಆಸ್ಪತ್ರೆಗಳಲ್ಲಿ ಹಾಗೂ 7 ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಅನುಷ್ಠಾನಗೊಳಿಸಲಾಗಿದೆ. ಆಯುಷ್ಮಾನ್ ಭಾರತ್ ಆರೋಗ್ಯ ಕರ್ನಾಟಕ ಯೋಜನೆ ಅಡಿಯಲ್ಲಿ ಇಲ್ಲಿಯವರೆಗೆ ಜಿಲ್ಲೆಯ ಎಲ್ಲಾ ಸರಕಾರಿ ಆಸ್ಪತೆಗಳು ಸೇರಿಸಿ ಒಟ್ಟು 5356 ಒಳ ರೋಗಿಗಳಿಗೆ ಯೋಜನೆ ಅಡಿಯಲ್ಲಿ ಚಿಕಿತ್ಸೆ ನೀಡಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಪ್ರೀ ಆಥರೈಜೇಶನಾ ಸಲ್ಲಿಸಲಾಗಿದ. ಇದರ ಪೈಕಿ ಇಲ್ಲಿಯವರೆಗೆ ಒಟ್ಟು 3317 ಕ್ಲೈಮ್‌ಗಳ 130.44 ಲಕ್ಷಗಳ ಮೊತ್ತದ ಕ್ಲೈಮ್‌ಗಳನ್ನು ಅನುಮೋದನೆಗಾಗಿ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ಗೆ ಸಲ್ಲಿಸಲಾಗಿದೆ, ಇಲ್ಲಿಯವರೆಗೆ ಕೊಪ್ಪಳ ಸರಕಾರಿ ಆಸ್ಪತ್ರೆಗಳಿಗೆ ಒಟ್ಟು 130.44 ಲಕ್ಷಗಳ ಮೊತ್ತವು ಆಸ್ಪತ್ರೆಗಳ ಎ ಆರ್ ಎಸ್ ಖಾತೆಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಜಮಾ ಮಾಡಲಾಗಿದೆ. ಕೊಪ್ಪಳ ಜಿಲ್ಲೆಯಲ್ಲಿ ಸಾರ್ವಜನಿಕರಿಗೆ ಇಲ್ಲಿಯವರೆಗೆ 6468 ಆರೋಗ್ಯ ಕಾರ್ಡಗಳನ್ನು ಜಿಲ್ಲಾ ಆಸ್ಪತ್ರೆಯಲ್ಲಿ ನೀಡಲಾಗಿದೆ. ಮುಂದಿನ ದಿನಗಳಲ್ಲಿ ಟೆಂಡರ್ ಪ್ರಕ್ರಿಯೆ ಪೂರ್ಣಗೊಂಡ ನಂತರ ತಾಲೂಕು ಹಾಗೂ ಸಮುದಾಯ ಆರೋಗ್ಯ ಕೇಂದ್ರಗಳಲ್ಲಿ ಆರೋಗ್ಯ ಕಾರ್ಡಗಳನ್ನು ವಿತರಿಸಲಾಗುವದು. ಒಟ್ಟು 11 ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಆಯುಷ್ಮಾನ್ ಭಾರತ್-ಆರೋಗ್ಯ ಕರ್ನಾಟಕ ಕಾರ್ಯಕ್ರಮದಡಿಯಲ್ಲಿ ನೋಂದಣಿಮಾಡಲಾಗಿದೆ ಎಂದು ಸಭೆಗೆ ತಿಳಿಸಿದರು.

**ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ** : ಅಧಿಕಾರಿ ಮಾತನಾಡಿ **ಪ್ರಧಾನ ಮಂತ್ರಿ ಮಾತೃವಂದನಾ ಯೋಜನೆಯಡಿ** 2018-2019ನೇ ಸಾಲಿನಲ್ಲಿ ಒಟ್ಟು-12.565 ಫಲಾನುಭವಿಗಳಿಗೆ 3.80.52.000 ಸಾವಿರ ರೂಪಾಯಿಗಳ ಸಹಾಯಧನವನ್ನ ನೇರ ನಗದು ಮೂಲಕ ಫಲಾನುಭವಿಗಳಿಗೆ ವಿತರಿಸಲಾಗಿರುತ್ತದೆ. 2019-2020 ಸಾಲಿನಲ್ಲಿ 3646 ಫಲಾನುಭವಿಗಳಿಗೆ 2,63,54,000/- ನೇರು ನಗದು ಮೂಲಕ ವಿತರಿಸಲಾಗಿದೆ. ಯೋಜನೆ ಆರಂಭದಿಂದ ಸೆಪ್ಟಂಬರ್-2019ರ ಅಂತ್ಯಕ್ಕೆ ಒಟ್ಟಾರೆ 16218 ಫಲಾನುಭವಿಗಳಗೆ ಒಟ್ಟಾರೆ ರೂ.6,44,10,000/-ಗಳ ಸಹಾಯ ಧನವನ್ನು ವಿತರಿಸಲಾಗಿದೆ.

**ಮಾತೃಶ್ರೀ ಯೋಜನೆ:-** ಮಾತೃಶ್ರೀ ಯೋಜನೆಯಡಿ ಸೆಪ್ಟಂಬರ್-2019 ಅಂತ್ಯಕ್ಕೆ 5279 ಪ್ರಸವ ಪೂರ್ವ ಅರ್ಜಿಗಳು ಹಾಗೂ 518 ಪ್ರಸವ ನಂತರದ ಅರ್ಜಿಗಳು ಸೇರಿದಂತೆ ಒಟ್ಟು:5797 ಅರ್ಜಿಗಳಿಗೆ ಮಂಜೂರಾತಿ ನೀಡಲಾಗಿರುತ್ತದೆ.

**ಮಾತೃಪೂರ್ಣ ಯೋಜನೆ:-** ಅಂಗನವಾಡಿ ಕೇಂದ್ರಗಳಲ್ಲಿ ದಾಖಲಾಗಿರು ಗರ್ಭಿಣಿ, ಬಾಣಂತಿಯರಿಗೆ ಮದ್ಯಾನದ ಪೌಷ್ಠಿಕ ಬಿಸಿಯೂಟ ನೀಡುವ ಕಾರ್ಯಕ್ರಮದಲ್ಲಿ ಸೆಪ್ಟಂಬರ್-2019ರ ಮಾಹೆಯಲ್ಲಿ 13805 ಗರ್ಭಿಣಿ ಹಾಗೂ 12844 ಬಾಣಂತಿಯರು ಯೋಜನೆಯ ಪ್ರಯೋಜನ ಪಡೆದಿರುತ್ತಾರೆ.

ಜಿಲ್ಲೆಗೆ ಒಟ್ಟು 1850 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 1800 ಅಂಗನವಾಡಿ ಸಹಾಯಕೀಯರ ಹುದ್ದೆಗಳಿಗೆ ಮಂಜೂರೂ ಆಗಿರುತ್ತವೆ. ಸೆಪ್ಟಂಬರ್-2019ರ ಅಂತ್ಯಕ್ಕೆ 55 ಅಂಗನವಾಡಿ ಕಾರ್ಯಕರ್ತರು ಹಾಗೂ100 ಅಂಗನವಾಡಿ ಸಹಾಯಕರ ಹುದ್ದೆಗಳು ಖಾಲಿ ಇದ್ದು ಈ ಪೈಕಿ 22 ಅಂಗನವಾಡಿ ಕಾರ್ಯಕರ್ತೆಯರ ಹಾಗೂ 85 ಅಂಗನವಾಡಿ ಸಹಾಯಕೀಯರ ಹದ್ದೆಗಳಿಗೆ ನೇಮಕಾತಿ ಮಾಡಿಕೊಳ್ಳುವ ಪ್ರಕ್ರೀಯೆಯ ಕುರಿತು ಎರಡು ಬಾರಿ ಸಮಿತಿ ಸಭೆಗಳನ್ನು ನಡೆಸಲಾಗಿದ್ದು, ತಾತ್ಕಾಲಿಕ ಪಟ್ಟಿ ಪ್ರಕಟಿಸುವ ಹಂತದಲ್ಲಿದೆ. ಜಿಲ್ಲೆಯಲ್ಲಿ 1850 ಅಂಗನವಾಡಿ ಕೇಂದ್ರಗಳಿದ್ದು, 1.38,989 ಫಲಾನುಭವಿಗಳಿಗೆ 6 ತಿಂಗಳಿಂದ 6 ವರ್ಷದೊಳಗಿನ ಮಕ್ಕಳಿಗೆ ಸಮರ್ಪಕವಾಗಿ ಪೂರಕ ಪೌಷ್ಟಿಕ ಆಹಾರ ವಿತರಣೆ ಮಾಡಲಾಗುತ್ತಿದೆ. ಕ್ಷೀರ ಭಾಗ್ಯ ಯೋಜನೆಯಡಿ ವಾರದ 5 ದಿನ ಹಾಲು ವಿತರಿಸಲಾಗುತ್ತಿದೆ. ಸೃಷ್ಟಿ ಯೋಜನೆಯಡಿ ಅಪೌಷ್ಟಿಕ ಮಕ್ಕಳಿಗೆ ಮೊಟ್ಟೆ ವಿತರಿಸಲಾಗುತ್ತಿದೆ.

ಜಿಲ್ಲೆಯ 88 ಗಣಿಬಾಧಿತ ಪ್ರದೇಶದ ಅಪೌಷ್ಟಿಕ ಮಕ್ಕಳಿಗೆ ಜಿಲ್ಲಾ ಖನಿಜ ನಿಧಿ ಅನುದಾನದಲ್ಲಿ ಹೆಚ್ಚುವರಿ ಪೂರಕ ಪೌಷ್ಟಿಕ ಆಹಾರವಾಗಿ ಶನಿವಾರ 1ಮೊಟ್ಟೆ ಹಾಗೂ ಸೋಮವಾರ ಮತ್ತು ಶನಿವಾರ 250ಎಮ್.ಎಲ್. ಹಾಲು ನೀಡಲಾಗುತ್ತದೆ.

ಇದರಿಂದ ಮಕ್ಕಳಲ್ಲಿ ಸುಧಾರಣೆ ಕಂಡು ಬಂದಿದ್ದು, ಫೆಬ್ರುವರಿ-2019ರಲ್ಲಿ 1516ಇದ್ದ ಅಪೌಷ್ಟಿಕ ಮಕ್ಕಳ ಸಂಖ್ಯೆ ಸೆಪ್ಟಂಬರ್-2019ಕ್ಕೆ 990ಕ್ಕೆ ಇಳಿಕೆಯಾಗಿರುತ್ತದೆ. 526 ಮಕ್ಕಳು ಸುಧಾರಣೆಯಾಗಿರುತ್ತಾರೆ. ಅದೇರೀತಿ ಸೆಪ್ಟಂಬರ್-2019ರಿಂದ ಗಣಿ ಬಾಧಿತ ಪ್ರದೇಶದ 655 ಗರ್ಭಿಣಿಯರಿಗೆ ಹಾಗೂ 564 ಬಾಣಂತಿಯರಿಗೆ ಹೆಚ್ಚುವರೆ ಪೂರಕ ಪೌಷ್ಟಿಕ ಆಹಾರವಾಗಿ ಗರ್ಭಿಣಿಯರಿಗೆ ಮೊಳಕೆ ಭರಿಸಿದ ಕಾಳು, ಉತ್ತತ್ತಿ ತುಪ್ಪ ಹಾಗೂ ಬಾಣಂತಿಯರಿಗೆ ಅಳವಿ ಉಂಡಿ ನೀಡಲಾಗುತ್ತದೆ ಎಂದು ಸಭೆಗೆ ತಿಳಿಸಿದರು.

<u>ಕೌಶಲ್ಯ ಅಭಿವೃದ್ಧಿ ಇಲಾಖೆ</u> : ಕೊಪ್ಪಳ ಜಿಲ್ಲೆಯಲ್ಲಿ ನೊಂದಣಿ ಕಾರ್ಯಕ್ರಮ ಪ್ರಕ್ರಿಯೆ ನಡೆದಿದೆ 23610 ಫಲಾನುಭವಿಗಳು ತಂತ್ರಾಂಶದಲ್ಲಿ ಎಲ್ಲಾ ವರ್ಗದ ಜನರು ನೊಂದಣಿ ಮಾಡಿರುತ್ತಾರೆ. ಮಾನ್ಯ ಜಿಲ್ಲಾಧಿಕಾರಿಗಳು ನೀಡಿರುವ 2019-20ನೇ ಸಾಲಿನಲ್ಲಿ 480 ಗುರಿಯಾಗಿರುತ್ತದೆ. ಅದರಲ್ಲಿ 5 ತರಬೇತಿ ಕೇಂದ್ರಗಳು ಆಗಿರುತ್ತವೆ. 3 ತರಬೇತಿ ಪ್ರವೈದರ್ಸ ಆಗಿರುತ್ತಾರೆ. ಸಂಬಂಧಪಟ್ಟ ಕ್ರಿಯಾ ಯೋಜನೆಯುನ್ನು ತಯಾರಿಸಿ ದಿನಾಂಕ:29.08.2019 ರಂದು ಮಾನ್ಯ ನಿರ್ದೇಶಕರು, ಕೌಶಲ್ಯ ಮಿಷನ್ ಬೆಂಗಳೂರು ಇವರಿಗೆ ಸಲ್ಲಿಸಲಾಗಿರುತ್ತದೆ. ನೀಡಿರುವ ಭೌತಿಕ ಗುರಿಯಲ್ಲಿ ವಿವಿಧ ಭೌತಿಕ ಗುರಿಗಳನ್ನು ಹಂಚಿಕೆ ಮಾಡಿ ತಂತ್ರಾಂಶದಲ್ಲಿ ಕಾಲೋಚಿತಗೊಳಿಸಲಾತರುತ್ತದೆ. ರಾಜ್ಯಕ್ಕೆ ನೀಡಿರುವ 2 ಬ್ಯಾಚ್ ತರಬೇತಿಗಳು ಪೂರ್ಣಗೊಂಡಿದ್ದು, 2ನೇ ಕಂತಿನಲ್ಲಿ ಅನುದಾನ ಬಿಡುಗಡೆಯಾಗಿಲ್ಲ ಎಂದು ಹಾಗೂ 2 ಬ್ಯಾಚ್ ತರಬೇತಿ ಪ್ರಾರಂಭಗೊಂಡಿವೆ ಎಂದು ಸಭೆಗೆ ತಿಳಿಸಿದರು.
<u>ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ</u> : ಅಧಿಕಾರಿಗಳು ಮಾತನಾಡಿ ಗುರಿ ಮತ್ತು ಸಾಧನೆಗಳನ್ನು ವಿವರಿಸುತ್ತಾ ಈ ವರ್ಷದಲ್ಲಿ ಕೊಪ್ಪಳ ತಾಲ್ಲೂಕಿನ ಬಸಾಪುರ ಗ್ರಾಮದಲ್ಲಿ 104 ಎಕರೆ ವಿಸ್ತೀರ್ಣಣ ಕೈಗಾರಿಕಾ ವಸಾಹತ್ತು ಸ್ಥಾಪನೆಯಾಗಿರುತ್ತದೆ. ಕುಕನೂರು ತಾಲೂಕಿನಲ್ಲಿ 272 ಎಕರೆ ಭೂಮಿಯನ್ನು ಟಾಯ್ಸ್ ಕ್ಲಸ್ಟರ ಸ್ಥಾಪನೆಗಾಗಿ ಏಕಾಸ್ ಕಂಪನಿಯವರಿಗೆ ಸರ್ಕಾರದಿಂದ ಅನುಮ್ಮತಿ ದೊರೆತಿದೆ ಎಂದು ಸಭೆಯ ಗಮನಕ್ಕೆ ತಂದರು.

<u>ನಗರಾಭಿವೃದ್ಧಿ ಇಲಾಖೆ:</u> ಅಧಿಕಾರಿಗಳು ಮಾತಾನಾಡಿ ಇಂದಿರಾ ಕ್ಯಾಂಟಿನ್ 2 ಪೂರ್ಣಗೊಂಡಿವೆ. ಕೊಪ್ಪಳ ನಗರಸಭೆ ಹಾಗೂ ಯಲಬುರ್ಗಾ ಪಟ್ಟಣ ಪಂಚಾಯಿತಿ ವ್ಯಾಪ್ತಿಯಲ್ಲಿ ಈಗಾಗಲೇ ಇಂದಿರಾ ಕ್ಯಾಂಟಿನ್ ಆಹಾರ ಸರಬರಾಜುನ್ನು ಪ್ರಾರಂಭಿಸಲಾಗಿದೆ. ಗಂಗಾವತಿಯಲ್ಲಿ 1 ಇಂದಿರಾ ಕ್ಯಾಂಟಿನ್ ಕಟ್ಟಡ ನಿರ್ಮಾಣ ಕಾರ್ಯವು ಮುಕ್ತಾಯಗೊಂಡಿರುತ್ತದೆ. ಅಡುಗೆ ಕೋಣೆಗೆ ಮೂಲಭೂತ ಸೌಕರ್ಯವನ್ನು ಒದಗಿಸುವ ಕಾರ್ಯವು ಮುಕ್ತಾಯಗೊಂಡಿದ್ದು, ಶೀಘ್ರದಲ್ಲಿ ಪ್ರಾರಂಭಿಸಲಾಗುವುದು ಹಾಗೂ ಇನ್ನೊಂದು ಕ್ಯಾಂಟಿನ್ ಕ್ಟಟ್ಟಡ ಸ್ಥಳವನು ಗುರುತಿಸಬೇಕಾಗಿದೆ. ಕುಷ್ಟಗಿ ಪ್ಮರಸಭೆ ವ್ಯಾಪ್ತಿಯಲ್ಲಿ ಇಂದಿರಾ ಕ್ಯಾಂಟಿನ್ ಕ್ಟಟ್ಟಡ ನಿರ್ಮಾಣಕ್ಕಾಗಿ .ಕೆ.ಎಸ್.ಆರ್.ಟಿ.ಸಿ ಬಸ್ಸ್ ನಿಲ್ದಾಣದ ಸ್ಥಳದಲ್ಲಿ ನಿವೇಶನವನ್ನು ಕಾಯ್ದಿರಿಸಿ ಅಧಿಕೃತ ಜ್ಞಾಪನವನ್ನು ಹೆರಡಿಸಲಾಗಿದ್ದು ಕ್ಟಟ್ಟಡ ನಿರ್ಮಾಣ ಕಾರ್ಯವನ್ನು ಪ್ರಾರಂಭಿಸಬೇಕಾಗಿದೆ.

**ನಗರೋತ್ಥಾನ ಹಂತ-2**ರಲ್ಲಿ ಕೊಪ್ಪಳ ಜಿಲ್ಲೆಯ 4 ನಗರ ಸ್ಥಳೀಯ ಸಂಸ್ಥೆಗಳಲ್ಲಿ 55 ಕಾಮಗಾರಿಗಳು ಮಂಜೂರಾದಂತೆ, ಸದರಿ ಕಾಮಗಾರಿಗಳನ್ನು ಮುಕ್ತಾಯಗೊಳಿಸಿ ಕಾಮಗಾರಿಗಳ ಮೊತ್ತ ಹಾಗೂ ಅನುಷ್ಠಾನಗೊಳಿಸಿದ ಕಾಮಗಾರಿಗಳ ಉಳಿತಾಯ ಮೊತ್ತ ಹಾಗೂ ಡಿಸ್ಕೋಪ್ ಮೊತ್ತ ರೂ.2179.00 ಲಕ್ಷಗಳಿಗೆ 19 ಕಾಮಗಾರಿಗಳ ಕ್ರಿಯಾ ಯೋಜನೆ ಅನುಮೋದನೆ ಪಡೆದು ಪ್ರಾರಂಭಿಸಲಾಗಿದ್ದು, ಪ್ರಸಕ್ತ 4 ಕಾಮಗಾರಿಗಳು ಮುಕ್ತಾಯಗೊಂಡಿದ್ದು, 13 ಕಾಮಗಾರಿಗಳು ಪ್ರಗತಿಯಲ್ಲಿದ್ದು, 2 ಕಾಮಗಾರಿಗಳು ಟೆಂಡರ ಕರೆಯಬೇಕಾಗಿರುತ್ತದೆ.

ನಗರೋತ್ಥಾನ ಹಂತ-3 ಜಿಲ್ಲೆಗೆ 109.50 ಕೋಟಿ ಅನುದಾನ ಹಂಚಿಕೆಯಾದಂತೆ ಶೇ85% ಕ್ರಿಯಾ ಅನುಮೋದನೆ ನೀಡಿದಂತೆ 124 ಕಾಮಗಾರಿಗಳಿಗೆ ಟೆಂಡರ ಕರೆದು ಈಗಾಗಲೇ 32 ಕಾಮಗಾರಿಗಳನ್ನು ಪೂರ್ಣಗೊಳಿಸಿ ರೂ.44.46ಕೋಟಿ ಅನುದಾನ ಬಳಕೆ ಮಾಡಿಕೊಳ್ಳಲಾಗಿದ್ದು, ಬಾಕಿ ಉಳಿದ ಕಾಮಗಾರಿಗಳನ್ನು ಶೀಘ್ರದಲ್ಲಿ ಪೂರ್ಣಗೊಳಿಸಲಾಗುವುದು.

ಎಸ್.ಎಫ್.ಸಿ. ಕುಡಿಯುವ ನೀರು:- 2015-16 ರಿಂದ 2019-20 ನೇ ಸಾಲಿನ ವರೆಗೆ 11.51ಕೋಟಿ ಹಂಚಿಕೆಯಾಗಿದ್ದು, ಸದರಿ ಅನುದಾನಕ್ಕೆ ಒಟ್ಟು 362 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, 295 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. 43 ಕಾಮಗಾರಿಗಳು ಪ್ರಗತಿಯಲ್ಲಿದ್ದು 24 ಕಾಮಗಾರಿಗಳು ಪ್ರಾರಂಭಿಸಿರುವುದಿಲ್ಲ. ಶೀಘ್ರದಲ್ಲಿ ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಎಸ್.ಎಫ್.ಸಿ. **ವಿಶೇಷ ಅನುದಾನ**:- 2015-16, 2016-17 ಮತ್ತು 2017-18ನೇ ಸಾಲಿನ ವರೆಗೆ 22.00ಕೋಟಿ ಹಂಚಿಕೆಯಾಗಿದ್ದು, ಸದರಿ ಅನುದಾನಕ್ಕೆ ಒಟ್ಟು 57 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, 47 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. 10 ಕಾಮಗಾರಿಗಳು ಪ್ರಾರಂಭಿಸಿರುವುದಿಲ್ಲ. ಶೀಘ್ರದಲ್ಲಿ ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

**14ನೇ ಹಣಕಾಸು ಯೋಜನೆ**:- 2015-16 ರಿಂದ 2019-20ನೇ ಸಾಲಿನ ವರೆಗೆ 83.68ಕೋಟಿ ಹಂಚಿಕೆಯಾಗಿದ್ದು, ಸದರಿ ಅನುದಾನಕ್ಕೆ ಒಟ್ಟು 1470 ಕಾಮಗಾರಿಗಳಿಗೆ ಅನುಮೋದನೆ ನೀಡಲಾಗಿದ್ದು, 979 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿರುತ್ತದೆ. 201 ಕಾಮಗಾರಿಗಳು ಪ್ರಗತಿಯಲ್ಲಿದ್ದು 290 ಕಾಮಗಾರಿಗಳು ಪ್ರಾರಂಭಿಸಿರುವುದಿಲ್ಲ. ಶೀಘ್ರದಲ್ಲಿ ಸದರಿ ಕಾಮಗಾರಿಗಳನ್ನು ಪ್ರಾರಂಭಿಸಲಾಗುವುದು.

ಗಣಿ ಮತ್ತು ಭೂ ವಿಜ್ಞಾನ ಇಲಾಖೆ:-ಅಧಿಕಾರಿಗಳು ಮಾತನಾಡಿ ಜಿಲ್ಲಾ ಖನಿಜ ಪ್ರತಿಷ್ಠಾನವು ಗಣಿ ಭಾದಿತ ಪ್ರದೇಶಗಳ ಪುನಶ್ಚೇತನಕ್ಕಾಗಿ ರೂಪಿಸಲಾದ ಯೋಜನೆಯಾಗಿರುತ್ತದೆ. ಜಿಲ್ಲಾ ಖನಿಜ ಪ್ರತಿಷ್ಠಾನದಡಿಯಲ್ಲಿ ಒಟ್ಟು ಸೆಪ್ಟಂಬರ್-2019 ರ ಮಾಸಾಂತ್ಯದವರೆಗೆ ರೂ.3962.33 ಲಕ್ಷಗಳು ಸಂಗ್ರಹಣೆಯಾಗಿರುತ್ತದೆ. ಈ ವರೆಗೆ ಎರೆಡು ಕ್ರಿಯಾಯೋಜನೆಗಳಲ್ಲಿ ರೂ.2104.65ಲಕ್ಷಗಳ ಮೊತ್ತಕ್ಕೆ ಅನುಮೋದನೆಯಾಗಿದ್ದು, ರೂ.806.35 ಲಕ್ಷಗಳು ಖರ್ಚು ಮಾಡಲಾಗಿರುತ್ತದೆ ಎಂದು ಸಭೆಗೆ ವಿವರಗಳನ್ನು ಒದಗಿಸಲಾಗಿದೆ. ಎರೆಡು ಕ್ರಿಯಾಯೋಜನೆಗಳಲ್ಲಿ ಗಣಿ ಭಾದಿತ ಪ್ರದೇಶಗಳಲ್ಲಿ ಒಟ್ಟು 169 ಯೋಜನೆಗಳಲ್ಲಿ ಜಿಲ್ಲಾ ಖನಿಜ ಪ್ರತಿಷ್ಠಾನದ ನಿಯಮಗಳನುಸಾರ ಕ್ರಮ ವಹಿಸಲಾಗುತ್ತಿದೆ. ಒಟ್ಟು ರೂ.1359.83ಲಕ್ಷಗಳ ಮೊತ್ತಕ್ಕೆ ಮೂರನೇ ಕ್ರಿಯಾಯೋಜನೆ ಸಿದ್ದಪಡಿಸಲಾಗುತ್ತಿದ್ದು ಜಿಲ್ಲಾ ಉಸ್ತುವಾರಿ ಸಚಿವರ ಸಭೆಯಲ್ಲಿ ಅನುಮೋದನೆ ಪಡೆಯಲಾಗುವುದು ಎಂದು ಸಭೆಗೆ ತಿಳಿಸಲಾಗಿದೆ

ಜೆಸ್ಕಾಂ:- ಅಧಿಕಾರಿಗಳು ಮಾತನಾಡಿ ಗಂಗಾಕಲ್ಯಾಣ 149 ಕಾಮಗಾರಿಗಳು ಮುಗಿದಿರುತ್ತವೆ. ಉಳಿದ ಕಾಮಗಾರಿಗಳು ಮಾಡುತ್ತಿದ್ದೇವೆ ಎಂದು ಸಭೆಗೆ ತಿಳಿಸಿದರು. ಜಿಲ್ಲಾಧಿಕಾರಿಗಳು ಮಾತನಾಡಿ ಬಿಸಿಎಂ ಹಾಸ್ಟೆಲ್‌ನಲ್ಲಿ ಇತ್ತೀಚೆಗೆ 5 ಜನ ಮಕ್ಕಳು ವಿದ್ಯುತ್ ಶಾಕ್‌ನಿಂದ ಮರಣಹೊಂದಿರುತ್ತಾರೆ. ಜಿಲ್ಲೆಯಲ್ಲಿರುವ ಹಾಸ್ಟೆಲ್‌ಗಳಿಗೆ ಭೇಟಿ ನೀಡಿದಾಗ ಕರೆಂಟ್ ವೈರ್‌ಗಳ ಬಗ್ಗೆ ಸಾರ್ವಜನೀಕರು ದೂರು ನೀಡಿದ್ದು, ಶಾಲೆ/ಕಾಲೇಜು/ವಸತಿ ನಿಲಯ ಹಾಗೂ ಇತರೆ ಸಾರ್ವಜನಿಕ ಸ್ಥಳಗಳ ಅಪಾಯಕಾರಿ ಸ್ಥಳಗಳನ್ನು ಗುರುತಿಸಿ ಸುರಕ್ಷಿತ ಸ್ಥಳಗಳಲ್ಲಿ ವಿದ್ಯುತ್ ಮಾರ್ಗ ಹಾಗೂ ಟಿಸಿಗಳನ್ನು ಸ್ಥಳಾಂತರಿಸುವಂತೆ ಸಂಬಂದಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮ ತೆಗೆದುಕೊಳ್ಳಲು ಸೂಚಿಸಿದರು. ಸಭಾಧ್ಯಕ್ಷರು ಬಾಕಿ ಉಳಿದ ಗಂಗಾ ಕಲ್ಯಾಣ ಯೋಜನೆಗಳ ಅರ್ಜಿಗಳನ್ನು ಹಾಗೂ ಗ್ರಾಮೀಣಕುಡಿಯುವ ನೀರಿನಯೋಜನೆಯ ವಿದ್ಯುದ್ದೀಕರಣದ ಕಾಮಗಾರಿಗಳನ್ನು ತ್ವರಿಗತಿಯಲ್ಲಿ ಪೂರ್ಣಗೊಳಿಸಲು ಸೂಚಿಸಿದರು ಹಾಗೂ ಸರ್ಕಾರಿಯೋಜನೆಯನ್ನು ಅನುಷ್ಠಾನಗೊಳಿಸಲು ಅಗತ್ಯಕ್ರಮ ತೆಗೆದುಕೊಳ್ಳಲು

ಸೂಚಿಸಿದರು. ಸದರಿ ವಿಷಯವಾಗಿ ಜೇಸ್ಕಾಂ ಅಧಿಕಾರಿಗಳು 2-3 ತಿಂಗಳಲ್ಲಿ ಸಮಸ್ಯೆಗಳನ್ನು ಸರಿಪಡಿಸುತ್ತೇವೆ ಎಂದು ತಿಳಿಸಿದರು.

**ಪೋಲಿಸ್ ಇಲಾಖೆ** :- ಅಧಿಕಾರಿಗಳು ಮಾತನಾಡಿ ಹೆಲ್ಮೆಟ್ ಕೇಸು ಕುರಿತು ಕೇಸುಗಳು ಇವೆ. ತಿಂಗಳಿಗೆ 20 ಕೇಸುಗಳು ಇರುತ್ತವೆ. ಕೊಲೆ ಕೇಸು ಕಡಿಮೆ ಇದೆ. ಕಳೆದ ವರ್ಷಕ್ಕೂ ಈ ವರ್ಷಕ್ಕೆ ಹೋಲಿಸಿದರೆ ಕೇಸುಗಳು ಕಡಿಮೆಯಾಗಿವೆ. ನಮ್ಮ ಇಲಾಖೆಯಲ್ಲಿ ಯಾವುದೇ ತೊಂದರೆ ಇಲ್ಲ ಎಂದು ಅಧಿಕಾರಿಗಳು ಸಭೆಗೆ ತಿಳಿಸಿದರು.

ಕೊನೆಯಲ್ಲಿ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಿದರು.

ದಿನಾಂಕ:15.10.2019
ಸ್ಥಳ : ಕೊಪ್ಪಳ

(ಡಾ. ಎಸ್. ಸೆಲ್ವಕುಮಾರ್)
**ಸರ್ಕಾರದ ಕಾರ್ಯದರ್ಶಿಗಳು,**
**ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ**
**ಹಾಗೂ ಕೊಪ್ಪಳ ಜಿಲ್ಲೆ ಉಸ್ತುವಾರಿ ಕಾರ್ಯದರ್ಶಿಗಳು**

ಪ್ರತಿಯನ್ನು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.

ಗೆ,

1. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ.
2. ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು, ಕೊಪ್ಪಳ.
3. ಉಪವಿಭಾಗಾಧಿಕಾರಿಗಳು, ಕೊಪ್ಪಳ
4. ಭೂದಾಖಲೆಗಳ ಉಪನಿರ್ದೇಶಕರು, ಕೊಪ್ಪಳ
5. ಉಪ ಕಾರ್ಯದರ್ಶಿಗಳು, ಜಿಲ್ಲಾ ಪಂಚಾಯತ್, ಕೊಪ್ಪಳ
6. ಅರಣ್ಯ ಉಪ ಸಂರಕ್ಷಣಾಧಿಕಾರಿಗಳು (ಪ್ರಾದೇಶಿಕ) ಕೊಪ್ಪಳ.
7. ಅರಣ್ಯ ಉಪ ಸಂರಕ್ಷಣಾಧಿಕಾರಿಗಳು (ಸಾಮಾಜಿಕ) ಕೊಪ್ಪಳ.
8. ಉಪ ನಿರ್ದೇಶಕರು, ಕೃಷಿ ಇಲಾಖೆ, ಕೊಪ್ಪಳ
9. ಜಂಟಿ ಕೃಷಿ ನಿರ್ದೇಶಕರು, ಕೊಪ್ಪಳ.
10. ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ಕೊಪ್ಪಳ
11. ಉಪ ನಿರ್ದೇಶಕರು, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ, ಕೊಪ್ಪಳ
12. ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ಕೊಪ್ಪಳ
13. ಉಪ ನಿರ್ದೇಶಕರು, ಸಾರ್ವಜನಿಕ ಶಿಕ್ಷಣ ಇಲಾಖೆ, ಕೊಪ್ಪಳ
14. ಉಪ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕೊಪ್ಪಳ
15. ಉಪ ನಿರ್ದೇಶಕರು, ಪದವಿಪೂರ್ವ ಶಿಕ್ಷಣ ಇಲಾಖೆ, ಕೊಪ್ಪಳ
16. ಉಪ ನಿರ್ದೇಶಕರು, ಪಶು ಸಂಗೋಪನಾ ಇಲಾಖೆ, ಕೊಪ್ಪಳ
17. ಜಿಲ್ಲಾ ವಾರ್ತಾಧಿಕಾರಿಗಳು, ಕೊಪ್ಪಳ
18. ಜಿಲ್ಲಾ ಸಂಖ್ಯಾ ಸಂಗ್ರಹಣಾಧಿಕಾರಿಗಳು, ಕೊಪ್ಪಳ
19. ಉಪನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಕೊಪ್ಪಳ

20. ಜಿಲ್ಲಾ ಅಧಿಕಾರಿಗಳು, ಹಿಂದುಳಿದ ವರ್ಗ ಮತ್ತು ಅಲ್ಪಸಂಖ್ಯಾತರ ಇಲಾಖೆ, ಕೊಪ್ಪಳ
21. ಜಿಲ್ಲಾ ವ್ಯವಸ್ಥಾಪಕರು, ರಾಜ್ಯ ಆಹಾರ ಮತ್ತು ನಾಗರೀಕ ಸರಬರಾಜು ನಿಗಮ ಕೊಪ್ಪಳ
22. ಜಿಲ್ಲಾ ವ್ಯವಸ್ಥಾಪಕರು, ದಿ. ದೇವರಾಜ ಅರಸು ಹಿಂದುಳಿದ ವರ್ಗಗಳ ಅಭಿವೃದ್ಧಿ ನಿಗಮ ಕೊಪ್ಪಳ
23. ಜಿಲ್ಲಾ ವ್ಯವಸ್ಥಾಪಕರು, ಡಾ: ಅಂಬೇಡ್ಕರ್ ಅಭಿವೃದ್ಧಿ ನಿಗಮ ಕೊಪ್ಪಳ
24. ಕಾರ್ಯನಿರ್ವಾಹಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಕೊಪ್ಪಳ
25. ಕಾರ್ಯನಿರ್ವಾಹಕ ಅಭಿಯಂತರರು, ಪಂ.ರಾಜ್.ಇಂ. ಕೊಪ್ಪಳ
26. ಕಾರ್ಯನಿರ್ವಾಹಕ ಅಭಿಯಂತರರು, ಜೆಸ್ಕಾಂ, ಕೊಪ್ಪಳ
27. ಜಂಟಿ ನಿರ್ದೇಶಕರು, ಜಿಲ್ಲಾ ಕೈಗಾರಿಕಾ ಕೇಂದ್ರ ಕೊಪ್ಪಳ
28. ತಹಶೀಲ್ದಾರ, ಕೊಪ್ಪಳ/ಯಲಬುರ್ಗಾ/ಕುಷ್ಟಗಿ/ಗಂಗಾವತಿ/ಕುಕನೂರು/ಕಾರಟಗಿ/ ಕನಕಗಿರಿ
29. ಪೌರಾಯುಕ್ತರು, ನಗರಸಭೆ, ಕೊಪ್ಪಳ
30. ಕಾರ್ಯನಿರ್ವಾಹಕ ಅಧಿಕಾರಿಗಳು, ತಾ.ಪಂ. ಕೊಪ್ಪಳ/ಯಲಬುರ್ಗಾ/ಕುಷ್ಟಗಿ/ಗಂಗಾವತಿ
31. ಉಪ ನಿರ್ದೇಶಕರು, ತೋಟಗಾರಿಕೆ ಇಲಾಖೆ, ಕೊಪ್ಪಳ
32. ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರ, ಕೊಪ್ಪಳ
33. ವಿಭಾಗೀಯ ನಿಯಂತ್ರಕರು, ಎನ್.ಈ.ಕೆ.ಎಸ್.ಆರ್.ಟಿ.ಸಿ ಕೊಪ್ಪಳ
34. ಕಾರ್ಯನಿರ್ವಾಹಕ ಅಭಿಯಂತರರು, ಕೆ.ಹೆಚ್.ಬಿ, ಕೊಪ್ಪಳ
35. ಸಹಾಯಕ ನಿರ್ದೇಶಕರು. ಪಿಂಚಣಿ ಮತ್ತು ಸಣ್ಣ ಉಳಿತಾಯ ಇಲಾಖೆ, ಕೊಪ್ಪಳ.
36. ಕಾರ್ಯನಿರ್ವಾಹಕ ಇಂಜಿನೀಯರರು, ಯೋಜನಾ ಕೋಶ, (ಪಿ.ಎಂ.ಜಿ.ಎಸ್.ವೈ) ಕೊಪ್ಪಳ
37. ಕಾರ್ಯನಿರ್ವಾಹಕ ಅಭಿಯಂತರರು, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ ಕೊಪ್ಪಳ
38. ಉಪನಿರ್ದೇಶಕರು, ರೇಷ್ಮೆ ಇಲಾಖೆ, ಕೊಪ್ಪಳ.
39. ಜಿಲ್ಲಾ ಆಯುಷ್ ಅಧಿಕಾರಿಗಳು, ಕೊಪ್ಪಳ
40. ಶಿಕ್ಷಣಾಧಿಕಾರಿಗಳು, ಅಕ್ಷರ ದಾಸೋಹ, ಜಿ.ಪಂ. ಕೊಪ್ಪಳ
41. ಜಿಲ್ಲಾ ವಯಸ್ಕರ ಶಿಕ್ಷಣಾಧಿಕಾರಿಗಳು, ಜಿಲ್ಲಾ ವಯಸ್ಕರ ಶಿಕ್ಷಣ ಇಲಾಖೆ, ಕೊಪ್ಪಳ.
42. ಸಹಾಯಕ ನಿರ್ದೇಶಕರು, ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ, ಕೊಪ್ಪಳ.
43. ಮೀನುಗಾರಿಕೆ ಸಹಾಯಕ ನಿರ್ದೇಶಕರು, ಕೊಪ್ಪಳ
44. ಸಹಾಯಕ ನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ, ಜಿಲ್ಲಾ ಪಂಚಾಯತ್, ಕೊಪ್ಪಳ.
45. ಉಪನಿರ್ದೇಶಕರು, ಖಾದಿ ಗ್ರಾಮೋದ್ಯೋಗ ಇಲಾಖೆ, ಜಿ.ಪಂ. ಕೊಪ್ಪಳ.
46. ಜಿಲ್ಲಾ ಗ್ರಂಥಾಲಯ ಅಧಿಕಾರಿಗಳು, ಕೊಪ್ಪಳ
47. ಜಿಲ್ಲಾ ಅಂಗವಿಕಲ ಕಲ್ಯಾಣಾಧಿಕಾರಿಗಳು, ಕೊಪ್ಪಳ
48. ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತ ಇಲಾಖೆ, ಕೊಪ್ಪಳ
49. ಹಿರಿಯ ಭೂವಿಜ್ಞಾನಿ, ಗಣಿ ಮತ್ತು ಭೂ ವಿಜ್ಞಾನ ಇಲಾಖೆ, ಕೊಪ್ಪಳ
50. ಜಿಲ್ಲಾ ಅಧಿಕಾರಿಗಳು, ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ, ಕೊಪ್ಪಳ
51. ಸಹಾಯಕ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಕೊಪ್ಪಳ
52. ಕಾರ್ಯನಿರ್ವಾಹಕ ಅಭಿಯಂತರರು, ಕರ್ನಾಟಕ ಗ್ರಾಮೀಣ ಮೂಲಭೂತ ಸೌಕರ್ಯ ಅಭಿವೃದ್ಧಿ ನಿಯಮಿತ, ಕೊಪ್ಪಳ
53. ಯೋಜನಾ ನಿರ್ದೇಶಕರು, ನಿರ್ಮಿತಿ ಕೇಂದ್ರ, ಕೊಪ್ಪಳ
54. ಕೌಶಲ್ಯ ಅಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ, ಕೊಪ್ಪಳ
55. ಮುಖ್ಯ ಅಭಿಯಂತರರ ಕಛೇರಿ, ಕನೀನಿನಿ, ನೀರಾವರಿ ಕೇಂದ್ರ ವಲಯ, ಮುನಿರಾಬಾದ
56. ಕಾರ್ಯನಿರ್ವಾಹಕ ಇಂಜಿನೀಯರರು, ಸಣ್ಣ ನೀರಾವರಿ ಇಲಾಖೆ, ಕುಷ್ಟಗಿ
57. ಜಿಲ್ಲಾ ನೊಂದಣಾಧಿಕಾರಿಗಳು, ಕೊಪ್ಪಳ
58. ಜಿಲ್ಲಾ ವಕ್ಫ್ ಅಧಿಕಾರಿಗಳು, ಕೊಪ್ಪಳ

59. ಉಪ ನಿಬಂಧಕರು, ಸಹಕಾರ ಸಂಘಗಳು, ಕೊಪ್ಪಳ
60. ಲೀಡ್ ಬ್ಯಾಂಕ ಮ್ಯಾನೇಜರ್, ಎಸ್.ಬಿ.ಐ. ಕೊಪ್ಪಳ
61. ಜಿಲ್ಲಾಧಿಕಾರಿಗಳ ಆಪ್ತಶಾಖೆಗೆ ಮಾಹಿತಿಗಾಗಿ.

**ಡಾ. ಶಾಲಿನಿ ರಜನೀಶ್,** ಭಾ.ಆ.ಸೇ.
ಸರ್ಕಾರದ ಪ್ರಧಾನ ಕಾರ್ಯದರ್ಶಿ
ಯೋಜನೆ, ಕಾರ್ಯಕ್ರಮ ಸಂಯೋಜನೆ ಮತ್ತು
ಸಾಂಖ್ಯಿಕ ಇಲಾಖೆ

**ಕರ್ನಾಟಕ ಸರ್ಕಾರ**

ಕರ್ನಾಟಕ ಸರ್ಕಾರದ ಸಚಿವಾಲಯ
ಕೊಠಡಿ ಸಂಖ್ಯೆ: 701, 7ನೇ ಮಹಡಿ
3ನೇ ಹಂತ, ಬಹುಮಹಡಿಗಳ ಕಟ್ಟಡ
ಬೆಂಗಳೂರು – 560 001
ದೂ : 080–22252352, 22032726
ಇ–ಮೇಲ್: prsplanning@gmail.com

ACS/AR/828074

ಸಂಖ್ಯೆ: ಯೋಇ/141/ಪ್ರಕಾ/2019 ದಿನಾಂಕ: 23.10.2019

**ಮಾನ್ಯರೇ,**

ತಮ್ಮ ಸುತ್ತೋಲೆ ಪತ್ರ ಸಂಖ್ಯೆ: ಸಿಆಸುಇ 19 ಇಸಪ 2018, ದಿನಾಂಕ: 11.07.2018 ರಲ್ಲಿ ತಿಳಿಸಿರುವಂತೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಾಗಿ ತುಮಕೂರು ಜಿಲ್ಲೆಗೆ ಸಂಬಂಧಿಸಿದಂತೆ ಭೇಟಿ ನೀಡಿದ ವರದಿಯನ್ನು ಇದರೊಂದಿಗೆ ಲಗತ್ತಿಸಿ, ಮುಂದಿನ ಕ್ರಮಕ್ಕಾಗಿ ಸಲ್ಲಿಸಲಾಗಿದೆ.

| ಕ್ರಮ ಸಂಖ್ಯೆ | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ತುಮಕೂರು |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ: ಶಾಲಿನಿ ರಜನೀಶ್,ಭಾ.ಆ.ಸೇ. |
| 3 | ಭೇಟಿಯಾದ/ಪ್ರವಾಸದ ದಿನಾಂಕ | ದಿನಾಂಕ: 18.10.2019 ಹಾಗೂ 19.10.2019 ಎರಡು ದಿವಸಗಳು |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | ಜಿಲ್ಲಾ ಭೇಟಿಯ ವರದಿಯ ಪ್ರತಿ ಲಗತ್ತಿಸಿದೆ |

**ಗೌರವಗಳೊಂದಿಗೆ,**

ತಮ್ಮ ವಿಶ್ವಾಸಿ,

**ಶ್ರೀಮತಿ ವಿ.ಮಂಜುಳ, ಭಾ.ಆ.ಸೇ,**
**ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,**
**ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ** (ಆಸು)

30/10/19

30/10/19

31/10/19


## ದಿನಾಂಕ: 18.10.2019 ಹಾಗೂ 19.10.2019 ರಂದು ತುಮಕೂರು ಜಿಲ್ಲೆ ಹಾಗೂ ಸ್ಮಾರ್ಟ್‌ಸಿಟಿ ಲಿಮಿಟೆಡ್‌ನ ಯೋಜನೆಗಳ ಸ್ಥಳ ಪರಿವೀಕ್ಷಣಾ ವರದಿ.

1. ದಿನಾಂಕ:18–10–2019 ರಂದು ಕೊರಟಗೆರೆ ತಾಲ್ಲೂಕು, ಹೊಳವನಹಳ್ಳಿ ಹೋಬಳಿ, ಹೊಳವನಹಳ್ಳಿ ಗ್ರಾಮದ ಕುರುಬರಹಳ್ಳಿ ಸರ್ವೆ ನಂಬರಿನಲ್ಲಿ ಇರುವ ಶ್ರೀಯುತ ಅಯ್ಯಪ್ಪ ಮಸಗಿ ಪ್ರಗತಿಪರ ಕೃಷಿಕರು ಇವರ ತಾಖಿಗೆ ಸರಿಸುಮಾರು ಮಧ್ಯಾಹ್ನ 3.30 ಗಂಟೆಯಿಂದ 6 ಗಂಟೆಯವರೆಗೆ " ತದ್ರೂಪಿ ಕಾಡು " ಮಾಡಿರುವ / ರೂಪಿಸಿರುವ ತಾಖಿಗೆ ಭೇಟಿ ನೀಡಿ ಅಲ್ಲಿ ಮಣ್ಣು ಮತ್ತು ನೀರು ಸಂಗ್ರಹಣೆ ವಿಧಾನಗಳನ್ನು ಹಾಗೂ ಯಾವುದೇ ರಸಗೊಬ್ಬರಗಳನ್ನು ಬಳಸದೇ ಜೀವಸಾರದ ಮೂಲಕ ಹನಿ ನೀರಾವರಿಯನ್ನು ಮಾಡಿರುವ 16 ಎಕರೆಯಲ್ಲಿ ಬೆಳೆದಿರುವ ಎಲ್ಲಾ ಬೆಳೆಗಳನ್ನು ಹಾಗೂ ಅಲ್ಲಿರುವ ಪೂರ್ಣ ತಾಖುಗಳನ್ನು ಸವಿವರವಾಗಿ ಪರಿಶೀಲಿಸಲಾಯಿತು.

ಮೊದಲು, ತರಬೇತಿ ಕೊಠಡಿಯ ಕೆಳಗೆ ಸಂಗ್ರಹಿಸಿರುವ ನೀರಿನ ತೊಟ್ಟಿಯನ್ನು ಹಾಗೂ ಕೊಠಡಿಯ ಮೇಲೆ ಸಂಗ್ರಹಿಸಿರುವ ನೀರಿನ ತೊಟ್ಟಿಯನ್ನು ವೀಕ್ಷಿಸಿದರು. ಅದರಿಂದ ಆಗುವ ಅನುಕೂಲಗಳ ಬಗ್ಗೆ ವಿವರಣೆಯನ್ನು ಅಯ್ಯಪ್ಪ ಮಸಗಿಯವರಿಂದ ಪಡೆದುಕೊಳ್ಳಲಾಯಿತು. ಅಲ್ಲಿಂದ ಕೃಷಿ ಬೆಳೆಗಳ ಬಗ್ಗೆ, ಮಳೆಯ ಬಗ್ಗೆ, ಬಿತ್ತನೆ ಬಗ್ಗೆ ವಿವರಣೆ ಪಡೆದು ಭತ್ತ, ತೊಗರಿ ಮತ್ತು ನೆಲಗಡಲೆ, ತಾಖುಗಳಿಗೆ ಭೇಟಿ ನೀಡಿ ಬೆಳೆಗಳ ಪರಿಸ್ಥಿತಿಯನ್ನು ಪರಿಶೀಲಿಸಲಾಯಿತು. ಆದಾದ ನಂತರ ಕೃಷಿಭಾಗ್ಯದ ಕೃಷಿ ಹೊಂಡವನ್ನು ಪರಿಶೀಲಿಸಿ ಅದರಲ್ಲಿ ಸಂಗ್ರಹವಾಗಿರುವ ನೀರಿನ ಬಳಕೆ ಬಗ್ಗೆ ಮಾಹಿತಿ ಪಡೆಯಲಾಯಿತು.

ಖುಷ್ಕಿ ಜಮೀನಿನಲ್ಲಿ ಬೆಳೆದಿರುವ ಮಾವು, ಅವಾಕ್ಯಾಡೋ, ನಿಂಬೆ, ನೇರಳೆ ತಾಖುಗಳಿಗೆ ಭೇಟಿ ನೀಡಿ ಅಲ್ಲಿ ರಚಿಸಿರುವ ಇಂಗುಗುಂಡಿಗಳನ್ನು / ಬದುಗಳನ್ನು ಪರಿಶೀಲಿಸಲಾಯಿತು. ಬೋರವೆಲ್ ರಿಚಾರ್ಜ್ ಮಾಡಿರುವುದನ್ನು ಪರಿಶೀಲಿಸಿ ಆ ಪದ್ಧತಿಯನ್ನು ಅಳವಡಿಸಿಕೊಳ್ಳಲು ಸಂಬಂಧಿಸಿದ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕುಡಿಯುವ ನೀರು ಇವರಿಗೆ ಈ ರೀತಿ ರಚನೆಗಳನ್ನು ನಿರ್ಮಾಣ ಮಾಡಲು ಹಾಗೂ ಮುಂದಿನ ಕ್ರಮ ಕೈಗೊಳ್ಳಲು ತಿಳಿಸಲಾಯಿತು. ನಂತರ ಅಯ್ಯಪ್ಪ ಮಸಗಿಯವರ ತಾಖಿನಲ್ಲಿ ಇರುವ ತೆರೆದ ಬಾವಿಯಲ್ಲಿ ಸಂಗ್ರಹವಾದ ನೀರನ್ನು ಪರಿಶೀಲಿಸಿ ಪಂಚಾಯತಿ ಅಭಿವೃದ್ಧಿ ಅಧಿಕಾರಿಗೆ ಈ ರೀತಿಯ ಬಾವಿಗಳ ಸಂಖ್ಯೆ ಬಗ್ಗೆ ವರದಿ ಸಲ್ಲಿಸುವಂತೆ ಸೂಚಿಸಲಾಯಿತು. ನಂತರ ಚೆಕ್‌ಡ್ಯಾಂ ಪರಿಶೀಲಿಸಿ ಕ್ಷೇತ್ರದಲ್ಲಿರುವ ದೊಡ್ಡ ಕೆರೆ ವೀಕ್ಷಿಸಿ ಅದರಿಂದ ನೀರನ್ನು ಮರುಬಳಕೆ ಮಾಡುವುದರ ಬಗ್ಗೆ ವೀಕ್ಷಿಸಿ, ತಡೆಗೋಡೆ ನಿರ್ಮಿಸಿಕೊಂಡು ನೀರನ್ನು ಸಂಗ್ರಹಿಸಿಕೊಂಡಿರುವ ರಚನೆಗಳನ್ನು ಸಹ ಪರಿಶೀಲಿಸಲಾಯಿತು.

ಖುಷ್ಕಿ ಭೂಮಿಯಲ್ಲಿ ತೋಟಗಾರಿಕೆ ಬೆಳೆಗಳನ್ನು ನೆಟ್ಟು ಇಂಗುಗುಂಡಿಗಳು / ಬದುಗಳನ್ನು ನಿರ್ಮಿಸಿಕೊಂಡಿರುವುದನ್ನು ಮನಗಂಡು ಸಂತಸ ವ್ಯಕ್ತಪಡಿಸಲಾಯಿತು. ಆಮೇಲೆ ಜೀವಸಾರ ಘಟಕವನ್ನು ವೀಕ್ಷಿಸಿ ಜೀವಸಾರವನ್ನು ಎಲ್ಲಾ ಗಿಡಗಳ/ಮರಗಳ ಬುಡಕ್ಕೆ ಹೋಗುತ್ತಿರುವುದನ್ನು ಪರಿಶೀಲಿಸಲಾಯಿತು. ಅಲ್ಲದೆ ಮಣ್ಣಿನಲ್ಲಿ ಗಾಳಿಯಾಡುವ ಹಾಗೆ ಮಾಡಿರುವುದು, ನೀರು ಇಂಗುವ ರಚನೆಗಳನ್ನು ಹಾಗೂ ಬೋರ್‌ವೆಲ್ ರಿಚಾರ್ಜ್ ಮಾಡಿರುವುದನ್ನು ಸಂಪೂರ್ಣವಾಗಿ ಪರಿಶೀಲಿಸಲಾಯಿತು. ಸೀತಾಫಲ, ಸೀಬೆ, ತೆಂಗು, ನಿಂಬೆ, ಹೆಬ್ಬೇವು, ನುಗ್ಗೆ, ಅವಾಕ್ಯಾಡೋ, ಮತ್ತು ದಾಳಿಂಬೆ ಇತ್ಯಾದಿ ಗಿಡಗಳಲ್ಲಿ/ಮರಗಳಲ್ಲಿ ಯಾವುದೇ ರೋಗ-ಕೀಟ ಇಲ್ಲದಿರುವುದನ್ನು ಅವಗಾಹಿಸಲಾಯಿತು. ಇದಕ್ಕೆ ಕಾರಣ ಮಣ್ಣಿನ ಆರೋಗ್ಯ ಕಾಪಾಡಿಕೊಂಡು ಅವರ ಹೊಲದಿಂದ ಒಂದು ಹನಿ ನೀರು ಹೊರಗೆ ಹೋಗದಂತೆ ಮಳೆ ನೀರನ್ನು ಇಂಗಿಸಿರುವುದು, ಇವುಗಳನ್ನೆಲ್ಲಾ ಪರಿಶೀಲಿಸಲಾಯಿತು. ರೈತರು ಸಮಗ್ರವಾಗಿ ಕೃಷಿ ಮಾಡಿಕೊಂಡಲ್ಲಿ ಲಾಭಗಳಿಸಬಹುದು. ಆದ್ದರಿಂದ ಸಮಗ್ರ ಕೃಷಿ ಪದ್ಧತಿ ಅಳವಡಿಸಿಕೊಳ್ಳಲು ರೈತರಿಗೆ ಮನವರಿಕೆ ಮಾಡಿಕೊಡಲು ಎಲ್ಲಾ ಇಲಾಖೆಯ ಅಧಿಕಾರಿಗಳಿಗೆ ಸೂಚಿಸಲಾಯಿತು. ಎಲ್ಲಾ ಇಲಾಖೆಯ ಅಧಿಕಾರಿಗಳು ರೈತರಿಗೆ ಕೂಡಲೇ ಸ್ಪಂದಿಸಬೇಕೆಂದು ಹಾಗೂ ಅವರಿಗೆ ಸಹಕಾರಿಯಾಗಬೇಕು ಎಂಬುದಾಗಿ ತಿಳಿಸಲಾಯಿತು.




















2. **ಜನರಲ್ ಕಾರಿಯಪ್ಪ ರಸ್ತೆ :-** ಈ ಕಾಮಗಾರಿಗೆ ಕಾರ್ಯಾದೇಶ ನೀಡಿ ಈಗಾಗಲೇ 10 ತಿಂಗಳುಗಳಾಗಿದ್ದರೂ ಸಹ ಕಾಮಗಾರಿಯು ಮಂದಗತಿಯಲ್ಲಿ ನಡೆಯುತ್ತಿದ್ದು ಯಾವುದೇ ರೀತಿ ಪ್ರಗತಿ ಹೊಂದಿರುವುದಿಲ್ಲ. ಈ ಅಂಶವನ್ನು ಸಾರ್ವಜನಿಕರು ಹಾಗೂ ಜನಪ್ರತಿನಿಧಿಗಳು ಈಗಾಗಲೇ ಸಾಕಷ್ಟು ಬಾರಿ ಪ್ರಶ್ನಿಸಿದ್ದರೂ ಸಹ ಯಾವುದೇ ಗಣನೀಯ ಕ್ರಮ ಕೈಗೊಂಡಿರುವುದಿಲ್ಲ ಈ ವಿಷಯವಾಗಿ ದಿನಾಂಕ: 18.10.2019ರಂದು ಸ್ಥಳಕ್ಕೆ ತೆರಳಿ ಗುತ್ತಿಗೆದಾರರು, ಸ್ಮಾರ್ಟ್‌ಸಿಟಿ ಅಧಿಕಾರಿಗಳು ಹಾಗೂ ಪಿ.ಎಂ.ಸಿ ಅಭಿಯಂತರರೊಂದಿಗೆ ಚರ್ಚಿಸಿದಾಗ, ಗುತ್ತಿಗೆದಾರರು ಇತರೆ ಇಲಾಖೆಯವರು ಸಹಕರಿಸುತ್ತಿಲ್ಲವೆಂದು ತಿಳಿದು ಬಂದಿರುತ್ತದೆ ಹಾಗೂ ಪಿ.ಎಂ.ಸಿ. ವತಿಯಿಂದ ಕೆಲವು ಕಾಮಗಾರಿಗಳನ್ನು ಪ್ರಾರಂಭಿಸಲು ಅನುಮೋದನೆ ನೀಡುತ್ತಿಲ್ಲವೆಂದು ಬೇಜವಾಬ್ದಾರಿಯಿಂದ ಉತ್ತರಿಸಿರುತ್ತಾರೆ. ಕಳೆದ 1 ವಾರದಿಂದ ನಗರದಲ್ಲಿ ತೀವ್ರ ಮಳೆಯಾಗುತ್ತಿದ್ದು, ಸದರಿ ರಸ್ತೆಯಲ್ಲಿ ವಾಹನ ಸಂಚಾರಕ್ಕೆ ತೀವ್ರ ಅಡಚಣೆ ಉಂಟಾಗಿರುತ್ತದೆ. ಅಲ್ಲಲ್ಲಿ ಛೇಂಬರ್‌ಗಾಗಿ ಅಗೆದ ಮಣ್ಣನ್ನು ಸರಿಯಾದ ರೀತಿಯಲ್ಲಿ ಮುಚ್ಚದೆ ರಸ್ತೆಯು ಸಾಕಷ್ಟು ಕೆಸರಿನಿಂದ ಕೂಡಿದ್ದು ಸದರಿ ಸ್ಥಳದಲ್ಲಿ ಒಂದು ರೋಲರ್ ಯಂತ್ರವೂ ಸಹ ಇಲ್ಲದೇ ಇರುವುದು ಕಂಡುಬಂದಿರುತ್ತದೆ.







ಈ ವಿಷಯವಾಗಿ ಗುತ್ತಿಗೆದಾರರನ್ನು ಪ್ರಶ್ನಿಸಿದಾಗ ತಡರಾತ್ರಿಯಲ್ಲೇ ಪೂರ್ಣಗೊಳಿಸಿ ಕೊಡುತ್ತೇನೆಂದು ಒಪ್ಪಿಕೊಂಡಿರುತ್ತಾರೆ. ಆದ್ದರಿಂದ ಈ ಕೂಡಲೇ ಮಣ್ಣನ್ನು ಸಮಗೊಳಿಸಲು 2 ರೋಲರ್‌ಗಳನ್ನು ತರಿಸಿ ಉದ್ದೇಶಿತ ಸಾಂದ್ರತೆಗೆ Compaction ಮಾಡಲು ಸೂಚಿಸಲಾಯಿತು.






ಅದರಂತೆ ಬಾಕಿ ಉಳಿದಿರುವ ಡ್ರೈನ್, ಪಾದಚಾರಿ ಮಾರ್ಗ ಎಲ್ಲವನ್ನೂ ಏಕ ಕಾಲದಲ್ಲಿ ಪ್ರಾರಂಭಿಸಿ 01 ವಾರದೊಳಗೆ ಪೂರ್ಣಗೊಳಿಸಲು ಸೂಚಿಸಲಾಯಿತು. ಇಲ್ಲವಾದಲ್ಲಿ ಕರಾರನ್ನು ಅಂತಿಮಗೊಳಿಸಲು ಟೆಂಡರ್ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.)

3. **ಸ್ಮಾರ್ಟ್‌ರೋಡ್ ಪ್ಯಾಕೇಜ್ – 1:–** ಈ ಪ್ಯಾಕೇಜ್‌ನಲ್ಲಿ ನಾಲ್ಕು ರಸ್ತೆಗಳು ಒಳಗೊಂಡಿದ್ದು ಅದರಲ್ಲಿ ಒಂದಾದ ವಿವೇಕಾನಂದ ರಸ್ತೆಯನ್ನು ವೀಕ್ಷಿಸಲು ತೆರಳಲಾಯಿತು. ಸದರಿ ರಸ್ತೆಯು ಬಹಳ ಚಿಕ್ಕದಾಗಿದ್ದು, ಅದರಲ್ಲಿ ಛೇಂಬರ್‌ಗಳನ್ನು ಮಾಡಲು ಅಗೆದಿದ್ದ ಮಣ್ಣನ್ನು ಸರಿಯಾದ ರೀತಿಯಲ್ಲಿ ಮುಚ್ಚದೆ ಅಲ್ಲಿಯೂ ಸಹ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಛೇಂಬರ್‌ಗಳನ್ನು ಅಗೆಯು ಸಂದರ್ಭದಲ್ಲಿ ಸಿಕ್ಕಿದ್ದ ಚಿಕ್ಕ ಗಾತ್ರದ ಬಂಡೆಗಳನ್ನು ರಸ್ತೆಯ ಬದಿಯಲ್ಲಿಯೇ ಬಿಟ್ಟಿದ್ದು, ಅವುಗಳನ್ನು Rock Garden ಮಾಡಲು ಉಪಯೋಗಿಸುವಂತೆ ಸೂಚಿಸಲಾಯಿತು.







ಅದರಂತೆ ಬಾಕಿ ಉಳಿದಿರುವ ಡ್ರೈನ್, ಪಾದಚಾರಿ ಮಾರ್ಗ ಎಲ್ಲವನ್ನೂ ಏಕ ಕಾಲದಲ್ಲಿ ಪ್ರಾರಂಭಿಸಿ 01 ವಾರದೊಳಗೆ ಪೂರ್ಣಗೊಳಿಸಲು ಸೂಚಿಸಲಾಯಿತು.ಇಲ್ಲವಾದಲ್ಲಿ ಕರಾರನ್ನು ಅಂತಿಮಗೊಳಿಸಲು ಟೆಂಡರ್ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ಸೂಚಿಸಲಾಯಿತು.


(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.)

4. **ಸ್ಮಾರ್ಟ್‌ರೋಡ್ ಪ್ಯಾಕೇಜ್ 3ಸಿ (ಬಿ.ಹೆಚ್. ರಸ್ತೆ) :–** ಈ ಕಾಮಗಾರಿಯ ಸ್ಥಳಕ್ಕೆ ಭೇಟಿ ನೀಡಿ ಕೆಲವೊಂದು ಕಡೆ ಛೇಂಬರ್‌ಗಳನ್ನು ರಸ್ತೆಯ ತುದಿಭಾಗದಲ್ಲಿ ಮಾಡುವ ಬದಲು ಅಸ್ತವ್ಯಸ್ತವಾಗಿ ಮಾಡಿರುತ್ತಾರೆ.














ಈ ವಿಷಯವಾಗಿ ಗುತ್ತಿಗೆದಾರರಲ್ಲಿ ಪ್ರಶ್ನಿಸಿದಾಗ ಪಿ.ಎಂ.ಸಿ ವತಿಯಿಂದ ಸ್ವೀಕೃತವಾದ ನಕ್ಷೆಯಲ್ಲಿರುವಂತೆ ಛೇಂಬರ್‌ಗಳನ್ನು ಮಾಡಿರುತ್ತೇವೆ ಎಂದು ಬೇಜವಾಬ್ದಾರಿಯಿಂದ ಉತ್ತರಿಸಿರುತ್ತಾರೆ ಹಾಗೆಯೇ ಕೆಲವೊಂದು ಕಡೆ ಯು.ಜಿ.ಡಿ ಪೈಪ್‌ಲೈನ್ ಒಡೆದು ಹೋಗಿ ನೀರೆಲ್ಲಾ ಹೊರಹರಿಯುತ್ತಿದ್ದು ರಸ್ತೆಯ ತುಂಬೆಲ್ಲಾ ನೀರು ನಿಂತಿರುತ್ತದೆ. ಇದರಿಂದ ಸಾರ್ವಜನಿಕರಿಗೆ ವಾಹನ ಸವಾರರಿಗೆ ತೊಂದರೆಯುಂಟಾಗುತ್ತಿದ್ದು ಹಾಗೂ ಅಲ್ಲಿ ಸಂಚರಿಸುವ ಸಾರ್ವಜನಿಕರಿಗೆ ಖಾಯಿಲೆ ಉಂಟಾಗುವ ಸಂಭವ ಇರುತ್ತದೆ.




ಇದನ್ನು ಗಮನದಲ್ಲಿಟ್ಟುಕೊಂಡು ಸ್ಥಳಕ್ಕೆ ಕೂಡಲೇ ಮಹಾನಗರ ಪಾಲಿಕೆಯ ಸಂಬಂಧಪಟ್ಟ ಅಭಿಯಂತರರನ್ನು ಕರೆಸಿ ಅಗತ್ಯ ಕ್ರಮಕೈಗೊಳ್ಳುವಂತೆ ಸೂಚಿಸಲಾಯಿತು. ಇಲ್ಲವಾದಲ್ಲಿ ಕರಾರನ್ನು ಅಂತಿಮಗೊಳಿಸಲು ಟೆಂಡರ್ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ಸೂಚಿಸಲಾಯಿತು.


(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.)

5. **ಸ್ಮಾರ್ಟ್‌ರೋಡ್ ಪ್ಯಾಕೇಜ್ 3ಎ (ಅಶೋಕ ರಸ್ತೆ):-** ಈ ಕಾಮಗಾರಿಯಲ್ಲಿಯೂ ಸಹ ಕೆಲವೊಂದು ಕಡೆ ಛೇಂಬರ್ ಕಾರ್ಯ ಪೂರ್ಣಗೊಂಡಿದ್ದರೂ ಕವರ್ ಸ್ಲಾಬ್ಸ್‌ಗಳನ್ನು ಸರಿಯಾದ ಕ್ರಮದಲ್ಲಿ ಮುಚ್ಚಿರುವುದಿಲ್ಲ.












ಹಾಗೆಯೇ ಈ ರಸ್ತೆಯಲ್ಲಿ ಪೈಪ್‌ಗಳನ್ನು ಅಳವಡಿಸಲು ರಸ್ತೆಯ ಉದ್ದಕ್ಕೂ ಅಗೆದಿದ್ದು ಯಾವುದೇ ರೀತಿ ಪೈಪ್‌ಗಳನ್ನು ಅಳವಡಿಸದೇ ಹಾಗೂ ಇದಕ್ಕೆ ಬೇಕಾಗಿದ್ದ Spacer ಗಳನ್ನು ಸಹ ಅಳವಡಿಸಿರುವುದಿಲ್ಲ.







ಇದಕ್ಕೆ ಈ ವಿಷಯವಾಗಿ ಗುತ್ತಿಗೆದಾರರನ್ನು ಪ್ರಶ್ನಿಸಿದಾಗ ಮುಂದಿನ 10 ದಿನಗಳೊಳಗಾಗಿ ಪೂರ್ಣಗೊಳಿಸುತ್ತೇವೆಂದು ಹೇಳಿರುತ್ತಾರೆ. ಆದರೆ ಅಶೋಕ ರಸ್ತೆಯು ನಿತ್ಯವೂ ಜನಜಂಗುಳಿಯಿಂದ ಕೂಡಿದ ರಸ್ತೆಯಾಗಿರುತ್ತದೆ. **ಇದನ್ನು ಗಮನದಲ್ಲಿಟ್ಟುಕೊಂಡು ಕೂಡಲೇ ಅಗತ್ಯ ಕ್ರಮ ಕೈಗೊಂಡು 3 ದಿನಗಳೊಳಗಾಗಿ ಪೂರ್ಣಗೊಳಿಸಿ ಅಗೆದಿರುವ ಮಣ್ಣನ್ನು ತೆರವುಗೊಳಿಸಿ ಈ ಕೂಡಲೇ ಮಣ್ಣನ್ನು ಸಮಗೊಳಿಸಲು 2 ರೋಲರ್‌ಗಳನ್ನು ತರಿಸಿ ಉದ್ದೇಶಿತ ಸಾಂದ್ರತೆಗೆ Compaction ಮಾಡಿ ಸಂಚಾರಕ್ಕೆ ಅನುವು ಮಾಡಿಕೊಡಲು ಸೂಚಿಸಲಾಯಿತು. ಇಲ್ಲವಾದಲ್ಲಿ ಕರಾರನ್ನು ಅಂತಿಮಗೊಳಿಸಲು ಟೆಂಡರ್ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ಸೂಚಿಸಲಾಯಿತು.**

**(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್**
**ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.)**

6. **ಸ್ಮಾರ್ಟ್‌ರೋಡ್ ಪ್ಯಾಕೇಜ್ 2 (ಭಗವಾನ್ ಮಹಾವೀರ ರಸ್ತೆ) :-** ದಿನಾಂಕ: 19.10.2019ರಂದು ಭಗವಾನ್ ಮಹಾವೀರ ರಸ್ತೆ ಕಾಮಗಾರಿಯ ಪ್ರಗತಿಯನ್ನು ವೀಕ್ಷಿಸಲಾಗಿ, ಈ ಕಾಮಗಾರಿಯಲ್ಲಿಯೂ ಸಹ ಛೇಂಬರ್‌ಗಳನ್ನು ರಸ್ತೆಯ ಒಂದು ಕಡೆ ಮಾತ್ರ ಪ್ರಾರಂಭಿಸಿ, ಮತ್ತೊಂದು ಕಡೆ ಈವರೆವಿಗೂ ಪ್ರಾರಂಭಿಸಿರುವುದಿಲ್ಲ ಹಾಗೂ ಪೈಪ್‌ಲೈನನ್ನು ಸಹ ಅಳವಡಿಸಿರುವುದಿಲ್ಲ. ಪ್ರಸ್ತುತ ನಗರದಲ್ಲಿ ಮಳೆಯಾಗುತ್ತಿರುವುದರಿಂದ ಭಗವಾನ್ ಮಹಾವೀರ ರಸ್ತೆಯಲ್ಲಿ ರೈಲ್ವೆ ಸ್ಟೇಷನ್ ಇದ್ದು ನಿತ್ಯವೂ ಅಲ್ಲಿಯೂ ಸಹ ಜನನಿಬಿಡ ಕೂಡಿದ ರಸ್ತೆಯಾಗಿರುತ್ತದೆ ಛೇಂಬರ್‌ಗಳನ್ನು ಮಾಡಲು ಅಗೆದಿದ್ದ ಮಣ್ಣನ್ನು ಸರಿಯಾದ ರೀತಿಯಲ್ಲಿ ಮುಚ್ಚದೇ ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ತೊಂದರೆಯಾಗುತ್ತಿರುತ್ತದೆ.








ಇದಕ್ಕೆ ಪ್ರತ್ಯುತ್ತರವಾಗಿ ಕೂಡಲೇ ರೋಲರ್ ಯಂತ್ರದಿಂದ ಮಣ್ಣನ್ನು ಸಮಗೊಳಿಸಲು ಸೂಚಿಸಿದಾಗ ಸದರಿ ಗುತ್ತಿಗೆದಾರರು ರೋಲರ್ ಯಂತ್ರವು ರಿಪೇರಿಯಲ್ಲಿದ್ದು ಪದವಿಪೂರ್ವ ಕಾಲೇಜು ಮೈದಾನದಲ್ಲಿ ಕೆಟ್ಟು ನಿಂತಿರುತ್ತದೆ ಎಂದು ಬೇಜವಾಬ್ದಾರಿಯ ಉತ್ತರ ನೀಡಿರುತ್ತಾರೆ. ಅದಕ್ಕೆ ಯಾವುದೇ ಕಾರಣಗಳನ್ನು ನೀಡದೆ ಈ ಕೂಡಲೇ ಮಣ್ಣನ್ನು ಸಮಗೊಳಿಸಲು 2 ರೋಲರ್‌ಗಳನ್ನು ತರಿಸಿ ಉದ್ದೇಶಿತ ಸಾಂದ್ರತೆಗೆ Compaction ಮಾಡಿ ಸಾರ್ವಜನಿಕರಿಗೆ ಓಡಾಡಲು ಹಾಗೂ ವಾಹನಗಳು ಸಂಚರಿಸಲು ರಸ್ತೆಯನ್ನು ಮೊದಲಿನ ಯಥಾಸ್ಥಿತಿಯಲ್ಲಿಡುವಂತೆ ಸೂಚಿಸಲಾಯಿತು ಹಾಗೂ ಸದರಿ ರಸ್ತೆಯ ಬದಿಯಲ್ಲಿ ಬೀದಿಯ ವ್ಯಾಪಾರಿಗಳು ರಸ್ತೆಯಲ್ಲಿಯೇ ವ್ಯಾಪಾರ ನಡೆಸುತ್ತಿದ್ದು, ಸಾರ್ವಜನಿಕರಿಗೆ ಹಾಗೂ ವಾಹನ ಸವಾರರಿಗೆ ಸಂಚರಿಸಲು ತೊಂದರೆಯಾಗುತ್ತಿದ್ದು, ಸದರಿ ವ್ಯಾಪಾರಿಗಳಿಗೆ ಸೂಕ್ತ ಅಂಗಡಿಗಳನ್ನು ನಿರ್ಮಿಸಿಕೊಡಲು ಯಾವ ರೀತಿಯ ಕ್ರಮಕೈಗೊಂಡಿದ್ದೀರಿ ಎಂದು ಪಿ.ಎಂ.ಸಿ.ಯವರನ್ನು ಪ್ರಶ್ನಿಸಿದಾಗ ಯಾವುದೇ ಉತ್ತರ ನೀಡಿರುವುದಿಲ್ಲ. **ಆದ್ದರಿಂದ ಬೀದಿ ವ್ಯಾಪಾರಿಗಳಿಗೆ ಅಗತ್ಯವಿರುವ ಅಂಗಡಿಗಳನ್ನು ನಿರ್ಮಿತಿ ಕೇಂದ್ರದ ಮೂಲಕ ನಿರ್ಮಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಸ್ಮಾರ್ಟ್ ಸಿಟಿ ಅಧಿಕಾರಿಗಳಿಗೆ ಸೂಚಿಸಲಾಯಿತು.** ಪೈಪ್‌ಗಳನ್ನು ಈವರೆವಿಗೂ ಏಕೆ ಅಳವಡಿಸಿಲ್ಲ ಎಂದು ಗುತ್ತಿಗೆದಾರರನ್ನು ಪ್ರಶ್ನಿಸಿದಾಗ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ವತಿಯಿಂದ ಪೈಪ್‌ಲೈನನ್ನು ಇತ್ತೀಚೆಗೆ ಅಳವಡಿಸಿದ್ದು ಸದರಿ ಕೆಲಸ ಮುಗಿದ ನಂತರ ಪೈಪ್‌ಲೈನ್ ಅಳವಡಿಸುವುದಾಗಿ ಬೇಜವಾಬ್ದಾರಿಯಿಂದ ಉತ್ತರಿಸಿರುತ್ತಾರೆ. ಛೇಂಬರ್ ಕಾರ್ಯವು ಪೂರ್ಣಗೊಂಡು ಇಲ್ಲಿಯವರೆವಿಗೂ ಎಷ್ಟು ಸಮಯವಾಗಿದೆಯೆಂದು ಅಲ್ಲಿದ್ದ ಸ್ಥಳೀಯರೊಂದಿಗೆ ಚರ್ಚಿಸಿದಾಗ ಈಗಾಗಲೇ ಒಂದು ತಿಂಗಳಾಗಿದೆ ಎಂದು ತಿಳಿಸಿದ್ದು, ಅಷ್ಟು ಸಮಯವಾದರೂ ಸಹ ಪಾದಚಾರಿ ಮಾರ್ಗ ಹಾಗೂ ಡ್ರೈನ್ ನಿರ್ಮಿಸುವ ಕಾರ್ಯವನ್ನು ಪ್ರಾರಂಭಿಸಿರುವುದಿಲ್ಲ.

**ಈ ಎಲ್ಲಾ ಅಂಶಗಳನ್ನು ಗಮನದಲ್ಲಿಟ್ಟುಕೊಂಡು ಈ ರಸ್ತೆಗೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ಒಂದು ವಾರದ ಗಡುವನ್ನು ಅಂದರೆ ದಿನಾಂಕ: 20.10.2019 ರಿಂದ 27.10.2019ರೊಳಗೆ ಸಂಪೂರ್ಣ ರಸ್ತೆಯಲ್ಲಿರುವ ಮಣ್ಣಿನ ರಾಶಿಯನ್ನು ರೋಲರ್ ಯಂತ್ರದಿಂದ ಸಮಗೊಳಿಸಿ ಹಾಗೂ ಡ್ರೈನ್ ನಿರ್ಮಿಸುವ ಕಾರ್ಯವೂ ಸಹ ಪೂರ್ಣಗೊಳಿಸುವಂತೆ ಗುತ್ತಿಗೆದಾರರಿಗೆ ಸೂಚಿಸಲಾಯಿತು. ಇಲ್ಲವಾದಲ್ಲಿ ಕರಾರನ್ನು ಅಂತಿಮಗೊಳಿಸಲು ಟೆಂಡರ್ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ಸೂಚಿಸಲಾಯಿತು.** ಪ್ರಸ್ತುತ ಅಸ್ತಿತ್ವದಲ್ಲಿರುವ ಡ್ರೈನ್‌ಗಳ ಮೇಲೆ ಬೀದಿ ವ್ಯಾಪಾರಿಗಳು ಅಂಗಡಿಗಳನ್ನು ಇಟ್ಟುಕೊಂಡಿದ್ದು, ಏಕಕಾಲದಲ್ಲಿ ಇವರನ್ನೆಲ್ಲಾ ಮನವೊಲಿಸಿ ಇನ್ನೆರಡು ದಿನಗಳಲ್ಲಿ ಅವರುಗಳನ್ನು ಬೇರೆಡೆ ಸ್ಥಳಾಂತರಿಸಲು ಸೂಕ್ತ ಕ್ರಮ ಕೈಗೊಳ್ಳುವಂತೆ ಪರಿಸರ ಅಭಿಯಂತರರು, ಮಹಾನಗರ ಪಾಲಿಕೆರವರಿಗೆ ಸೂಚಿಸಲಾಯಿತು.

**(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್**
**ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.)**

7. **ಸ್ಮಾರ್ಟ್‌ರೋಡ್ ಪ್ಯಾಕೇಜ್ 3ಬಿ (ಡಾ॥ ರಾಧಾಕೃಷ್ಣ ರಸ್ತೆ):-** ಈ ರಸ್ತೆಯಲ್ಲಿಯೂ ಸಹ ಮೇಲೆ ತಿಳಿಸಿರುವಂತೆ ಹಲವು ಲೋಪದೋಷಗಳು ಇರುವುದು ಕಂಡು ಬಂದಿರುತ್ತದೆ. ಸದರಿ ಸ್ಥಳದಲ್ಲಿ ಪೂರ್ಣ ಪ್ರಮಾಣದಲ್ಲಿ ಮಣ್ಣಿನ ರಾಶಿ ಕಂಡುಬಂದಿದ್ದು, ಈ ಕೂಡಲೇ ಮಣ್ಣನ್ನು ಸಮಗೊಳಿಸಲು 2 ರೋಲರ್‌ಗಳನ್ನು ತರಿಸಿ ಉದ್ದೇಶಿತ ಸಾಂದ್ರತೆಗೆ Compaction ಮಾಡಲು ಸೂಚಿಸಲಾಯಿತು. **ಹಾಗೆಯೇ ಇದಕ್ಕೆ ಸಂಬಂಧಪಟ್ಟ ಗುತ್ತಿಗೆದಾರರಿಗೆ ದಿನಾಂಕ: 19.10.2019 ರಿಂದ 26.10.2019 ರೊಳಗಾಗಿ ಸಂಪೂರ್ಣ ಒಂದು ಭಾಗದ ರಸ್ತೆಯಲ್ಲಿ ಛೇಂಬರ್‌ಗಳು, ಪೈಪ್‌ಲೈನ್ ಅಳವಡಿಕೆ, ಡ್ರೈನ್ ನಿರ್ಮಾಣ ಹಾಗೂ ಪಾದಚಾರಿ ಮಾರ್ಗವನ್ನು**

ಪೂರ್ಣಗೊಳಿಸಲು ಸೂಚಿಸಲಾಯಿತು. ಇಲ್ಲವಾದಲ್ಲಿ ಕರಾರನ್ನು ಅಂತಿಮಗೊಳಿಸಲು ಟೆಂಡರ್ ನಿಯಮಾವಳಿಗಳ ಪ್ರಕಾರ ಕ್ರಮವಹಿಸಲು ಸೂಚಿಸಲಾಯಿತು.

(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.)








8. **ಅಮಾನಿಕೆರೆ ಅಭಿವೃದ್ಧಿ :-** ಈ ಕಾಮಗಾರಿಯನ್ನು ಈಗಾಗಲೇ ಹಲವಾರು ಬಾರಿ ವೀಕ್ಷಿಸಿದ್ದು, ದಿನಾಂಕ: 07.09.2019ರಂದು ನೋಡಿದ ದಿನಕ್ಕೂ ಈ ದಿನ ನೋಡಿದ್ದಕ್ಕೂ ಯಾವುದೇ ಬದಲಾವಣೆಯಾಗಿರುವುದಿಲ್ಲ. ಹಾಗೆಯೇ ಅಮಾನಿಕೆರೆಯಲ್ಲಿ ಹಸಿರೀಕರಣ ಗಮನದಲ್ಲಿಟ್ಟುಕೊಂಡು Landscaping ಮಾಡಲು ಈಗಾಗಲೇ ತೋಟಗಾರಿಕೆ ಇಲಾಖೆಯವರಿಗೆ ಸೂಚಿಸಲಾಗಿದ್ದು, ಅವರೂ ಸಹ ಕೆಲಸವನ್ನು ಪ್ರಾರಂಭಿಸಿರುವುದಿಲ್ಲ. **ಆದ್ದರಿಂದ ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ಈ ಕೂಡಲೇ ಕೆಲಸ ಪ್ರಾರಂಭಿಸಿ Landscaping ಮಾಡಲು ಸೂಚಿಸಲಾಯಿತು.**

ಈ ಮೇಲ್ಕಂಡ ಎಲ್ಲಾ ಕಾಮಗಾರಿಗಳ ವೀಕ್ಷಣೆಯಿಂದಾಗಿ ಸ್ಮಾರ್ಟ್‌ಸಿಟಿ ಅಧಿಕಾರಿಗಳು, ಪಿ.ಎಂ.ಸಿ ಸಿಬ್ಬಂದಿ ವರ್ಗದವರು ಹಾಗೂ ಗುತ್ತಿಗೆದಾರರು ಕೆಲಸ ನಿರ್ವಹಿಸುತ್ತಿರುವದನ್ನು ಗಮನಿಸಿದಾಗ ವ್ಯವಸ್ಥಿತವಾಗಿರುವುದಿಲ್ಲ. ಇದರಿಂದ ತೀರ್ವ ಬೇಸರವಾಗಿರುತ್ತದೆ, ಇದೇ ರೀತಿ ಇವರುಗಳು ಕೆಲಸ ನಿರ್ವಹಿಸಿದಲ್ಲಿ ಸಾರ್ವಜನಿಕರು ಹಾಗೂ ಮಾಧ್ಯಮದವರ ಕೆಂಗಣ್ಣಿಗೆ ಗುರಿಯಾಗುತ್ತೇವೆ. **ಆದ್ದರಿಂದ ಈ ಮೇಲ್ಕಂಡ ಆದೇಶಗಳನ್ನು ಸಂಬಂಧಪಟ್ಟ ಗುತ್ತಿಗೆದಾರರು ನಿಗಧಿತ ಸಮಯದಲ್ಲಿ ಪೂರ್ಣಗೊಳಿಸದೇ ವಿಫಲರಾದಲ್ಲಿ ಅಂತಹವರ ಕರಾರನ್ನು ಅಂತಿಮಗೊಳಿಸುವ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳಲು ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್ ಇವರಿಗೆ ಸೂಚಿಸಲಾಯಿತು ಹಾಗೂ ಗುತ್ತಿಗೆದಾರರು**

ಸರಿಯಾಗಿ ಕೆಲಸ ನಿರ್ವಹಿಸುವ ಬಗ್ಗೆ ಯೋಜನಾ ನಿರ್ವಹಣಾ ಸಲಹೆಗಾರರ (ಪಿ.ಎಂ.ಸಿ.) ರವರು ಅವಗಾಹಿಸಬೇಕು. ಅವರೂ ಸಹ ವಿಫಲರಾದಲ್ಲಿ ಅವರುಗಳ ಮೇಲೂ ಸಹ ಶಿಸ್ತು ಕ್ರಮ ವಹಿಸಲಾಗುವುದೆಂದು ಸೂಚಿಸಲಾಯಿತು.

(ಕ್ರಮ: ವ್ಯವಸ್ಥಾಪಕ ನಿರ್ದೇಶಕರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್
ಕಾರ್ಯಪಾಲಕ ಅಭಿಯಂತರರು, ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.)







9. ನಂತರ ಬೆಳ್ಳಗ್ಗೆ 10.30 ಗಂಟೆಗೆ ಜಿಲ್ಲಾ ಪಂಚಾಯತ್ ಕಛೇರಿಯಲ್ಲಿ ಮಾನ್ಯ ಜಿಲ್ಲಾ ಉಸ್ತುವಾರಿ ಸಚಿವರ ಅಧ್ಯಕ್ಷತೆಯಲ್ಲಿ ನಡೆದ ಎರಡನೇ ವಾರ್ಷಿಕ ತ್ರೈಮಾಸಿಕ ಕೆ.ಡಿ.ಪಿ ಸಭೆಯಲ್ಲಿ ಪಾಲ್ಗೊಳ್ಳಾಯಿತು.

10. ಸಂಜೆ 04.00 ಗಂಟೆಗೆ ಬೆಂಗಳೂರಿಗೆ ಪ್ರಯಾಣ ಬೆಳೆಸಲಾಯಿತು.

ಗೌರವಗಳೊಂದಿಗೆ,

(ಡಾ. ಶಾಲಿನಿ ರಜನೀಶ್ ಭಾ.ಆ.ಸೇ)
ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು,
ಯೋಜನೆ, ಕಾರ್ಯಕ್ರಮ ಸಂಯೋಜನೆ ಹಾಗೂ
ಸಾಂಖ್ಯಿಕ ಇಲಾಖೆ ಮತ್ತು ತುಮಕೂರು ಜಿಲ್ಲಾ
ಉಸ್ತುವಾರಿ ಕಾರ್ಯದರ್ಶಿಗಳು ಮತ್ತು ಅಧ್ಯಕ್ಷರು,
ತುಮಕೂರು ಸ್ಮಾರ್ಟ್ ಸಿಟಿ ಲಿಮಿಟೆಡ್.

ರವರಿಗೆ,
**ಶ್ರೀ ವಿಜಯ್ ಭಾಸ್ಕರ್ ಟಿ ಎಂ** ಭಾ.ಆ.ಸೇ
ಸರ್ಕಾರದ ಮುಖ್ಯ ಕಾರ್ಯದರ್ಶಿಗಳು,
ಕರ್ನಾಟಕ ಸರ್ಕಾರ, ವಿಧಾನಸೌಧ,
ಬೆಂಗಳೂರು.

**ಲಗತ್ತು:** ದಿನಾಂಕ: 20.10.2019 ರ ಪ್ರವಾಸದ ಪತ್ರಿಕೆ ಪ್ರಕಟಣೆಯನ್ನು ಈ ಪತ್ರದೊಂದಿಗೆ ಲಗತ್ತಿಸಿದೆ.

## ರೈತ ಅಯ್ಯಪ್ಪ ಮಸ್ಕಿ ಜಮೀನಿಗೆ ಶಾಲಿನಿ ರಜನೀಶ್ ಭೇಟಿ



ಅಯ್ಯಪ್ಪ ಮಸ್ಕಿ ಜಮೀನಿನ ಬೆಳೆ ವೀಕ್ಷಣೆ ಮಾಡುತ್ತಿರುವ ರಾಜ್ಯ ಯೋಜನಾ ಕಾರ್ಯದರ್ಶಿ ಶಾಲಿನಿರಜನೀಶ್

### ಅಧಿಕಾರಿಗಳಿಂದ ಮಿಶ್ರ ಬೆಳೆಗಳ ವೀಕ್ಷಣೆ

- ಅಯ್ಯಪ್ಪ ಮಸ್ಕಿ, ಪ್ರಗತಿಪರ ರೈತ ಅಕ್ಕಿರಾಂಪುರ

---



## ಅಯ್ಯಪ್ಪ ಮಸ್ಕಿ ಅಳವಡಿಸಿರುವ ಕೃಷಿ ಪದ್ಧತಿ ವಿಸ್ತರಿಸಬೇಕಿದೆ

### ಅಯ್ಯಪ್ಪ ಮಸ್ಕಿ ಕೃಷಿ ತೋಟಕ್ಕೆ ಶಾಲಿನಿ ರಜನೀಶ್ ಭೇಟಿ



### ಸರ್ಕಾರಕ್ಕೆ ವರದಿ ಸಲ್ಲಿಸಲು ಇಒಗೆ ಸೂಚನೆ

---



ಸ್ಮಾರ್ಟ್ ಸಿಟಿ ಕಾಮಗಾರಿಗಳ ಪರಿಶೀಲನೆ ನಡೆಸಿದ ಶಾಲಿನಿ ರಜನೀಶ್

## ಹಲವೆಡೆ ಸಿಡಿಮಿಡಿ, ಮೌನ ವ್ಯಕ್ತಪಡಿಸಿ ವಾಪಸ್



### ನಾಮಕಾವಾಸ್ತೆ ಪರಿಶೀಲನೆಯೆ...?

Edition
20 Oct, 2019 Page No. 1
Powered by : eReleGo.com

---



## ಹಲವೆಡೆ ಸಿಡಿಮಿಡಿ, ಮೌನ ವ್ಯಕ್ತಪಡಿಸಿ ವಾಪಸ್



Edition
20 Oct, 2019 Page No. 7
Powered by : eReleGo.com

---



ಕಾಮಗಾರಿಗಳ ವೀಕ್ಷಣೆ

## ಗುತ್ತಿಗೆ ಕರಾರು ಒಪ್ಪಂದದ ಅಂತಿಮಕ್ಕೆ ಶಾಲಿನಿ ರಜನೀಶ್ ಸೂಚನೆ



---

## ಉಡಾಫೆ ಗುತ್ತಿಗೆದಾರರ ಚಳಿ ಬಿಡಿಸಿದ ಶಾಲಿನಿ ರಜನೀಶ್



ವಾರದಲ್ಲಿ ಕಾಮಗಾರಿ ಪೂರ್ಣಗೊಳ್ಳದಿದ್ದಲ್ಲಿ ಗುತ್ತಿಗೆದಾರರ ಕರಾರು ರದ್ದು: ರಜನೀಶ್ ಎಚ್ಚರಿಕೆ

## ಮಂದಗತಿಯಲ್ಲಿ ಸ್ಮಾರ್ಟ್‌ಸಿಟಿ ಕಾಮಗಾರಿ



---



## ಕಾಮಗಾರಿ ಶೀಘ್ರ ಮುಗಿಸದಿದ್ದರೆ ಗುತ್ತಿಗೆ ರದ್ದು

ಗುತ್ತಿಗೆದಾರರಿಗೆ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್ ಎಚ್ಚರಿಕೆ



---



ಜಿಲ್ಲಾ ಉಸ್ತುವಾರಿ ಸಚಿವ ಜೆ.ಸಿ.ಮಾಧುಸ್ವಾಮಿ ನೇತೃತ್ವದಲ್ಲಿ ನಡೆದ ಪ್ರಗತಿ ಪರಿಶೀಲನಾ ಸಭೆ

## ಆಮೆ ವೇಗದ ಕೆಲಸ: ಶಾಸಕರ ಸಿಡಿಮಿಡಿ





### ಗಂಡು ಹುಟ್ಟಿದ್ರೆ ₹ 15 ಸಾವಿರ

### 'ಸಂಬಳಕ್ಕೆ ಶಿಕ್ಷಕರು ಲಂಚ ಕೊಡಬೇಕು'

---



## ಕುಣಿಗಲ್ ಎಕ್ಸ್‌ಪ್ರೆಸ್ ಕೆನಾಲ್ ರದ್ದು

600 ಕೋಟಿ ರೂ. ಹೇಮಾವತಿ ನಾಲೆಗೆ ವರ್ಗಾವಣೆ:ಜೆಸಿಎಂ



Edition
20 Oct, 2019 Page No. 1
Powered by : eReleGo.com

---



ಜಿಪಂ ಕೆಡಿಪಿ ಸಭೆಯಲ್ಲಿ ಸಚಿವ ಮಾಧುಸ್ವಾಮಿ ಪ್ರಕಟ

## ವೇಳಾಪಟ್ಟಿ ಪ್ರಕಾರ ಕುಡಿವ ನೀರು



ಜಿಪಂ ಸಭಾಂಗಣದಲ್ಲಿ ನಡೆದ ಕೆಡಿಪಿ ಸಭೆಯಲ್ಲಿ ಸಚಿವ ಮಾಧುಸ್ವಾಮಿ ಮಾತನಾಡಿದರು.

### ಕುಣಿಗಲ್ ಎಕ್ಸ್‌ಪ್ರೆಸ್ ಕಾಲುವೆ ಯೋಜನೆ ರದ್ದು

---



## ಕೆರೆಗಳಿಗೆ ವೇಳಾಪಟ್ಟಿಯಂತೆ ನೀರು ಪೂರೈಕೆ

ಕೆಡಿಪಿ ಸಭೆಯಲ್ಲಿ ಸಚಿವ ಜೆ.ಸಿ.ಮಾಧುಸ್ವಾಮಿ ಭರವಸೆ | ಹೇಮ ಜಲಾಶಯದಲ್ಲಿ ಸಾಕಷ್ಟು ಪ್ರಮಾಣದ ನೀರು ಸಂಗ್ರಹ



### ನಿರ್ಮಾಣ ಹಂತದಲ್ಲಿ 25 ಸಾವಿರ ಮನೆಗಳು

### 2,81,577 ಹೆಕ್ಟೇರ್ ಪ್ರದೇಶದಲ್ಲಿ ಬಿತ್ತನೆ

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯಿಂದ ಪ್ರತಿ ತಿಂಗಳು ಸರ್ಕಾರದ ಮುಖ್ಯ ಕಾರ್ಯದರ್ಶಿಗಳಿಗೆ ಸಲ್ಲಿಸಿಬೇಕಾದ ನಮೂನೆ

ವಿಜಯಪುರ ಜಿಲ್ಲೆ

| ಕ್ರ ಸಂ. | ಅಂಶಗಳು | ಕಾರ್ಯದರ್ಶಿಗಳ ಷರಾ |
|---|---|---|
| 1 | ಜಿಲ್ಲೆಯ ಹೆಸರು | ವಿಜಯಪುರ |
| 2 | ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಯ ಹೆಸರು | ಡಾ॥ ಜೆ. ರವಿಶಂಕರ್, ಭಾ.ಆ.ಸೇ., |
| 3 | ಭೇಟಿಯಾದ / ಪ್ರವಾಸದ ದಿನಾಂಕ | 24.10.2019 |
| 4 | ಮುಖ್ಯವಾಗಿ ಗಮನಿಸಿದ ಅಂಶಗಳು ಹಾಗೂ ಸಲಹೆಗಳು | **ಪ್ರವಾಹ ಪರಿಸ್ಥಿತಿ**<br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಮಾತನಾಡಿ, ಜಿಲ್ಲೆಯಲ್ಲಿ ಇತ್ತೀಚಿಗೆ ಆದ ಮಳೆ ಮತ್ತು ಡೋಣಿ ನದಿಯ ಪ್ರವಾಹದಿಂದ ಆಗಿರುವ ಹಾನಿಯ ಕುರಿತು ಮಾಹಿತಿ ನೀಡಲು ತಿಳಸಿದರು.<br><br>ಜಿಲ್ಲಾಧಿಕಾರಿಗಳವರು ಮಾತನಾಡಿ, ಜಿಲ್ಲೆಯಲ್ಲಿ ದಿನಾಂಕ: 19/10/2019 ರಿಂದ 21/10/2019ರ ವರೆಗೆ ಉತ್ತಮವಾದ ಮಳೆಯಾಗಿದ್ದು, ಆದರೆ ಡೋಣಿ ನದಿಯ ಮೇಲ್ಭಾಗದ ಪ್ರದೇಶದಲ್ಲಿ ಉತ್ತಮ ಮಳೆಯಾಗಿರುವುದರಿಂದ ಡೋಣಿ ನದಿಗೆ ಪ್ರವಾಹ ಬಂದಿರುತ್ತದೆ.<br><br>ಮಹಾರಾಷ್ಟ್ರದ ಉಜನಿ ಜಲಾಶಯದಿಂದ ಹೆಚ್ಚುವರಿ ನೀರನ್ನು ಹೊರಗೆ ಬಿಟ್ಟಿರುವುದರಿಂದ ಹಾಗೂ ಅಫಜಲಪೂರ ತಾಲೂಕಿನ ಸೊನ್ನ ಬ್ಯಾರೇಜಿನ ಹಿನ್ನೀರಿನಿಂದಾಗಿ ಸಿಂದಗಿ ತಾಲೂಕಿನ ತಾರಾಪೂರ ಗ್ರಾಮದ ಸಂಪರ್ಕ ರಸ್ತೆಯ ಮೇಲೆ 2-3 ಅಡಿ ನೀರು ನಿಂತಿದ್ದು, ಸಧ್ಯಕ್ಕೆ ಗ್ರಾಮಸ್ಥರಿಗೆ ಯಾವುದೇ ತೊಂದರೆ ಇರುವುದಿಲ್ಲ ಎಂದು ಸಭೆಗೆ ಮಾಹಿತಿ ನೀಡಿದರು.<br><br>ಮಳೆಯಿಂದಾಗಿ ಜಿಲ್ಲೆಯಲ್ಲಿ ಒಟ್ಟು 299 ಮನೆಗಳು ಹಾನಿಗೊಳಗಾಗಿದ್ದು, ಕಂದಾಯ, ಗ್ರಾಮೀಣ ಅಭಿವೃದ್ಧಿ ಮತ್ತು ತಾಂತ್ರಿಕ ಅಧಿಕಾರಿಗಳ ತಂಡವನ್ನು ರಚಿಸಿ ಸರ್ವೆ ಕಾರ್ಯ ಕೈಕೊಳ್ಳಲು ತಹಶೀಲ್ದಾರರಿಗೆ ಸೂಚಿಸಲಾಗಿದೆ. ನಂತರ ಸಮೀಕ್ಷಾ ತಂಡದ ವರದಿಯನ್ನು ಆಧರಿಸಿ ಎಸ್.ಡಿ.ಆರ್.ಎಫ್./ ಎನ್.ಡಿ.ಆರ್.ಎಫ್. ರ ಮಾರ್ಗಸೂಚಿಯ ಅನುಸಾರ ಅಥವಾ ಸರ್ಕಾರವು ಈ ಕುರಿತು ನೀಡುವ ಆದೇಶಗಳಿಗೆ ಅನುಸಾರವಾಗಿ ಸಂತ್ರಸ್ತರಿಗೆ ಪರಿಹಾರಧನವನ್ನು ವಿತರಿಸಲಾಗುವುದು. ಹಾಗೂ ಮಾಹೆ ಅಗಸ್ಟ್‌ನಲ್ಲಿ ಸಂಭವಿಸಿದ ಪ್ರವಾಹದಿಂದ ಹಾನಿಗೀಡಾದ "ಸಿ" ದರ್ಜೆಯ ಮನೆಗಳಿಗೆ ಈಗಾಗಲೇ ರೂ.25,000/- ಪರಿಹಾರಧನವನ್ನು ವಿತರಿಸಲಾಗಿದ್ದು, ಸರ್ಕಾರದ ಇತ್ತೀಚಿನ ಆದೇಶದ ಮೇರೆಗೆ ಹೆಚ್ಚುವರಿಯಾಗಿ ರೂ.25,000/- ಪರಿಹಾರಧನವನ್ನು ವಿತರಿಸುವ ಕುರಿತು ಕ್ರಮ ಜರುಗಿಸಲಾಗಿದೆ ಎಂದು ಸಭೆಗೆ ಮಾಹಿತಿ ನೀಡಿದರು.<br><br>ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಮಾತನಾಡಿ ಇತ್ತೀಚಿನ ಮಳೆಯಿಂದ ಹಾನಿಗೀಡಾಗಿರುವ ಮನೆಗಳ ಸಮೀಕ್ಷಾ ಕಾರ್ಯವನ್ನು ಕೂಡಲೇ |

ಪೂರ್ಣಗೊಳಿಸಲು ಮತ್ತು "ಸಿ" ದರ್ಜೆಯ ಮನೆಗಳಿಗೆ ರೂ.25,000/- ಪರಿಹಾರಧನವನ್ನು ವಿತರಿಸಲು ಸೂಚಿಸಿದರು.

ಡೋಣಿ ನದಿಯ ಪ್ರವಾಹದಿಂದಾಗಿ ಜಿಲ್ಲೆಯಲ್ಲಿ ಒಟ್ಟು 4903 ಹೆಕ್ಟೇರ್‌ನಲ್ಲಿ ಬೆಳೆದಿರುವಂತೆ ಬೆಳೆಯು ನಾಶವಾಗಿದ್ದು ಕಂದಾಯ, ಕೃಷಿ ಮತ್ತು ತೋಟಗಾರಿಕಾ ಇಲಾಖಾ ಅಧಿಕಾರಿಗಳ ತಂಡವನ್ನು ರಚಿಸಿ ಸರ್ವೆ ಕಾರ್ಯ ಕೈಕೊಳ್ಳಲು, ಸಮೀಕ್ಷಾ ತಂಡದ ವರದಿಯ ಮೇರೆಗೆ ಬೆಳೆ ಹಾನಿ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲು ತಹಶೀಲ್ದಾರರಿಗೆ ಸೂಚಿಸಲಾಗಿದೆ ಎಂದು ತಿಳಿಸಿದರು.

ಸನ್ 2018-19ನೇ ಸಾಲಿನ ಹಿಂಗಾರು ಬೆಳೆಹಾನಿಯ ಮಾಹಿತಿಯನ್ನು ಪರಿಹಾರ ತಂತ್ರಾಂಶದಲ್ಲಿ ಪೂರ್ಣಪ್ರಮಾಣದಲ್ಲಿ ಅಳವಡಿಸಲಾಗಿದ್ದು 6109 ಭಾಗಶಃ ಎಂಟ್ರಿಗಳು ಬಾಕಿ ಉಳಿದಿದ್ದು, ಅವುಗಳನ್ನು ಪೂರ್ಣಗೊಳಿಸಲಾಗುವುದು ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಮಾತನಾಡಿ ಡೋಣಿ ನದಿಯ ಪ್ರವಾಹದಿಂದ ಹಾನಿಗೀಡಾದ ಬೆಳೆಗಳ ಹಾನಿಯ ವರದಿಯನ್ನು ಸಮೀಕ್ಷಾ ತಂಡದಿಂದ ಪೂರ್ಣಗೊಳಿಸಿ ಪರಿಹಾರ ತಂತ್ರಾಂಶದಲ್ಲಿ ಅಳವಡಿಸಲು ಸೂಚಿಸಿದರು.

<u>ಮಿನಿ ವಿಧಾನಸೌಧ</u>

ಜಿಲ್ಲೆಯಲ್ಲಿ ಒಟ್ಟು 7 ಹೊಸ ತಾಲೂಕುಗಳ ರಚನೆಯಾಗಿದ್ದು, ತಿಕೋಟಾ ಮತ್ತು ಬಬಲೇಶ್ವರ ತಾಲೂಕುಗಳ ಮಿನಿ ವಿಧಾನಸೌಧ ರಚನೆ ಕುರಿತು ಒಟ್ಟು ರೂ.10.00 ಕೋಟಿ ಮೊತ್ತಕ್ಕೆ ಮಂಜೂರಾತಿ ನೀಡಿದ್ದು, ಆದರೆ ಸದರ ಆದೇಶವನ್ನು ತಡೆ ಹಿಡಿಯಲಾಗಿದೆ ಹಾಗೂ ಚಡಚಣ ತಾಲೂಕಿನ ಮಿನಿ ವಿಧಾನಸೌಧ ನಿರ್ಮಾಣದ ಕುರಿತು ನಗರದ ಸಮೀಪದಲ್ಲಿ ಯಾವುದೇ ಸ್ಥಳದ ಅಲಭ್ಯತೆ ಇರುವುದರಿಂದ ಲೋಕೋಪಯೋಗಿ ಇಲಾಖೆಯ ಸ್ಥಳದಲ್ಲಿ ನಿರ್ಮಿಸುವ ಕುರಿತು ಪರಿಶೀಲಿಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳವರು ಮಾತನಾಡಿ ಲೋಕೋಪಯೋಗಿ ಇಲಾಖೆಯ ಸ್ಥಳವು ಯೋಗ್ಯವಾಗಿದ್ದಲ್ಲಿ ಮಿನಿ ವಿಧಾನಸೌಧ ನಿರ್ಮಾಣದ ಕುರಿತು ಪ್ರಸ್ತಾವನೆಯನ್ನು ತಯಾರಿಸಿ ಸಲ್ಲಿಸಲು ಸೂಚಿಸಿದರು.

**(ಡಾ|| ಜೆ. ರವಿಶಂಕರ್, ಭಾ.ಆ.ಸೇ.)**
**ವ್ಯವಸ್ಥಾಪಕ ನಿರ್ದೇಶಕರು,**
**ಕ.ನ.ನೀ.ಸ ಮತ್ತು ಒ.ಚ ಮಂಡಳ, ಬೆಂಗಳೂರು**
**ಹಾಗೂ ಜಿಲ್ಲಾ ಉಸ್ತುವಾರಿ ಕಾರ್ಯದರ್ಶಿಗಳು,**
**ವಿಜಯಪುರ**